ಶುಕ್ರವಾರ, ಫೆಬ್ರುವರಿ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 35 | ಪುಟ 18

• www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಕೋವಿಡ್ ಮೂರನೇ ಅಲೆಯ ಕಾರಣದಿಂದ ಕಳೆಗುಂದಿದ್ದ ಚಿತ್ರಮಂದಿರಗಳಲ್ಲಿ ಫೆಬ್ರುವರಿ ಎರಡನೇ ವಾರದಿಂದ ಸಾಲು ಸಾಲು ಸಿನಿಮಾಗಳ ಹಬ್ಬ ಆರಂಭ.

ಆಳ-ಅಗಲ

ಚಳಿಗಾಲದ ಒಲಿಂಪಿಕ್ಸ್‌ಗೆ ವಿವಾದದ ಬಿಸಿ

ಪಿಯು ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ? 10

ದ್ವಿತೀಯ ಪಿಯು ಪ್ರಶ್ನೆಪತ್ರಿಕೆ: 'ಆಯ್ಕೆ'ಗೆ ಅವಕಾಶ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,788	17,560	₹49,580 (ಬೆಂಗಳೂರು)	₹62,300 (ಬೆಂಗಳೂರು)	74.88



* In clinical evaluations with self-test users, the Panbio™ COVID-19 Antigen Self-Test correctly identified 100% of SARS-CoV-2 negative samples and 95.2% of SARS-CoV-2 positive samples.
*Disclaimer- If symptoms continue and the rapid antigen test results are negative, individuals should immediately be tested by RT-PCR per ICMR Advisory, as the coronavirus may not be detectable in the very early phases of infection. Person undergoing test are advised to continue following local guidelines for self-isolation and consult your doctor. COL-10363 01/22
© 2022 Abbott. All rights reserved. All trademarks referenced are trademarks of either the Abbott group of companies or their respective owners. Any photos displayed are for illustrative purposes only. Any person depicted in such photos is a model.

ಕೇಸರಿ ಶಾಲು ಧರಿಸಿ ಜೈಶ್ರೀರಾಮ್ ಘೋಷಣೆ ಕೂಗಿದ ಭಂಡಾರ್‌ಕಾರ್ಸ್ ವಿದ್ಯಾರ್ಥಿಗಳು

ಹಿಜಾಬ್ ಧರಿಸಿದವರಿಗೆ 'ಗೇಟ್ ಬಂದ್'

ಪ್ರಜಾವಾಣಿ ವಾರ್ತೆ

ಕುಂದಾಪುರ (ಉಡುಪಿ ಜಿಲ್ಲೆ): ಕುಂದಾಪುರದ ಸರ್ಕಾರಿ ಜೂನಿಯರ್ ಕಾಲೇಜಿಗೆ ಹಿಜಾಬ್ ಧರಿಸಿ ಬಂದ ಮುಸ್ಲಿಂ ವಿದ್ಯಾರ್ಥಿನಿಯರಿಗೆ ಪ್ರವೇಶ ನಿರಾಕರಿಸಿದ ಘಟನೆ ಗುರುವಾರ ನಡೆಯಿತು.

ಇದಕ್ಕೆ ಪ್ರತಿಯಾಗಿ ಇದೇ ಊರಿನ ಭಂಡಾರ್‌ಕಾರ್ಸ್ ಕಾಲೇಜಿನ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜಿಗೆ ಬಂದಾಗ ಅವರನ್ನೂ ಗೇಟ್‌ನಲ್ಲಿ ತಡೆಯಲಾಯಿತು. ಶಾಲು ತೆಗೆದ ಬಳಿಕ ಅವರನ್ನು ಒಳಗೆ ಬಿಡಲಾಯಿತು.

ಸರ್ಕಾರಿ ಜೂನಿಯರ್ ಕಾಲೇಜಿನ 26 ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬಂದಾಗ ಅವರನ್ನು ಪ್ರಾಂಶುಪಾಲ ಬಿ.ಜಿ. ರಾಮಕೃಷ್ಣ ಗೇಟ್‌ನಲ್ಲೇ ತಡೆದರು. 'ಹಿಜಾಬ್ ಧರಿಸಿ ಕಾಲೇಜಿನೊಳಗೆ ಬರುವಂತಿಲ್ಲ' ಎಂದು ಸೂಚನೆ ನೀಡಿದರು. ಪ್ರಾಂಶುಪಾಲರೊಂದಿಗೆ ವಿದ್ಯಾರ್ಥಿನಿಯರು ವಾಗ್ವಾದಕ್ಕಿಳಿದರು. ಬಳಿಕ ಕಾಲೇಜಿಗೆ ಪ್ರವೇಶ ನೀಡುವಂತೆ ಪರಿ ಪರಿಯಾಗಿ ಬೇಡಿಕೊಂಡು ಕಣ್ಣೀರು ಹಾಕಿದರು.

'ಕಾಲೇಜಿನಲ್ಲಿ ವಸ್ತ್ರ ಸಂಹಿತೆ ಪಾಲಿಸುವಂತೆ ಸರ್ಕಾರ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ. ಶಾಸಕರ ಸಭೆಯಲ್ಲೂ ಈ ನಿರ್ಣಯ ಕೈಗೊಳ್ಳಲಾಗಿದೆ' ಎಂದು ಪ್ರಾಂಶುಪಾಲರು ಹೇಳಿದರು.

10ನೇ ಪುಟ ನೋಡಿ

ಕುಂದಾಪುರದ ಸರ್ಕಾರಿ ಜೂನಿಯರ್ ಕಾಲೇಜಿಗೆ ಹಿಜಾಬ್ ಧರಿಸಿ ಬಂದ ಮುಸ್ಲಿಂ ವಿದ್ಯಾರ್ಥಿನಿಯರನ್ನು ಗೇಟ್‌ನಲ್ಲಿಯೇ ತಡೆದು ಪ್ರವೇಶ ನಿರಾಕರಿಸಲಾಯಿತು

ಬೇಟಿ ಬಚಾವೊ ಬೇಟಿ ಪಡಾವೊ ಎಂಬುದು ಬಿಜೆಪಿ ಸರ್ಕಾರದ ಮತ್ತೊಂದು ಪೊಳ್ಳು ಘೋಷಣೆ. ಕರ್ನಾಟಕದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳಿಗೆ ಅವರ ಉಡುಪಿನ (ಹಿಜಾಬ್) ಕಾರಣದಿಂದ ಶಿಕ್ಷಣವನ್ನು ನಿರಾಕರಿಸಲಾಗುತ್ತಿದೆ. ಇದು ಗಾಂಧಿ ಭಾರತವನ್ನು ಗೋಡ್ಸೆ ಭಾರತವನ್ನಾಗಿ ಪರಿವರ್ತಿಸುವ ಇನ್ನೊಂದು ಹೆಜ್ಜೆ

ಮೆಹಬೂಬಾ ಮುಫ್ತಿ
ಕಾಶ್ಮೀರದ ಪೀಪಲ್ಸ್ ಡೆಮಾಕ್ರಟಿಕ್ ಪಕ್ಷದ ಅಧ್ಯಕ್ಷೆ

ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಉಡುಪಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನಲ್ಲಿ ಮುಸ್ಲಿಂ ವಿದ್ಯಾರ್ಥಿಗಳಿಗೆ ಹಿಜಾಬ್ (ಶಿರವಸ್ತ್ರ) ಧರಿಸುವುದಕ್ಕೆ ನಿರ್ಬಂಧ ವಿಧಿಸಿರುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

10ನೇ ಪುಟ ನೋಡಿ

'ಕೇಸರಿ ಶಾಲು, ಹಿಜಾಬ್ ಧರಿಸಲು ಅವಕಾಶ ಇಲ್ಲ'

ಬೆಂಗಳೂರು: 'ಶಿಕ್ಷಣ ಸಂಸ್ಥೆಗಳಲ್ಲಿ ನಿಗದಿಪಡಿಸಿರುವ ಸಮವಸ್ತ್ರ ಹೊರತುಪಡಿಸಿ ಕೇಸರಿ ಶಾಲು, ಹಿಜಾಬ್ ಧರಿಸಲು ಅವಕಾಶ ಇಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಶಿಕ್ಷಣ ಸಂಸ್ಥೆಗಳಲ್ಲಿ ವಿವಾದ ಬೇಡ. ಮತೀಯತೆ ಬಿಟ್ಟು ವಿಶಾಲ ಮನೋಭಾವ ಇರಬೇಕು. ಶಿಕ್ಷಣ ಸಂಸ್ಥೆಗಳಲ್ಲಿ ಸಮವಸ್ತ್ರ ಕಡ್ಡಾಯವೇ ಹೊರತು ಬೇರೇನೂ ಅಲ್ಲ' ಎಂದರು.

'ಶಿಕ್ಷಣ ಸಂಸ್ಥೆಯಲ್ಲಿ ಧರ್ಮ, ಜಾತಿ ಮೀರಿ ಎಲ್ಲರೂ ಒಂದೇ ಎಂಬ ಭಾವನೆ, ಭಾರತ ಮಾತೆಯ ಮಕ್ಕಳು ಎಂಬ ರಾಷ್ಟ್ರ ಪ್ರೇಮ ಇರಬೇಕು. ಪೂಜೆ, ಧಾರ್ಮಿಕ ಕಾರ್ಯಗಳು ದೇವಾಲಯ, ಮಸೀದಿಗೆ ಸೀಮಿತವಾಗಿ ಇರಲಿ' ಎಂದೂ ಹೇಳಿದರು.

ಗಾಲ್ವಾನ್ ಸಂಘರ್ಷ: ಚೀನಾದ ಕಡೆಯೇ ಅಧಿಕ ಸಾವು

ನದಿಯಲ್ಲಿ ಕೊಚ್ಚಿ ಹೋದವರೇ ಹೆಚ್ಚು: ಆಸ್ಟ್ರೇಲಿಯಾ ಪತ್ರಿಕೆ

ನವದೆಹಲಿ (ಪಿಟಿಐ): ಗಾಲ್ವಾನ್ ಕಣಿವೆಯಲ್ಲಿ ಭಾರತದ ಸೈನಿಕರೊಂದಿಗೆ 2020ರಲ್ಲಿ ನಡೆದ ಸಂಘರ್ಷದಲ್ಲಿ ಮೃತಪಟ್ಟ ಚೀನಾ ಸೈನಿಕರ ಸಂಖ್ಯೆ ವರದಿ ಆಗಿರುವುದಕ್ಕಿಂತಲೂ ಹೆಚ್ಚಿದೆ. ವೇಗವಾಗಿ ಹರಿಯುವ ನದಿಯನ್ನು ಕತ್ತಲೆಯಲ್ಲಿ ದಾಟುವ ಧಾವಂತದಲ್ಲಿಯೇ ಚೀನಾದ ಅನೇಕ ಸೈನಿಕರು ಕೊಚ್ಚಿ ಹೋಗಿದ್ದಾರೆ ಎಂದು ಆಸ್ಟ್ರೇಲಿಯಾದ 'ದಿ ಕ್ಲಾಕ್ಸನ್' ಪತ್ರಿಕೆ ಬುಧವಾರ ವರದಿ ಮಾಡಿದೆ.

ಆದರೆ, ಚೀನಾ ಈ ವಿಚಾರವನ್ನು ಹೊರ ಜಗತ್ತಿಗೆ ಬಹಿರಂಗಪಡಿಸಿಲ್ಲ ಎಂದು ಈ ವರದಿಯಲ್ಲಿ ಹೇಳಲಾಗಿದೆ.

ಸಂಶೋಧಕರು ಮತ್ತು ಚೀನಾದ ಬ್ಲಾಗರ್‌ಗಳ ಸಂಶೋಧನೆಗಳನ್ನು ಉಲ್ಲೇಖಿಸಿ ಕ್ಲಾಕ್ಸನ್ 'ಗಾಲ್ವಾನ್ ಡಿಕೋಡೆಡ್' ಎಂಬ ಶೀರ್ಷಿಕೆಯಡಿ ಈ ವರದಿ ಪ್ರಕಟಿಸಿದೆ. ಮಾಹಿತಿ ಒದಗಿಸಿರುವವರ ಹೆಸರುಗಳನ್ನು ಭದ್ರತೆ ದೃಷ್ಟಿಯಿಂದ ಬಹಿರಂಗಪಡಿಸಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಚೀನಾದ ಬ್ಲಾಗರ್‌ಗಳೊಂದಿಗಿನ ಚರ್ಚೆಗಳು, ಚೀನಾ ನಾಗರಿಕರಿಂದ ಪಡೆದ ಮಾಹಿತಿ ಹಾಗೂ ಚೀನಾದ ಅಧಿಕಾರಿಗಳಿಂದ ಅಳಿಸಲ್ಪಟ್ಟ ಮಾಧ್ಯಮ ವರದಿಗಳನ್ನು ಒಳಗೊಂಡಂತೆ ಒಂದು ವರ್ಷ ನಡೆಸಿದ ತನಿಖೆಯನ್ನು ಆಧರಿಸಿ ವರದಿಯು ಸಿದ್ಧಪಡಿಸಲಾಗಿದೆ ಎಂದು 'ಕ್ಲಾಕ್ಸನ್' ಹೇಳಿಕೊಂಡಿದೆ.

ಮುಖ್ಯಾಂಶಗಳು

- ಚೀನಾದ 42ಕ್ಕಿಂತಲೂ ಅಧಿಕ ಸೈನಿಕರು ಸತ್ತಿರುವ ಶಂಕೆ
- ಚೀನಾದಿಂದಲೇ ದೊರೆತ ಮಾಹಿತಿ ಆಧರಿಸಿ ವರದಿ ಸಿದ್ಧ
- 'ದಿ ಕ್ಲಾಕ್ಸನ್' ಪತ್ರಿಕೆಯಿಂದ ಒಂದು ವರ್ಷದ ತನಿಖಾ ವರದಿ

'ಚೀನೀ ಸೈನಿಕರ ಸಾವು–ನೋವುಗಳು ಚೀನಾ ಒದಗಿಸಿರುವ ಅಧಿಕೃತ ಸಂಖ್ಯೆಗಿಂತಲೂ ಹೆಚ್ಚಿದೆ ಎಂಬ ವಾದಗಳು ಹೊಸದೇನಲ್ಲ. ಆದರೂ ಸಾಮಾಜಿಕ ಮಾಧ್ಯಮ ಸಂಶೋಧಕರ ಗುಂಪು ಒದಗಿಸಿದ ಪುರಾವೆಗಳ ಆಧಾರದ ಮೇಲೆ ಪ್ರಕಟಿಸಿರುವ ವರದಿಯು, ಚೀನಾದ ಮೃತ ಸೈನಿಕರ ಸಂಖ್ಯೆ ಅಧಿಕ ಎಂಬುದನ್ನು ಬೆಂಬಲಿಸುತ್ತದೆ' ಎಂದು ಪತ್ರಿಕೆ ಹೇಳಿಕೊಂಡಿದೆ. ಚೀನಾವು 42ಕ್ಕಿಂತ ಅಧಿಕ ಸೈನಿಕರನ್ನು ಆ ದಿನ ಕಳೆದುಕೊಂಡಿತ್ತು ಎಂದು ವರದಿ ಹೇಳಿದೆ.

2020ರ ಜೂನ್ 15 ರಂದು ಗಾಲ್ವಾನ್ ಕಣಿವೆಯಲ್ಲಿ ನಡೆದಿದ್ದ ಘರ್ಷಣೆಯ ನಂತರ ಪೂರ್ವ ಲಡಾಖ್ ಗಡಿ ಉದ್ವಿಗ್ನಗೊಂಡಿತ್ತು. ಭಾರತದ 20 ಸೈನಿಕರು ಘರ್ಷಣೆಯಲ್ಲಿ ಮೃತಪಟ್ಟಿದ್ದರು. ಇದು ನಾಲ್ಕು ದಶಕಗಳಲ್ಲಿ ಭಾರತ– ಚೀನಾ ನಡುವೆ ನಡೆದ ಅತ್ಯಂತ ಗಂಭೀರವಾದ ಸೇನಾ ಸಂಘರ್ಷ ಎಂದು ಗುರುತಿಸಿಕೊಂಡಿದೆ.

ಭಾರತೀಯ ಸೇನೆಯೊಂದಿಗಿನ ಘರ್ಷಣೆಯಲ್ಲಿ ಮಿಲಿಟರಿ ಅಧಿಕಾರಿ ಸೇರಿದಂತೆ ಐವರು ಸೈನಿಕರು ಮೃತಪಟ್ಟಿದ್ದಾರೆ ಎಂದು ಚೀನಾ ಅಧಿಕೃತವಾಗಿ ಒಪ್ಪಿಕೊಂಡಿತ್ತು. ಆದರೂ ಸಾವಿನ ಸಂಖ್ಯೆ ಹೆಚ್ಚು ಎಂಬ ವಾದ ವ್ಯಾಪಕವಾಗಿತ್ತು.

'ವಾಸ್ತವವಾಗಿ ಅಲ್ಲಿ ಏನಾಯಿತು, ಚಕಮಕಿಗೆ ಕಾರಣವೇನು ಎಂಬುದೂ ಸೇರಿದಂತೆ ಬಹಳಷ್ಟು ಸಂಗತಿಗಳನ್ನು ಬೀಜಿಂಗ್ ಮರೆಮಾಚಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈಗಲೂ ವಾಸ್ತವ ನಿಯಂತ್ರಣ ರೇಖೆಯ ಉದ್ದಕ್ಕೂ ಎರಡೂ ಕಡೆಯ ತಲಾ 50,000 ದಿಂದ 60,000 ಸೈನಿಕರು ಜಮಾಯಿಸಿದ್ದಾರೆ.

ಒಳ ಪುಟ

ಬಿಜೆಪಿ ಶಿಕ್ಷಿಸಲು 'ಮಿಷನ್ ಉತ್ತರ ಪ್ರದೇಶ' 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೆಆರ್‌ಡಿಸಿಎಲ್ ಕ್ರಮಕ್ಕೆ ಮುಖ್ಯಮಂತ್ರಿ ಅಸಮಾಧಾನ

ದಟ್ಟಣೆ ಕಾರಿಡಾರ್: ಮರು ಟೆಂಡರ್ ಕೂಡ ಸ್ಥಗಿತ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 12 ಅತಿ ದಟ್ಟಣೆ ಕಾರಿಡಾರ್ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಇತ್ತೀಚೆಗೆ ಮತ್ತೆ ಕರೆದಿರುವ ಅಲ್ಪಾವಧಿ ಮರು ಟೆಂಡರ್ ಪ್ರಕ್ರಿಯೆಯನ್ನೂ ಸ್ಥಗಿತಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ.

ಈ ಬಗ್ಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಬುಧವಾರ (ಫೆ.2) ಟಿಪ್ಪಣಿ ಕಳುಹಿಸಿರುವ ಲೋಕೋಪಯೋಗಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಬಿ.ಎಚ್. ಅನಿಲ್ ಕುಮಾರ್, 'ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೆಆರ್‌ಡಿಸಿಎಲ್ ನಿರ್ವಹಿಸುತ್ತಿರುವ ಈ ಕಾರಿಡಾರ್‌ಗಳ ಟೆಂಡರ್ ಬಗ್ಗೆಯೂ ಮುಖ್ಯಮಂತ್ರಿ ಪರಿಶೀಲಿಸಿದ್ದರು.'

5A ಪುಟ ನೋಡಿ

ಟೆಂಡರ್ ರದ್ದುಪಡಿಸುವುದಕ್ಕೆ ಸರ್ಕಾರ ನೀಡಿದ್ದ ಕಾರಣಗಳು

- ಗುತ್ತಿಗೆದಾರರು ಕಾಮಗಾರಿ ನಿರ್ವಹಿಸಿದ ಬಳಿಕ ಎರಡು ವರ್ಷಗಳು ಅದರ ನಿರ್ವಹಣೆಯನ್ನೂ ಮಾಡಬೇಕು. ಆದರೂ ಮೊದಲ ಎರಡು ವರ್ಷಗಳ ನಿರ್ವಹಣೆಗೆ ₹ 291 ಕೋಟಿ ವೆಚ್ಚ ನಿಗದಿಪಡಿಸಿದ್ದು ಸಮಂಜಸವಲ್ಲ.
- ಗುತ್ತಿಗೆದಾರ ಉದಯ್ ಶಿವಕುಮಾರ್ ₹ 60 ಕೋಟಿ ವೆಚ್ಚದ ಒಂದೂ ಕಾಮಗಾರಿಯನ್ನೂ ಕೈಗೊಂಡಿಲ್ಲ. ಕಾಮಗಾರಿ ಗುತ್ತಿಗೆ ನಿರ್ವಹಿಸುವವರು ₹ 80 ಕೋಟಿ ವೆಚ್ಚದ ಒಂದು ಕಾಮಗಾರಿಯನ್ನಾದರೂ ನಡೆಸಬೇಕೆಂಬ ಷರತ್ತಿರುವುದರಿಂದ ಅವರಿಗೆ ಕಾಮಗಾರಿಯ ಗುತ್ತಿಗೆ ನೀಡಿದ್ದು ಸರಿಯಲ್ಲ.
- ಕೆಆರ್‌ಡಿಸಿಎಲ್ ವಾಸ್ತವದಲ್ಲಿ 67 ಕಿ.ಮೀ ಉದ್ದದ ರಸ್ತೆಯನ್ನು ಮಾತ್ರ ಅಭಿವೃದ್ಧಿಪಡಿಸುತ್ತಿದ್ದರೂ ಟೆಂಡರ್‌ನಲ್ಲಿ 191 ಕಿ.ಮೀ ಉದ್ದದ ರಸ್ತೆ ಅಭಿವೃದ್ಧಿ ಎಂದು ತೋರಿಸಿದ್ದು ಸರಿಯಲ್ಲ.
- 53.42 ಕಿ.ಮೀ ಉದ್ದದ ರಸ್ತೆ ವೈಟ್‌ಟಾಪಿಂಗ್ ಆಗಿದ್ದರೂ ಅದಕ್ಕೆ ನಿರ್ವಹಣೆಗೆ ದುಬಾರಿ ವೆಚ್ಚವನ್ನು ನಿಗದಿಪಡಿಸಿದ್ದು ಸೂಕ್ತವಲ್ಲ.
- ಹೆಬ್ಬಾಳ– ಕೆ.ಆರ್.ಪುರ ನಡುವೆ ಮೆಟ್ರೊ ಕಾಮಗಾರಿ ನಡೆಯಬೇಕಿರುವುದರಿಂದ ಈ ಹಂತದಲ್ಲಿ ಕೆಆರ್‌ಡಿಸಿಎಲ್ ಈ ರಸ್ತೆಯ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳುವುದು ಸೂಕ್ತವಲ್ಲ.

ರಾಜ್ಯದಲ್ಲಿ ಉಲ್ಬಣಗೊಂಡ ಕ್ಯಾನ್ಸರ್ • ಆಸ್ಪತ್ರೆ ಚಿಕಿತ್ಸೆಗೆ ಅಡ್ಡಿಪಡಿಸಿದ ಕೋವಿಡ್

ಒಂದೇ ವರ್ಷದಲ್ಲಿ 78,381 ಮಂದಿಗೆ ಕ್ಯಾನ್ಸರ್

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಜನಸಂಖ್ಯೆ ಆಧಾರಿತ ಕ್ಯಾನ್ಸರ್ ದಾಖಲಾತಿ ಪ್ರಕಾರ 2021ರ ಒಂದೇ ಸಾಲಿನಲ್ಲಿ 78,381 ಹೊಸ ಪ್ರಕರಣಗಳು ಪತ್ತೆಯಾಗಿವೆ. ತಪಾಸಣೆ ಪ್ರಮಾಣ ಹೆಚ್ಚಿದಲ್ಲಿ ಈ ಸಂಖ್ಯೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಕ್ಯಾನ್ಸರ್ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

2020ರಲ್ಲಿ ಹೊಸ ಪ್ರಕರಣಗಳ ಸಂಖ್ಯೆ 70 ಸಾವಿರದಷ್ಟಿತ್ತು. ಆರೋಗ್ಯ ಇಲಾಖೆಯು ರಾಷ್ಟ್ರೀಯ ಕ್ಯಾನ್ಸರ್, ಮಧುಮೇಹ, ಹೃದ್ರೋಗ, ಪಾರ್ಶ್ವವಾಯು ನಿಯಂತ್ರಣ ಕಾರ್ಯಕ್ರಮದಡಿ (ಎನ್‌ಪಿಸಿಡಿಸಿಎಸ್) ಸಾಂಕ್ರಾಮಿಕವಲ್ಲದ ಕಾಯಿಲೆಗಳ ಬಗ್ಗೆ ಜಾಗೃತಿ ಮೂಡಿಸುತ್ತಿದೆ. 30 ವರ್ಷ ಮೇಲ್ಪಟ್ಟ ಎಲ್ಲ ವಯಸ್ಕರಿಗೂ ಪ್ರತಿ 5 ವರ್ಷಕ್ಕೆ ಒಂದು ಬಾರಿಯಂತೆ ಬಾಯಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್‌ಗೆ ತಪಾಸಣೆ ನಡೆಸಿ, ಚಿಕಿತ್ಸೆಗೆ ಒಳಪಡಿಸುತ್ತಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾನ್ಸರ್ ಪ್ರಕರಣಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಲು ಸಾಧ್ಯವಾಗುತ್ತಿತ್ತು. ಆದರೆ, ಕಳೆದ ಎರಡು ವರ್ಷಗಳಿಂದ ಈ ತಪಾಸಣೆ ಹಾಗೂ ಚಿಕಿತ್ಸೆಗೆ ಕೋವಿಡ್ ಅಡ್ಡಿಪಡಿಸಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಪುರುಷರಲ್ಲಿ ಹೆಚ್ಚಾಗಿ ಪ್ರಾಸ್ಟೇಟ್ , ಬಾಯಿ, ಜಠರ ಮತ್ತು ಅನ್ನನಾಳದ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಮಹಿಳೆಯರಲ್ಲಿ ಹೆಚ್ಚಿನವರು ಸ್ತನ ಕ್ಯಾನ್ಸರ್ ಎದುರಿಸುತ್ತಿದ್ದಾರೆ. ಅದೇ ರೀತಿ, ಗರ್ಭಕಂಠ ಮತ್ತು ಗರ್ಭಕೋಶದ ಕ್ಯಾನ್ಸರ್ ಸಹ ಇರುವುದು ದೃಢಪಡುತ್ತಿದೆ. ರಾಜ್ಯದಲ್ಲಿ ಸದ್ಯ 2.3 ಲಕ್ಷ ಸಕ್ರಿಯ ಕ್ಯಾನ್ಸರ್ ಪ್ರಕರಣಗಳಿವೆ ಎಂದು ಇಲಾಖೆ ಅಂದಾಜಿಸಿದೆ.

10ನೇ ಪುಟ ನೋಡಿ

ಕ್ಯಾನ್ಸರ್ ಗುಣಪಡಿಸಬಹುದಾದ ಕಾಯಿಲೆಯಾಗಿದೆ. ಇದರ ಬಗ್ಗೆ ಭಯವನ್ನು ಬಿಟ್ಟು, ತಪಾಸಣೆಗೆ ಒಳಪಡಬೇಕು. ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದಲ್ಲಿ ಚಿಕಿತ್ಸೆ ಸುಲಭ

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಆಸ್ಪತ್ರೆ ದಾಖಲಾತಿ ದಿಢೀರ್ ಹೆಚ್ಚಳ

ರಾಜ್ಯದಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಗೆ ಬರುವವರ ಸಂಖ್ಯೆ ಇಳಿಕೆ ಕಂಡಿತ್ತು. ಮೊದಲೆರಡು ಅಲೆಯಲ್ಲಿ ಸೋಂಕು ತೀವ್ರವಾಗಿ ಕಾಡಿದ್ದರಿಂದ ಸಂಸ್ಥೆಗೆ ಆ ವೇಳೆ ದಿನಕ್ಕೆ 250ರಿಂದ 400 ರೋಗಿಗಳು ಭೇಟಿ ನೀಡುತ್ತಿದ್ದರು. ಈಗ ಆ ಸಂಖ್ಯೆ 1,800ಕ್ಕೆ ಏರಿಕೆಯಾಗಿದೆ. ಸಂಸ್ಥೆಯಲ್ಲಿನ ಎಲ್ಲ 700 ಹಾಸಿಗೆಗಳೂ ಭರ್ತಿಯಾಗಿವೆ.

'ಕೋವಿಡ್ ಮೊದಲ ಮತ್ತು ಎರಡನೇ ಅಲೆಯ ಅವಧಿಯಲ್ಲಿ ಸಂಸ್ಥೆಗೆ ಬರುವ ರೋಗಿಗಳ ಸಂಖ್ಯೆ ಇಳಿಕೆಯಾಗಿತ್ತು. ಈ ಅವಧಿಯಲ್ಲಿ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳಲು ಗ್ರಾಮೀಣ ಪ್ರದೇಶದ ಜನರು ಅಷ್ಟಾಗಿ ಮುಂದೆ ಬರಲಿಲ್ಲ. ಈಗ ತಪಾಸಣೆಗೆ ಒಳಪಡುತ್ತಿರುವುದರಿಂದ ಹೊಸ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಪತ್ತೆಯಾಗುತ್ತಿವೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದರು.

ಕಿದ್ವಾಯಿಯಲ್ಲಿ ನೋಂದಣಿಯಾದ ಪ್ರಕರಣಗಳು

ವರ್ಷ	ಪ್ರಕರಣಗಳು
2016	17,035
2017	17,874
2018	18,990
2019	19,764
2020	13,973
2021	17,235

ವಿವಿಧೆಡೆ ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಶನಿವಾರ (ಫೆ.5) ಬೆಳಿಗ್ಗೆ 10.30ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಆವಲಹಳ್ಳಿ, ನಂದಿ ಗಾರ್ಡನ್ ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯ, ಅಂಜನಾಪುರ ಗ್ರಾಮ, ರಾಯಲ್ ಲೇಕ್ ಫ್ರಂಟ್ ವ್ಯೂ ರೆಸಿಡೆನ್ಸಿ, ಬ್ರೂಕ್ಸ್ ಬಡಾವಣೆ, 8 ನೇ ಹಂತ ಬಿಡಿಎ ಬಡಾವಣೆ, ರಾಯಲ್ ಕೌಂಟಿ ಬಡಾವಣೆ, ದೀಪಕ್ ಬಡಾವಣೆ, ವಡ್ಡರಪಾಳ್ಯ, ಆವಲಹಳ್ಳಿ ಕೊಳಗೇರಿ ಪ್ರದೇಶ, ಆವಲಹಳ್ಳಿ ಬಿಡಿಎ ಬಡಾವಣೆ, ಆವಲಹಳ್ಳಿ ಲಾ ಬ್ಯಾಂಕೌಟ್, ಆವಲಹಳ್ಳಿ ಅಧಿಕಾರಿಗಳ ಬಡಾವಣೆ 1ನೇ ಮತ್ತು 2ನೇ ಬ್ಲಾಕ್, ಬಿಸಿಸಿಎಚ್ ಬಡಾವಣೆ, ತಲಘಟ್ಟಪುರ, ಜುಡಿಶಿಯಲ್ ಬಡಾವಣೆ, ವಕೀಲ್ ಬಡಾವಣೆ, ವಾಜರಹಳ್ಳಿ, ಬನಶಂಕರಿ 6ನೇ ಹಂತದ ಫರ್.ಎಕ್ಸ್‌ಟಿಎನ್, ಶೋಭಾ ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯ, ಬನಶಂಕರಿ 8ನೇ ಹಂತದ ಬಿಡಿಎ ಬಡಾವಣೆ, ರಾಘವಪಾಳ್ಯ, ಗುಂಡು ತೋಪು ಮತ್ತು ಸುತ್ತಮುತ್ತಲಿನ ಪ್ರದೇಶಗಳು.

1000 ಕಡೆ ಉಚಿತ ವಿದ್ಯುತ್ ಚಾರ್ಜಿಂಗ್ ಕೇಂದ್ರ

ಬೆಂಗಳೂರು: ಎಸ್ಕಾಂ ಮತ್ತು ಮೆ.ಎಥರ್ ಎನರ್ಜಿ ಕಂಪನಿಗಳ ಸಹಭಾಗಿತ್ವದಲ್ಲಿ ರಾಜ್ಯದ 1,000 ಸ್ಥಳಗಳಲ್ಲಿ ದ್ವಿಚಕ್ರ ವಾಹನಗಳಿಗೆ ತ್ವರಿತ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಿವೆ. ಈ ಕೇಂದ್ರಗಳಲ್ಲಿ ಉಚಿತವಾಗಿ ಚಾರ್ಜಿಂಗ್ ಸೌಲಭ್ಯ ಸಿಗಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮುಖದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಎಥರ್ ಎನರ್ಜಿ ಮತ್ತು ಎಸ್ಕಾಂ ಮಧ್ಯದ ಒಪ್ಪಂದಕ್ಕೆ ಸಹಿ ಮಾಡಲಾಯಿತು.

ಚಾರ್ಜಿಂಗ್ ಸೌಲಭ್ಯಗಳಿಗೆ ಅಗತ್ಯ ತಾಂತ್ರಿಕ ಬೆಂಬಲವನ್ನು ಎಸ್ಕಾಂಗಳು ನೀಡಲಿದ್ದು, ಸರ್ಕಾರಿ ಸಂಸ್ಥೆಗಳು ಈ ಸೌಲಭ್ಯ ಸ್ಥಾಪನೆಗೆ ಸ್ಥಳಾವಕಾಶ ಒದಗಿಸಲು ಎಸ್ಕಾಂಗಳೊಂದಿಗೆ ಸಮನ್ವಯ ವಹಿಸಲಿವೆ. ಎಥರ್ ಎನರ್ಜಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ತರುಣ್ ಮೆಹ್ತಾ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಈ ಒಪ್ಪಂದಕ್ಕೆ ಸಹಿ ಮಾಡಿದರು. ಶಾಸಕ ಅರವಿಂದ ಬೆಲ್ಲದ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಿ.ಕುಮಾರನಾಯಕ್ ಇದ್ದರು.

‘ಇಬ್ರಾಹಿಂ ಎಲ್ಲೇ ಇದ್ರೂ ಸ್ನೇಹಿತ’

ಬೆಂಗಳೂರು: ‘ಸಿ.ಎಂ.ಇಬ್ರಾಹಿಂ ಎಲ್ಲೇ ಇದ್ರೂ ಸ್ನೇಹಿತ. ಪಕ್ಷ ಬಿಟ್ಟರೂ ನನ್ನ ಸ್ನೇಹಿತನೇ. ಕೋಪ ತಣಿದ ಮೇಲೆ ಅವನ ಮನೆಗೆ ಹೋಗಿ ಮಾತನಾಡುತ್ತೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಗುರುವಾರ ಹೇಳಿದ್ದಾರೆ.

‘ರಾಜಕೀಯ ಬೇರೆ ವೈಯಕ್ತಿಕ ಸ್ನೇಹ ಬೇರೆ. ಅವನು ಪಕ್ಷ ಬಿಡಲ್ಲ ಎಂಬ ವಿಶ್ವಾಸವಿದೆ. ಪೆನ್ನಾರ್-ಕಾವೇರಿ ನದಿ ಜೋಡಣೆಯಿಂದ ಸಾಕಷ್ಟು ಸಮಸ್ಯೆ ಆಗುತ್ತವೆ. ಆ ನದಿ ಜೋಡಣೆಗೆ ವಿರೋಧವಿದೆ. ಆ ವಿಚಾರವಾಗಿ ಮತ್ತು ಹಿಜಾಬ್ ವಿಷಯದ ಬಗ್ಗೆ ನಾಳೆ ಸುದೀರ್ಘವಾಗಿ ಮಾತನಾಡುತ್ತೇನೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಇಂದು

ವಿಶ್ವ ಕ್ಯಾನ್ಸರ್ ಜಾಗೃತಿ ದಿನದ ಪ್ರಯುಕ್ತ ಜಾಗೃತಿ ಅಭಿಯಾನ: ಚಾಲನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಡಾ.ಕೆ. ಸುಧಾಕರ್, ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಬಿಬಿಎಂಪಿ ಪದವಿಪೂರ್ವ ಕಾಲೇಜು ಮೈದಾನ, ಸುಬ್ರಹ್ಮಣ್ಯಪುರ ರಸ್ತೆ, ಉತ್ತರಹಳ್ಳಿ, ಬೆಳಿಗ್ಗೆ 10

‘ಕೋವಿಡ್ ಕಥೆಗಳು’ ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಬಿ.ಎಸ್. ಯಡಿಯೂರಪ್ಪ, ಅರ್ಪಣೆ: ಡಾ.ಸಿ.ಎನ್. ಮಂಜುನಾಥ್, ಪ್ರಾಸ್ತಾವಿಕ ನುಡಿ: ಕೆ.ಎನ್. ಚನ್ನೇಗೌಡ, ಮುಖ್ಯ ಅತಿಥಿಗಳು: ರವಿ ಹೆಗಡೆ, ಹರಿಪ್ರಕಾಶ್ ಕೋಣೆಮನೆ, ಸದಾಶಿವ ಶೆಣೈ, ಸೋಮ ಗೌಡ, ವಿಶೇಷ ಉಪಸ್ಥಿತಿ: ವಿಶ್ವೇಶ್ವರ ಭಟ್, ವೂಡೇ ಪಿ. ಕೃಷ್ಣ, ಎಚ್.ಬಿ. ದಿನೇಶ್, ಲೇಖಕ: ಶಿವಾನಂದ ತಗಡೂರು, ಆಯೋಜನೆ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬಹುರೂಪಿ, ಸ್ಥಳ: ಗಾಂಧಿಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಎಸ್.ಎಂ. ಕೃಷ್ಣ ಸಹೋದರಿ ಸುಶೀಲಮ್ಮ ನಿಧನ

ಬೆಂಗಳೂರು: ಬಿಜೆಪಿ ನಾಯಕ ಎಸ್.ಎಂ. ಕೃಷ್ಣ ಅವರ ಸಹೋದರಿ ಸುಶೀಲಮ್ಮ ಅವರು ನಗರದಲ್ಲಿ ಗುರುವಾರ ನಿಧನರಾದರು.



ಅವರಿಗೆ ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಹೆಬ್ಬಾಳದ ವಿದ್ಯುತ್ ಚಿತಾಗಾರದಲ್ಲಿ ಶುಕ್ರವಾರ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಫಡಣವೀಸ್ ಭೇಟಿಯಾದ ರಮೇಶ ಜಾರಕಿಹೊಳಿ

ಬೆಳಗಾವಿ: ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರು ಸಚಿವ ಸಂಪುಟದಲ್ಲಿ ತಮಗೆ ಮತ್ತೆ ಸ್ಥಾನ ಕಲ್ಪಿಸುವಂತೆ ಹೈಕಮಾಂಡ್‌ಗೆ ಮನವೊಲಿಸಬೇಕು ಎಂದು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಕೋರಿದ್ದಾರೆ.

ನೆರೆಯ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರದಲ್ಲಿ ತೊಡಗಿರುವ ಅವರು ದೇವೇಂದ್ರ ಫಡಣವೀಸ್ ಅವರನ್ನು ಗುರುವಾರ ಭೇಟಿಯಾಗಿ ಸಮಾಲೋಚನೆ ನಡೆಸಿದ್ದಾರೆ.

Employment Notification No: 04/2022 Date:03.02.2022

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500 028
CIN : L13100TG1958GOI001674

NMDC Limited, a Navaratna Public Sector Enterprise under the Ministry of Steel, Government of India and a multi locational, multi product and consistently profit making Mining & Mineral Exploration Organization with large turnover. NMDC Ltd is in the process of massive expansion and diversification both in India and abroad. NMDC Ltd is setting up a 3.0 MTPA Integrated Steel Plant at Nagarnar near Jagdalpur, Chhattisgarh State. NMDC Ltd is now inviting applications from eligible & willing candidates for the following posts to be deployed in Donimalai Complex in Karnataka State.

Sl.No.	Name of the post	No. of Vacancies
1.	Field Attendant (Trainee) (RS-01)	43
2.	Maintenance Assistant (Mech) (Trainee) (RS-02)	90
3.	Maintenance Assistant (Elect) (Trainee) (RS-02)	35
4.	MCO Gr-III (Trainee) (RS-04)	04
5.	HEM Mechanic Gr-III (Trainee) (RS-04)	10
6.	Electrician Gr-III (Trainee) (RS-04)	07
7.	Blaster Gr-II (Trainee) (RS-04)	02
8.	QCA Gr-III (Trainee) (RS-04)	09

For detailed notification regarding age, qualification, experience, scale of pay, reservation and other conditions etc, interested candidates may visit **“Careers”** page on NMDC website, www.nmdc.co.in and also in Employment News dated 12.02.2022.

CGM (Personnel)

Reliance Jewels
BE THE MOMENT

RNGVD22AB | RNGVD22AF | RNGVD22AC

25% ವರೆಗೆ ಕಡಿತ* ವಜ್ರದ ಆಭರಣಗಳ ಬಿಲ್ಲಿನ ಮೌಲ್ಯದ ಮೇಲೆ ಮತ್ತು ಚಿನ್ನದ ಆಭರಣಗಳ ತಯಾರಿಕೆಯ ಚಾರ್ಜುಗಳ ಮೇಲೆ
ಸೀಮಿತ ಅವಧಿಯ ಆಫರ್

FLOREO

ಪ್ರೀತಿಯನ್ನು ಬೆಳೆಸಲು ಬಯಸುವವರಿಗೆ ವ್ಯಾಲೆಂಟೈನ್ ದಿನದ ಆಭರಣ ಸಂಗ್ರಹಣೆ.

ಈಗ ಇಲ್ಲಿಯೂ ಲಭ್ಯ : www.reliancejewels.com

ಬೆಂಗಳೂರು: ಬನಶಂಕರಿ, ನಂ. 296, ರಾಮ್ ಟವರ್, 100 ಅಡಿ ರಿಂಗ್ ರೋಡ್, 3ನೇ ಸ್ಟೇಜ್, 4ನೇ ಫೇಸ್. ಫೋನ್ : 080-26793505/26793506 | **ಜಯನಗರ,** ನಂ. 18/35, 4ನೇ ಬ್ಲಾಕ್, 11ನೇ ಮೇನ್. ಫೋನ್: 080-41681803/08 | **ಕೋರಮಂಗಲ,** ನಂ. 612, 80 ಅಡಿ ರಸ್ತೆ, 4ನೇ ಬ್ಲಾಕ್, ಫೋನ್: 080-41244550 **ಮಲ್ಲೇಶ್ವರಮ್,** ಮೊದಲ ಮಹಡಿ, ಮಂತ್ರಿ ಸ್ಕ್ವೇರ್ ಮಾಲ್, ಸಂಪಿಗೆ ರಸ್ತೆ. ಫೋನ್ : 080-22667110 | **ಮಾರತಹಳ್ಳಿ,** ಚಾಯ್ ಪಾಯಿಂಟ್ ಪಕ್ಕ, ಔಟರ್ ರಿಂಗ್ ರೋಡ್. ಫೋನ್: 080-42072752

ನಮ್ಮನ್ನು ಇಲ್ಲಿ ಫಾಲೋ ಮಾಡಿರಿ:

AN OCEAN OF OPPORTUNITIES
AWAITS THE AMBITIOUS

JOIN INDIAN NAVY

Indian Navy invites online applications from unmarried men & women candidates, to join as Short Service Commission Officers.

Branch / Cadre	Educational Qualification	Vacancies	Born Between (Both Dates Inclusive)
SSC Executive (Information Technology)	Minimum 60% marks in English in class X or XII and must have qualified one of the undermentioned educational qualification with minimum 60% overall qualifying marks, in either or a combination of following:- (a) MSc / BE / B Tech / M Tech (Computer Science / Computer Science & Engineering / Computer Engineering / Information Technology / Software Systems / Cyber Security / System Administration & Networking / Computer Systems & Networking Data Analytics / Artificial Intelligence) or (b) MCA with BCA / BSc (Computer Science/ Information Technology)	50	02 Jul 1997 & 01 Jan 2003

Entry is open from 27 Jan 22.
The last date for submission of online application is 10 Feb 22.

For eligibility criteria and details, visit www.joinindiannavy.gov.in and Employment News dated 29 Jan 22.

Scan this QR Code to apply online

davp 10701/13/0019/2122

“ಆರೋಗ್ಯಪೂರ್ಣ ಉಸಿರಾಟವನ್ನು ಅಳವಡಿಸಿಕೊಳ್ಳುವುದು, ಸಾಕಷ್ಟು ನಿದ್ರೆ ಮಾಡುವುದು, ಸಮತೋಲಿತ ಹಾಗೂ ಪೌಷ್ಟಿಕ ಆಹಾರ ಸೇವಿಸುವುದು ಹಾಗೂ ನಿಯಮಿತವಾಗಿ ವ್ಯಾಯಾಮ ಮಾಡುವುದು, ಶ್ವಾಸಕೋಶದ ಕ್ಯಾನ್ಸರ್ ರೋಗನಿರ್ಣಯವಾದ ಮೇಲೂ ದೈಹಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಖಾತ್ರಿಪಡಿಸುವುದನ್ನು ಸ್ವಯಂ-ಕಾಳಜಿ ಎನ್ನುವರು.”

ಡಾ. ಆದಿತ್ಯ ಮುರಳಿ
ಮೆಡಿಕಲ್ ಆಂಕಾಲಜಿಸ್ಟ್,
ಬೆಂಗಳೂರು.

World Cancer Day 4 February | Close the care gap

ಶ್ವಾಸಕೋಶದ ಕ್ಯಾನ್ಸರ್‌ನ ಸ್ಕ್ರೀನಿಂಗ್ ಸಲುವಾಗಿ ನಿಮ್ಮ ವೈದ್ಯರೊಂದಿಗೆ ಸಮಾಲೋಚಿಸಿ!

Exercise During Cancer Treatment. https://www.cancer.net/survivorship/healthy-living/exercise-during-cancer-treatment. Accessed on 2nd Feb, 2022

Smoking is injurious to health
IN – 8777 Date of Approval: 27/1/22 Date of Expiry: 27/1/24
WCD 2022 logo & theme courtesy: https://www.worldcancerday.org/World Cancer Day is an initiative of the Union for International Cancer Control (UICC) © 2022 UICC | World Cancer Day. All rights reserved
Disclaimer: This public awareness initiative is supported by AstraZeneca Pharma India Limited.
AstraZeneca

Dabur ROGHAN BADAM SHIREEN®

ಡಾಬರ್ ರೋಗನ್ ಬಾದಾಮ್ ಶಿರೀನ್ ಜೊತೆಗೆ ಡಾಬರ್ ಹನಿ ಉಚಿತ!!

100% ಶುದ್ಧ ಬಾದಾಮ್ ತೈಲದ ಪ್ರಯೋಜನಗಳು

ಆರೋಗ್ಯಕರ ಮೆದುಳು | ಚಳಿಗಾಲದಲ್ಲಿ ಶರೀರವನ್ನು ಇರಿಸುತ್ತೆ ಬೆಚ್ಚಗೆ | ಬಲಿಷ್ಠ ಕೂದಲುಗಳು | ಕೋಮಲ ತ್ವಚೆ

ಉಚಿತ#
100g Dabur Honey
₹62* ಮೌಲ್ಯದ್ದು

ಡಾಬರ್ ಆರೋಗ್ಯ: ಡಾಕ್ಟರರೊಂದಿಗೆ ಶುಲ್ಕ ರಹಿತ ಸಮಾಲೋಚನೆಗಾಗಿ ಇಲ್ಲಿಗೆ ಕರೆ ಮಾಡಿ, 1800-103-1644 (ಶುಲ್ಕ-ರಹಿತ)

ಕೆಮ್ಮು? ಸೀನು? ಎದೆ ಬಿಗಿತ ಮತ್ತು ಉಸಿರಾಟದ ಸಮಸ್ಯೆಗಳಿಂದ ಬಳಲುತ್ತಿದ್ದೀರಾ?

Protects Lungs – Removes Cough · Makes Breathing Easy and Comfortable. Its Called Breath Plus.

Breath+

ತ್ವರಿತ ನಿವಾರಣೆಗಾಗಿ ಬಳಸಿರಿ **ಬ್ರೀದ್ ಪ್ಲಸ್**

- ದೀರ್ಘಕಾಲಿನ ಕೆಮ್ಮು ನಿವಾರಣೆಗೆ ಚಿಕಿತ್ಸೆ ನೀಡುವಲ್ಲಿ ಬಹು ಪರಿಣಾಮಕಾರಿ.
- ಹಿರಿಯ ನಾಗರಿಕರಲ್ಲಿ ಕೆಮ್ಮು ನಿವಾರಿಸಿ ಉತ್ತಮ ನಿದ್ರೆ ಒದಗಿಸುತ್ತದೆ ಮತ್ತು ಒತ್ತಡವನ್ನು ನಿವಾರಿಸುತ್ತದೆ.
- ಧೂಮಪಾನಿಗಳ ಕೆಮ್ಮು ನಿವಾರಣೆಗೂ ಉತ್ತಮ.
- ಶ್ವಾಸಕೋಶಗಳನ್ನು ಶುಚಿಗೊಳಿಸಿ, ಉಸಿರಾಟವನ್ನು ಸರಾಗಗೊಳಿಸುತ್ತದೆ ಮತ್ತು ನಿಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.
- ಮಕ್ಕಳಲ್ಲಿ ಕೂಡ ಕೆಮ್ಮು ನಿವಾರಣೆಗೆ ಬಹು ಪರಿಣಾಮಕಾರಿಯಾಗಿದೆ ಮತ್ತು ಪದೆ ಪದೆ ಕಾಯಿಲೆಗೆ ಈಡಾಗುವುದನ್ನು ತಡೆಗಟ್ಟುತ್ತದೆ.

Mfg.: Sri Chamundeshwari Pharmacy Tamilnadu - 08.
S.S.: Sarvahitha Ayurvedalaya Pvt. Ltd.
Ph.: 080-23577373

Available in AyurCentral Stores, Ayurvedic Stores and Leading Medical Stores
Customer care: 7676731881

ಅರುಣ ಸಿಲ್ಕ್ಸ್ ನೂತನ ಮಳಿಗೆ ಆರಂಭ

ಪ್ರಜಾವಾಣಿ ವಾರ್ತೆ

ಮಳಿಗೆಯನ್ನು ಅಬಕಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಿದರು. ಶೋರೂಮ್ ಮಾಲೀಕ ಜೆ.ಆರ್.ನರಸಿಂಹಮೂರ್ತಿ, ಅನಿಲ್ ಚಳಗೇರಿ ಮತ್ತಿತರರು ಇದ್ದಾರೆ

ಕೆಂಗೇರಿ: ಮದುವೆ ಜವಳಿಗೆ ಹೆಸರುವಾಸಿಯಾದ ಅರುಣ ಸಿಲ್ಕ್ಸ್‌ನ 2ನೇ ಮಳಿಗೆಯನ್ನು ಕೆಂಗೇರಿ ಉಪನಗರದ ಹೊಯ್ಸಳ ಸರ್ಕಲ್ ಬಳಿ ಅಬಕಾರಿ ಸಚಿವ ಕೆ. ಗೋಪಾಲಯ್ಯ ಗುರುವಾರ ಉದ್ಘಾಟಿಸಿದರು.

ಗೋಪಾಲಯ್ಯ ಮಾತನಾಡಿ, 'ಎಲ್ಲ ಬಗೆಯ ಶುಭ ಸಮಾರಂಭಗಳಿಗೆ ಒಪ್ಪುವ ಸಾಂಪ್ರದಾಯಿಕ ಶೈಲಿಯ ದೇಶಿಯ ಉಡುಪುಗಳಿಗೆ ಅರುಣ ಸಿಲ್ಕ್ಸ್ ಹೆಸರುವಾಸಿಯಾಗಿದೆ. ಸುಮಾರು 12 ವರ್ಷಗಳಿಂದ ಜವಳಿ ಉದ್ಯಮದಲ್ಲಿ ತೊಡಗಿಕೊಂಡು ರಾಜಾಜಿನಗರ ವ್ಯಾಪ್ತಿಯಲ್ಲಿ ಈಗಾಗಲೇ ಜನಪ್ರಿಯವಾಗಿರುವ ಅರುಣ ಸಿಲ್ಕ್ ಕೆಂಗೇರಿ ಭಾಗದಲ್ಲೂ ಜನಮನ್ನಣೆ ಪಡೆದುಕೊಳ್ಳಲಿದೆ' ಎಂದು ಹೇಳಿದರು.

'ಉಡುಪುಗಳ ಉತ್ಪಾದಕರಿಂದಲೇ ನೇರವಾಗಿ ಜವಳಿಗಳನ್ನು ಖರೀದಿ ಮಾಡಲಾಗುತ್ತದೆ. ಇದರಿಂದ ಇತರೆ ಮಳಿಗೆಗಳಿಗೆ ಹೋಲಿಸಿದರೆ ಅತಿ ಕಡಿಮೆ ದರದಲ್ಲಿ ಶುಭ ಸಮಾರಂಭಗಳ ದಿರಿಸುಗಳು ಅತ್ಯಂತ ಕಡಿಮೆ ದರದಲ್ಲಿ ದೊರಕಲಿದೆ. ಕಾಂಚೀಪುರಂ, ಬನಾರಸ್ ಸೇರಿದಂತೆ ವಿವಿಧ ಶೈಲಿಗಳ ಸೀರೆಗಳ ಸಂಗ್ರಹ ಒಂದೇ ಮಳಿಗೆಯಲ್ಲಿ ದೊರಕಲಿದೆ. ಕನಿಷ್ಠ ದರ ಹಾಗೂ ಅತ್ಯುತ್ತಮ ಗುಣಮಟ್ಟದ ಈ ಜವಳಿ ಮಾರಾಟ ಮಳಿಗೆಯಿಂದ ಗ್ರಾಹಕರಿಗೆ ಅತ್ಯಂತ ಅನುಕೂಲವಾಗಲಿದೆ' ಎಂದು ಶೋರೂಮ್ ಮಾಲೀಕ ಜೆ.ಆರ್. ನರಸಿಂಹಮೂರ್ತಿ ಹೇಳಿದರು.

ವಿವಿಧ ಬಗೆಯ ಗುಣಮಟ್ಟ ಹಾಗೂ ಕಣ್ಮನ ಸೂರೆಗೊಳ್ಳುವ ಸೀರೆಗಳ ಸಂಗ್ರಹ ಹೊಂದಿರುವ ಅರುಣ ಸಿಲ್ಕ್ಸ್ ಮಳಿಗೆ ಮಹಿಳೆಯರನ್ನು ಆಕರ್ಷಿಸಲಿದೆ ಎಂದು ನಟಿ ಸಂಜನಾ ಆನಂದ್ ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಮೀರಾ ಸಕ್ಸೇನಾ, ಬಿಬಿಎಂಪಿ ಮಾಜಿ ಸದಸ್ಯ ವಿ.ವಿ.ಸತ್ಯನಾರಾಯಣ, ಬಿಜೆಪಿ ಮುಖಂಡ ಅನಿಲ್ ಚಳಗೇರಿ, ಜೆ.ಆರ್. ಶ್ರೀನಿವಾಸ್, ಜೆ.ಎನ್.ಶ್ರೀನಾಥ್, ಜೆ.ಎನ್.ರಮೇಶ್, ಜೆ.ಎಸ್.ಮಹೇಂದ್ರ, ಜೆ..ಎಸ್ ರತ್ನಾಕರ್ ಮತ್ತಿತರರು ಉಪಸ್ಥಿತರಿದ್ದರು.

ಇಬ್ಬರು ಕೆಎಎಸ್ ಅಧಿಕಾರಿಗಳು ಸೇರಿ 6 ಮಂದಿ ವಿರುದ್ಧ ಎಸಿಬಿ ವಿಚಾರಣೆಗೆ ಶಿಫಾರಸು

ನಕಲಿ ದಾಖಲೆ ನೀಡಿದವರಿಗೆ ಭೂಪರಿಹಾರ, ನಿವೇಶನ ಹಂಚಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಕಲಿ ದಾಖಲೆ ಸೃಷ್ಟಿಸಿ ಭೂ ಪರಿಹಾರ ಪಡೆದ ಮಹಿಳೆ
- ವಿವಾದಿತ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯುವಂತೆ ಅರ್ಜಿ ಸಲ್ಲಿಸಿದ್ದ ಗ್ರಾಮಸ್ಥರು
- ತಕರಾರು ಅರ್ಜಿಗಳನ್ನು ಸಲ್ಲಿಸಿದರೂ ಕ್ರಮ ಕೈಗೊಳ್ಳದ ಭೂಸ್ವಾಧೀನಾಧಿಕಾರಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನಕ್ಕೆ ಒಳಪಟ್ಟ ಗೋಮಾಳ ಜಮೀನಿಗೆ ಸಂಬಂಧಿಸಿ ನಕಲಿ ದಾಖಲೆ ಸಲ್ಲಿಸಿದವರಿಗೆ ಭೂಪರಿಹಾರ ನೀಡಿದ್ದಲ್ಲದೇ ಅವರಿಗೆ ನಿವೇಶನವನ್ನೂ ಹಂಚಿಕೆ ಮಾಡಿದ ಪ್ರಕರಣ ಪತ್ತೆಯಾಗಿದೆ.

ಈ ಪ್ರಕರಣ ಸಂಬಂಧ ಇಬ್ಬರು ಕೆಎಎಸ್ ಅಧಿಕಾರಿಗಳು ಸೇರಿದಂತೆ ಒಟ್ಟು ಆರು ಸಿಬ್ಬಂದಿಯನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ವಿಸ್ತೃತ ವಿಚಾರಣೆಗೆ ಒಳಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶಿಫಾರಸು ಮಾಡಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣದ ಅಂತಿಮ ಅಧಿಸೂಚನೆಯನ್ನು 2010ರ ಫೆ 18ರಂದು ಪ್ರಕಟಿಸಲಾಗಿತ್ತು. ಭೀಮನಕುಪ್ಪೆ ಗ್ರಾಮದ ಸರ್ವೆ ನಂಬರ್ 73 ರಲ್ಲಿ ಕಾವೇರಮ್ಮ ಎಂಬುವರಿಗೆ ಸರ್ಕಾರದಿಂದ ಮಂಜೂರಾಗಿದ್ದ 2 ಎಕರೆ 30 ಗುಂಟೆ ಜಮೀನಿನನ್ನು ಬಿಡಿಎ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿತ್ತು. ಈ ಸ್ವತ್ತಿನ ಮಾಲೀಕರಾದ ಕಾವೇರಮ್ಮ ಅವರ ಮಗಳು ಪೂಜಮ್ಮ ಎಂದು ನಕಲಿ ದಾಖಲೆಗಳನ್ನು ಸೃಷ್ಟಿಸಿದ ಮಹಿಳೆಯೊಬ್ಬರು ಬಿಡಿಎಯಿಂದ ಅಕ್ರಮವಾಗಿ ಭೂ ಪರಿಹಾರ ಪಡೆದಿದ್ದಾರೆ.

ವೆಂಕಟೇಶ್ ಎಂಬುವರು 2015ರ ಮಾರ್ಚ್ 26ರಂದು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಅಂತಿಮ ಅಧಿಸೂಚನೆಗೆ ಆಕ್ಷೇಪಣೆ ಸಲ್ಲಿಸಿದ್ದರು. ಅಂತಿಮ ಅಧಿಸೂಚನೆ ಪ್ರಕಟವಾದ 5 ವರ್ಷಗಳ ನಂತರ 2015ರ ಸೆ.16ರಂದು ಕಾವೇರಮ್ಮ ಅವರ ಅಸಲು ವಾರಸುದಾರರಾದ ವೆಂಕಟಲಕ್ಷ್ಮಮ್ಮ ಮತ್ತು ಇತರರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಪೂಜಮ್ಮ ಅವರಿಗೆ ಭೂಪರಿಹಾರ ಸಂಬಂಧ ಐತೀರ್ಪು ರಚಿಸದಂತೆ ಕೋರಿದ್ದರು. 2016ರ ಆ.23ರಂದು ಭೀಮನಕುಪ್ಪೆ ಗ್ರಾಮಸ್ಥರಾದ ಹುಚ್ಚಣ್ಣ, ಚಂದ್ರ ಮತ್ತು ರಾಮಯ್ಯ ಅವರು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗೆ ಅರ್ಜಿ ನೀಡಿ ವಿವಾದಿತ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯುವಂತೆ ಕೋರಿದ್ದರು. ಈ ಅರ್ಜಿಯನ್ನು ಬಿಡಿಎ ಆಯುಕ್ತರ ಮೂಲಕ ಭೂಸ್ವಾಧೀನಾಧಿಕಾರಿಯವರ ಕಚೇರಿಗೆ ರವಾನೆಯಾಗಿತ್ತು.

ಭೀಮನಕುಪ್ಪೆ ಗ್ರಾಮ ಸರ್ವೆ ನಂಬರ್ 73 ರಲ್ಲಿ 2 ಎಕರೆ 30 ಗುಂಟೆ ಜಮೀನಿಗೆ ಪೂಜಮ್ಮ ಮತ್ತು ಪ್ರಭು ಅವರು ನಕಲಿ ದಾಖಲೆಗಳನ್ನು ಸಲ್ಲಿಸಿ ಭೂ ಪರಿಹಾರ ಪಡೆದು ಬಿಡಿಎಗೆ ವಂಚಿಸಿದ್ದಾರೆ ಎಂದು ಶಾಂತಕುಮಾರ್ ಅವರು 2018ರ ಸೆ.1ರಂದು ಶೇಷಾದ್ರಿಪುರ ಠಾಣೆಗೆ ದೂರು ನೀಡಿದ್ದರು. ಈ ಪ್ರಕರಣ ಸಂಬಂಧ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ಪ್ರಕರಣದ ವಿಚಾರಣೆ ಪ್ರಗತಿಯಲ್ಲಿದೆ.

ಭೂಸ್ವಾಧೀನಕ್ಕೆ ಪ್ರಾರಂಭಿಕ ಅಧಿಸೂಚನೆ ಪ್ರಕಟಿಸಿದ ನಂತರ ನೀಡಲಾಗಿದ್ದ ಅರ್ಜಿಗಳನ್ನು ಹೆಚ್ಚುವರಿ ಭೂಸ್ವಾಧೀನಾಧಿಕಾರಿಯಾಗಿದ್ದ ಕೆಎಎಸ್ ಅಧಿಕಾರಿ ಸುಧಾ ಅವರು ಪರಿಶೀಲಿಸಿದ್ದರು. ಈ ಜಮೀನಿನ ಐತೀರ್ಪಿನಲ್ಲಿ ಏನೋ ಸಮಸ್ಯೆ ಇರುವುದರಿಂದ ಪ್ರಕ್ರಿಯೆಯನ್ನು ಸದ್ಯಕ್ಕೆ ತಡೆಹಿಡಿಯುವಂತೆ ಕಾರ್ಯದರ್ಶಿ ಅವರು ತಿಳಿಸಿದ್ದರು. ಹಾಗಾಗಿ ಈ ಜಮೀನಿನ ಐತೀರ್ಪು ಹಾಗೂ ಬಿಲ್ ಮತ್ತು ಓಚರ್‌ಗಳನ್ನು ರದ್ದು ಪಡಿಸಲಾಗಿತ್ತು. ಅರ್ಜಿದಾರರಾದ ಪೂಜಮ್ಮ ಅವರು ಉಪವಿಭಾಗಾಧಿಕಾರಿ ಡಿ.ಬಿ ನಟೇಶ್ ಅವರ ಆದೇಶವನ್ನು ಭೂಸ್ವಾಧೀನಾಧಿಕಾರಿಗಳಿಗೆ ಹಾಜರುಪಡಿಸಿದ ನಂತರ ಪುನಃ ಐತೀರ್ಪು ರಚಿಸಿ ಅವರಿಗೆ ₹ 2.20 ಕೋಟಿ ಹಣ ಬಿಡುಗಡೆ ಮಾಡಲಾಗಿತ್ತು. ಭೂಸ್ವಾಧೀನಾಧಿಕಾರಿಯಾಗಿದ್ದ ಸುಧಾ ಅವರು ದೂರು ಅರ್ಜಿಗಳನ್ನು ಹಾಗೂ ಅರ್ಜಿದಾರರನ್ನು ವಿಚಾರಣೆ ಮಾಡದೆಯೇ ಪೂಜಮ್ಮ ಅವರಿಗೆ ಭೂಸ್ವಾಧೀನದ ಐತೀರ್ಪು ರಚಿಸಿರುವುದು ಪ್ರಾಧಿಕಾರದ ವಿಶೇಷ ಕಾರ್ಯಪಡೆ ಮತ್ತು ಜಾಗೃತ ದಳದ ನಡೆಸಿರುವ ಆಂತರಿಕ ತನಿಖೆಯಲ್ಲಿ ಕಂಡುಬಂದಿದೆ.

'ಸುಧಾ ಅವರು ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ ಭೂ ಸ್ವಾಧೀನಪಡಿಸಿಕೊಂಡಿದ್ದ ಭೀಮನಕುಪ್ಪೆ ಗ್ರಾಮದ ಸರ್ವೆ ನಂಬರ್ 73ರ ಜಮೀನಿಗೆ ಸಂಬಂಧಿಸಿದ ಸಲ್ಲಿಕೆಯಾಗಿದ್ದ ದೂರು ಅರ್ಜಿಗಳನ್ನು ಹಾಗೂ ಅರ್ಜಿದಾರರನ್ನು ವಿಚಾರಣೆ ಮಾಡದೆಯೇ ನಕಲಿ ದಾಖಲೆ ಆಧರಿಸಿ ಐತೀರ್ಪು ರಚಿಸಿದ್ದಾರೆ. ಈ ಪ್ರಕರಣದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಾದ ಸಿ.ಆರ್.ಮಹೇಶ್, ಎ.ಸಿ.ಅರುಣ್ ಕುಮಾರ್, ಹಕ್ಕುದಾಖಲೆ ಶಿರಸ್ತೆದಾರ್ ಡಿ.ಪಾಂಡುರಂಗ, ಹಕ್ಕುದಾಖಲೆಗಳ ರಾಜಸ್ವ ನಿರೀಕ್ಷಕ ಎನ್. ಮಾಣಿಕ್ಯಾಚಾರ್ ಹಾಗೂ ಉಪವಿಭಾಗಾಧಿಕಾರಿ ಡಿ.ಬಿ ನಟೇಶ್ ಅವರು ಕೂಡ ಕರ್ತವ್ಯ ಲೋಪವೆಸಗಿರುವುದು ಲಭ್ಯವಿರುವ ದಾಖಲೆಗಳ ಪರಿಶೀಲನೆಯಿಂದ ಮೇಲ್ನೋಟಕ್ಕೆ ಸಾಬೀತಾಗಿದೆ. ಆದ್ದರಿಂದ ಈ ಆರೋಪಿಗಳನ್ನು 1988ರ ಭ್ರಷ್ಟಾಚಾರ ತಡೆ ಕಾಯ್ದೆಯ ಕಲಂ 17 (ಎ) ಅನ್ವಯ ಎಸಿಬಿ ವಿಚಾರಣೆ ನಡೆಸಲು ಅನುಮತಿ ನೀಡಬಹುದು' ಎಂದು ಬಿಡಿಎ ಆಯುಕ್ತರು 2022 ಜ.17ರಂದು ನಗರಾಭಿವೃದ್ಧಿ ಇಲಾಖೆಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಪೌರಾಡಳಿತ ನಿರ್ದೇಶನಾಲಯದ ನಡೆಗೆ ಖಂಡನೆ

'ಅಂಗಡಿ ಮುಂಗಟ್ಟು: ನಾಮಫಲಕದಲ್ಲಿ ಕನ್ನಡ ಕಣ್ಮರೆ'

ಪ್ರಜಾವಾಣಿ ವಾರ್ತೆ

ಟಿ.ಎಸ್. ನಾಗಾಭರಣ

ಬೆಂಗಳೂರು: 'ತಮಿಳುನಾಡಿಗೆ ಹೊಂದಿಕೊಂಡಿರುವ ನಗರದ ಗಡಿಭಾಗದಲ್ಲಿನ ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಕನ್ನಡ ಕಣ್ಮರೆಯಾಗಿದೆ. ಈ ಬಗ್ಗೆ ಪೌರಾಡಳಿತ ನಿರ್ದೇಶನಾಲಯ ಯಾವುದೇ ಕ್ರಮ ಕೈಗೊಳ್ಳದಿರುವುದು ಖಂಡನೀಯ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಕ್ಷೇಪ ವ್ಯಕ್ತಪಡಿಸಿದರು.

ಪ್ರಾಧಿಕಾರವು ಪೌರಾಡಳಿತ ನಿರ್ದೇಶನಾಲಯದಲ್ಲಿ ಹಮ್ಮಿಕೊಂಡ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಾರ್ಯಚಟುವಟಿಕೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. 'ನಾಮಫಲಕಗಳಲ್ಲಿ ಕನ್ನಡ ಭಾಷೆಯನ್ನು ಪ್ರಧಾನವಾಗಿ ಬಳಸಬೇಕೆಂಬ ನಿಯಮವಿದೆ. ಆದರೆ, ಪೌರಾಡಳಿತ ನಿರ್ದೇಶನಾಲಯವು ಅಂಗಡಿಗಳ ಪರವಾನಗಿ ನವೀಕರಣದ ಸಂದರ್ಭದಲ್ಲಿ ಷರತ್ತನ್ನು ವಿಧಿಸದಿರುವುದು ಸರಿಯಾದ ನಡವಳಿಕೆಯಲ್ಲ. ವಾರದೊಳಗೆ ಕನ್ನಡದಲ್ಲಿ ನಾಮಫಲಕ ಅಳವಡಿಸುವ ಷರತ್ತನ್ನು ವಿಧಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕನ್ನಡ ಪರ ಚಿಂತಕ ರಾ.ನಂ. ಚಂದ್ರಶೇಖರ, 'ನಾಮಫಲಕಗಳಲ್ಲಿ ಕನ್ನಡದ ಕಡೆಗಣನೆ ಒಂದೆಡೆಯಾದರೆ, ಸ್ಪಷ್ಟವಾದ ಕನ್ನಡ ಬಳಸದಿರುವುದು ಇನ್ನೊಂದು ದುರಂತ. ಈ ಬಗ್ಗೆಯೂ ಪೌರಾಡಳಿತ ನಿರ್ದೇಶನಾಲಯ ಸರಿಯಾಗಿ ಪರಿಶೀಲಿಸಬೇಕು' ಎಂದು ಸಲಹೆ ನೀಡಿದರು.

ಮುಖ್ಯಮಂತ್ರಿ ಸಲಹೆಗಾರ (ಇ-ಆಡಳಿತ) ಬೇಲೂರು ಸುದರ್ಶನ, 'ರಾಜ್ಯ ಸರ್ಕಾರದ ಅಧಿಕೃತ ನಮೂನೆಯ ವೆಬ್‌ಸೈಟ್ ರೀತಿಯಲ್ಲಿಯೇ ಪೌರಾಡಳಿತ ನಿರ್ದೇಶನಾಲಯದ ವೆಬ್‌ಸೈಟ್ ಕೂಡ ಇರಬೇಕು. karnataka.gov.in ಈ ಮಾದರಿಯಲ್ಲಿ ಸರ್ಕಾರಕ್ಕೆ ಸಂಬಂಧಿಸಿದ ಎಲ್ಲ ಇಲಾಖೆಯ ಜಾಲತಾಣಗಳು ಇರಬೇಕೆಂಬ ನಿಯಮವಿದೆ' ಎಂದು ಹೇಳಿದರು.

ಸಭೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕಿ (ಆಡಳಿತ) ಶೋಭಾ ಬಿ. ಹಾಗೂ ಅಧಿಕಾರಿಗಳು ಇದ್ದರು.

ಮೈಲಾರ ಜಾತ್ರೆ: ಭಕ್ತರಿಗೆ ನಿಷೇಧ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಜಿಲ್ಲೆಯ ಹೂವಿನಹಡಗಲಿಯ ಮೈಲಾರದ ಮೈಲಾರಲಿಂಗೇಶ್ವರ ಸ್ವಾಮಿ, ಕುರುವತ್ತಿ ಮಲ್ಲಿಕಾರ್ಜುನ ಸ್ವಾಮಿ, ಬಸವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಪ್ರಯುಕ್ತ ಹೆಚ್ಚಿನ ಜನಸಂದಣಿ ಸೇರುವ ಸಾಧ್ಯತೆ ಇರುವುದರಿಂದ ದೇವರ ದರ್ಶನಕ್ಕೆ ಭಕ್ತರಿಗೆ ನಿಷೇಧ ಹೇರಿ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ಗುರುವಾರ ಆದೇಶ ಹೊರಡಿಸಿದ್ದಾರೆ.

ಫೆ. 8ರಿಂದ 19ರವರೆಗೆ ಮೈಲಾರ ಜಾತ್ರೆ, ಫೆ. 25ರಿಂದ ಮಾ. 3ರ ವರೆಗೆ ಮಲ್ಲಿಕಾರ್ಜುನ ಸ್ವಾಮಿ, ಬಸವೇಶ್ವರ ಸ್ವಾಮಿ ಜಾತ್ರೆಗೆ ಲಕ್ಷಾಂತರ ಭಕ್ತರು ಬರುವ ಸಾಧ್ಯತೆ ಇದೆ. ಕೊರೊನಾ ಸೋಂಕು ಹರಡುತ್ತಿರುವುದರಿಂದ ಅದನ್ನು ತಡೆಯಲು ಭಕ್ತರಿಗೆ ದೇವರ ದರ್ಶನಕ್ಕೆ ನಿಷೇಧ ಹೇರಲಾಗಿದೆ. ಜಾತ್ರೆ ನಡೆಯಲಿರುವ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವಂತಿಲ್ಲ ಎಂದು ತಿಳಿಸಿದ್ದಾರೆ.

ಡಾ: ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ.
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಲಿಡಕರ್ ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 080–22288895/22288897 ಇ–ಮೇಲ್: lidkar2018@gmail.com

ಉಲ್ಲೇಖ: ಲಿಡ್‌ಕರ್/ತಾಂತ್ರಿಕ/ಇ–ಟೆಂಡರ್/2021–22/2411   ದಿನಾಂಕ: 31–01–2022

ಇ–ಟೆಂಡರ್ ನೋಟಿಫಿಕೇಷನ್

ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಚರ್ಮ ಕುಶಲಕರ್ಮಿಗಳಿಗೆ ತರಬೇತಿ ನೀಡುತ್ತಿರುವ ಸಂಬಂಧ ಕಚ್ಚಾಮಾಲುಗಳನ್ನು ಒದಗಿಸಬೇಕಾಗಿದ್ದು ತಯಾರಕರು/ಸರಬರಾಜುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು ಇ– ಪೋರ್ಟಲ್ ಮೂಲಕ ಕರೆಯಲಾಗಿದ್ದು, ಅವಶ್ಯವಿರುವ ವಿವರಗಳನ್ನು ವೆಬ್‌ಸೈಟ್: http://e-proc.karnataka.gov.in. ಮೂಲಕ ಪಡೆಯಬಹುದಾಗಿದೆ. ಸಹಾಯವಾಣಿ ಸಂಖ್ಯೆ : 080–22288895/ 22288897

ಕ್ರ.ಸಂ	ವಿವರಗಳು	ಕಚ್ಚಾಮಾಲು
1.	ಟೆಂಡರ್ ಉಲ್ಲೇಖ ಮತ್ತು ದಿನಾಂಕ	ಲಿಡ್‌ಕರ್/ತಾಂತ್ರಿಕ/2021–22/2411 ದಿನಾಂಕ:29.01.2022
2.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	08.02.2022 ಸಂಜೆ. 04.00 ಘಂಟೆ
3.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	10.02.2022 ಬೆಳಿಗ್ಗೆ. 11.00 ಘಂಟೆ
4.	ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದವರಿಗೆ ಮಾತ್ರ ತಿಳಿಸಲಾಗುವುದು.

ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ ಮತ್ತು ಇ–ಪೋರ್ಟಲ್ ಮೂಲಕವೇ ಟೆಂಡರ್ ಸಲ್ಲಿಸುವುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು (ಅ) ಮತ್ತು ಟೆಂಡರ್ ಪ್ರಕಟಿಸುವ ಪಾಧಿಕಾರಿ

ಲಿಡ್‌ಕರ್ ವಸ್ತು ಪ್ರದರ್ಶನ ಮತ್ತು ಮಾರಾಟ, ವಾಜರಹಳ್ಳಿ, ಕನಕಪುರ ರಸ್ತೆ, ಬೆಂಗಳೂರು.
ಎಲ್ಲಾ ಉತ್ಪನ್ನಗಳ ಮೇಲೆ ಶೇ. 20 ರಿಂದ 40 ರಷ್ಟು ವಿಶೇಷ ರಿಯಾಯಿತಿ ಲಭ್ಯ ಇಂದೇ ಭೇಟಿ ನೀಡಿ.

ಲಿಡ್‌ಕರ್
ನಂಬಿಕೆ. ನಿರಂತರ.
1976 ರಿಂದ

ಲಿಡ್‌ಕರ್ ನಿಗಮದಿಂದ ಮಧುಮೇಹ ಮತ್ತು ಆರ್ಥೋಪೆಡಿಕ್ ಸಮಸ್ಯೆ ಇರುವ ಪಾದಗಳಿಗೆ ಕಸ್ಟಮೈಜ್ಡ್ ಪಾದರಕ್ಷೆಗಳನ್ನು ಒದಗಿಸಲು ಆದೇಶ ಪಡೆಯಲಾಗುವುದು.
ಸಂಪರ್ಕಿಸಿ: ಲಿಡ್‌ಕರ್ ಮಾರಾಟ ಮಳಿಗೆ ಜಯನಗರ, ವಸಂತನಗರ ಮತ್ತು ಮೈಸೂರು.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Sites

Indiranagar

WANTED SITES, Houses, Flats, Commercial Building genuine purchasers in and around Indiranagar, HAL 1st, 2nd, 3rd, Domlur, old airport road. Contact: SRINIVASA ESTATES 9342560839/ 9448067303

Multiple Locations

REQUIRED PLOT FOR Sale/ Lease 15000 TO 30000 SQFT in and around Hoskote, Mysore Road, International airport Road Contact: 9845015083/ 9986250516

Vishweshwariah Layout

AVAILABLE/ WANTED, BDA Sites in Vishweshwaraiah Layout, Kempegowda Layout, 20x30, 30x40, 40x60, 50x80 Contact: Genuine Buyers/ Sellers For Immediate Settlement: 8892901567/ 9341733480.

REAL ESTATE SELLING

Flat

J P Nagar

1100 SFT, North facing Semifurnished Flat for Sale at JP Nagar & Bank Loan Available, A-Khata & OC CC Available, Immediate ready to move, Owner going Abroad. Contact- 6362961311/ 9901050888

Farm House/ Land/ Resorts

Kanakapura Road

OWN A Managed Farmland Kanakapura, Bangalore with Temple, Grown Trees, Compound wall & Clubhouse: 7411203963

House

Anjanapura

600 SFT, East facing BDA Property is for Sale at Anjanapura. Brokers Excuse. Contact on 6362961311/ 9901050888.

Jayanagar

SALE, JAYANAGAR 9th Block,30x40, Semi-commercial South facing, 3 floors building, 60'Road, excellent location, 3,50,00,000/- Genuine buyers Call.,Owner Kumar- 9980056670.

Magadi Road

3,200 SFT, West Facing Residential Property is for Sale at Magadi Road Housing Board. Contact- 6362961311/ 9901050888

Vijayanagar

2,655 SQ.FT, West Facing Property is for Sale at Industries & Commerce Layout, Vijayanagar. Contact 7829388595/ 9901050888

Vishweshwariah Layout

SALE: NEAR AMMA ASHRAM NAGADEVANAHALLI 20X42 BBMP 'A'-KHATHA EF INDIPENDENT & DUPLEX HOUSE- 9845021795/ 9980733501

Villas/Bunglows

Sahakarnagar

FOR SALE PROPERTY WITH FABULOUS HOUSE SAHAKAR NAGAR BANGALORE SITE 1596 12Th MAIN B BLOCK 2KM FROM BRIGADE OPUS MAIN AIRPORT ROAD 40X60 PLOT SOUTH FACING ABOUT 4100 Sft BUILT UP BANGALOW THREE FLOORS FULLY FURNISHED CONTACT AGENT KRISHNA MURTHY 8277305783 BROKERS PLEASE EXCUSE.

Sites

Sarjapur Road

SARJAPUR TOWN, Re-sale 40x60 Villa Sites, Well planned Vast Cosmopolitan Gated Community with amenities, Fastest Growing Residential Area,very close to up-coming Tech-Centers, BMRDA Approved, E-Khatha, Rs.1800/-per.sft. Bank Loans Available. Contact RAANA JI - 8880 393939

Vishweshwariah Layout

AVAILABLE BDA Vishveswaraya Layout 2nd Block 30x40, North Facing 6th Block 20x30 South Facing Full Development Place: 9481703468

JOB OPPORTUNITIES

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

General

WANTED FOR Reputed Company, Graduates Age- 30-70, Bangalore only, Earn: 30,000- 50,000. Contact: 9448000167/ 9008305194.

Marketing & Sales

REQUIRED SALESMEN to work in FMCG food products MNC. Intermediate/graduate having 6 months to 2 years sales experience & good communication skills. Two wheeler, driving license required. Minimum wages, PF ESI + daily allowance and reimbursement of TA. Send resume to svrr@hrchambers.com, 9100917172

Multiple Vacancy

REQ, TEAM-LEADER, Telecaller, Backend & Field executive for For Banking Loan collection (salary upto 20,000 to 25,000). direct recruitment to company Contact:- 9620206756, 9620200756.

Graphic Designers

WANTED DTP Operator/ Graphic Designer Corel Draw Illustrator & Photoshop for a Pvt Limited Company in around Rajajinagar Contact: 23307910/ 9108458798

AUTOMOTIVE

Four Wheelers Selling

Maruti

FLOOD DAMAGED KA-05 MV-9113 Maruti Cilerio ZXI Automatic Transmission Car for sale without RC. Send sealed Quotations within SEVENDAYS. Contact: 9845002975.

Mahindra

REQUIRED SALVAGE quote for Mahindra XUV500R 2015 model, KA05MS 0949 without RC. Call: 9611009999, 9844036218.

BUSINESS

Business Offers

Finance

WANTED INVESTER We Are Manufacturer, Pure Silk Sarees, Invester Get Good Profit in-our Business, 7899356649

FINANCE AGAINST Land & Building Properties Industries Schools Hospitals Projects &NRIFunds 7358729820

MATRIMONIAL

Brides Wanted

English

HANDSOME PUNJABI 33yr 6' 40L+ seeks alliance from tall educated girl of reputed families: bride480@gmail.com

PERSONAL

Change of Name

DINESH KUMAR YADAV, 14819425L, HAV, Vill - Mohana, Sikendrabad, Bulandshahar, Uttar Pradesh, changed Son's name from HARSH KUMAR YADAV to HARSH YADAV, 03/02/2022, Notary K.V. Mani, Bangalore

MOHINI RASAL W/o 14850173L– Nk– RASAL BHARAT SHAMRAO R/a Charan, Kolhapur, Maharashtra changed name from MOHINI RASAL to MOHINI BHARAT RASAL notary KV Mani Bangalore.

NAME CHANGE
I, N. Rajashekar S/o. Late. Neelakanta residing at. #17, 1st main road, 2nd cross, Srikanteshwara Nagar, Bangalore- 560096 have changed my minor Son's (aged 17 years) name from **DARSHAN. R to JASHWIN. R** vide affidavit dated 02/02/2022 before notary Meer Hassan, Bangalore.

I, DEEPU HARISH SANKAPURA R/at No. 201, D Block, Nethravathi BDA Apartment, Nandini Layout Bangalore- 560096 have changed my name to DEEPU B V vide affidavit dated: 03/2/2022 Before Notary Onkarappa N.R Bangalore.

I, CHRISTOPHER G residing at No.110, BDA Layout, 7th Cross, E Block, Lingarajapuram, Bangalore-84 have changed my name to RAJAN G vide affidavit dated 03.02.2022 before Notary Uday Kumar K, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD   ಪ್ರಜಾವಾಣಿ

BOOK YOUR REAL ESTATE
Classified Advertisement In Deccan Herald & Prajavani

SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in   www.dhclassifieds.com
condition apply*

WEEKEND CORNER   ಕ್ಲಾಸಿಫೈಡ್ಸ್

ಬೆಂಗಳೂರು ಶಿಕ್ಷಣ ಮಹಾವಿದ್ಯಾಲಯ, ಸ್ನಾತಕೋತ್ತರ ಶಿಕ್ಷಣ ವಿಭಾಗ, ಚಳ್ಳಕೆರೆ, ಕಲ್ಯಾಣ ನಗರ, ಬೆಂಗಳೂರು – 43. ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶ್ರೀಮತಿ ಶೀಲಾರತ್ನ ಎಲ್ ರವರು ಮಂಡಿಸಿದ "Effectiveness of Active Learning Instructional Strategy in Teaching Science on Multiple Identities and Scholastic Achievement of Secondary School Students". ಎಂಬ ಪಿಎಚ್. ಡಿ. ಪ್ರೌಢ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿಯನ್ನು ನೀಡಿದೆ. ಇವರಿಗೆ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ನಿವೃತ್ತ ಪ್ರಾಧ್ಯಾಪಕರಾಗಿದ್ದ ಪ್ರೊ. ಎಚ್ ಆರ್ ಜಯಮ್ಮರವರು ಮಾರ್ಗದರ್ಶಕರಾಗಿದ್ದರು.

VINAYAKA HOUSING (R) UTSAV CLUB & RESORT(R)
Kengal Village, Honnenahalli Grama Panchayath, Sompura Hobli, Nelamangala Taluk, Dabaspet, Bangalore Rural Dist- 563123.
FARM PLOTS AT MAGADI ROAD and DOBESPET AND BMRDA APPROVED SITES FOR SALE

For More Details and for Site visit Contact
SRI. VINAYAKA LAND DEVELOPERS ®
Sri. Anjanadri Nilaya, No. 1, 3rd E Cross, Netaji Nagar, T. Dasarahalli, Bangalore-560 057
99011 58719 / 83109 99969 / 8088421757 / 83103 33728
www.utsavclub@resort.in / slrvinayaka@gmail.com

ಡಿಕೆಶಿ ಭೇಟಿಯಲ್ಲಿ ರಾಜಕೀಯ ಇಲ್ಲ: ಆನಂದ್ ಸಿಂಗ್

ಬೆಂಗಳೂರು: 'ನಾನು ಯಾವುದೇ ಕಾರಣಕ್ಕೂ ಬಿಜೆಪಿ ಬಿಡುವುದಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭೇಟಿ ಹಿಂದೆ ಯಾವುದೇ ರಾಜಕೀಯ ಉದ್ದೇಶ ಇರಲಿಲ್ಲ' ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಹೇಳಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಗುರುವಾರ ಭೇಟಿಯಾದ ಸಿಂಗ್, ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. ಕೆಲವರು ಸುಖಾಸುಮ್ಮನೆ ವದಂತಿಗಳನ್ನು ಹರಡುತ್ತಿದ್ದಾರೆ ಎಂದೂ ಅವರು ಹೇಳಿದರು.

'ಹಿಂದೆ ವಿಜಯನಗರದಲ್ಲಿ ತುಂಗಾರತಿ ಮಾಡಲಾಗುತ್ತಿತ್ತು. ಅದೇ ಮಾದರಿಯಲ್ಲಿ ಕಾವೇರಿ ನದಿಯಲ್ಲೂ ನಡೆಸುವ ಬಗ್ಗೆ ಡಿ.ಕೆ.ಶಿವಕುಮಾರ್ ಅವರು ನನ್ನಲ್ಲಿ ಮಾಹಿತಿ ಕೇಳಿ ಮನೆಗೆ ಬರುವುದಾಗಿ ಹೇಳಿದ್ದರು. ನನಗಿಂತ ಹಿರಿಯರಾದ ಅವರು ಮನೆಗೆ ಬರುವುದು ಬೇಡ, ನಾನೇ ನಿಮ್ಮ ಮನೆಗೆ ಬರುತ್ತೇನೆ ಎಂದು ಹೇಳಿ ಅವರ ಮನೆಗೆ ಹೋಗಿದ್ದೆ. ತುಂಗಾರತಿಯ ಬಗ್ಗೆ ಮಾಹಿತಿ ನೀಡಿದ್ದೆ' ಎಂದು ಆನಂದ್ ಸಿಂಗ್ ಹೇಳಿದರು.

'ಕಾಂಗ್ರೆಸ್‌ನಲ್ಲಿ ಸರಿ ಹೋಗುತ್ತಿಲ್ಲ ಎಂಬ ಕಾರಣಕ್ಕೆ ಆ ಪಕ್ಷ ಬಿಟ್ಟು ಬಿಜೆಪಿ ಸೇರಿದೆವು. ಮತ್ತೆ ಅಲ್ಲಿಗೆ ಹೋಗುವ ಪ್ರಶ್ನೆಯೇ ಇಲ್ಲ. ಮುಖ್ಯಮಂತ್ರಿಯವರು ಜನಪರ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ. ಸರ್ಕಾರದಲ್ಲಿ ನನಗೆ ತೃಪ್ತಿ ಇದೆ. ನಾನು ಪಕ್ಷ ಬಿಡುವುದಿಲ್ಲ. ಈ ಎಲ್ಲ ವಿಷಯಗಳ ಬಗ್ಗೆ ಮುಖ್ಯಮಂತ್ರಿಯವರಿಗೆ ಮಾಹಿತಿ ನೀಡಿದ್ದೇನೆ' ಎಂದರು.

ಶಕ್ತಿಧಾಮದ ಮಕ್ಕಳ ಜತೆ ಶಿವರಾಜ್ ಕುಮಾರ್ ದಂಪತಿ

ರಾಜ್ ಕುಟುಂಬದ ನಂದಿಬೆಟ್ಟ ಪ್ರೀತಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ನಂದಿ ಗ್ರಾಮ ಮತ್ತು ನಂದಿಬೆಟ್ಟದಲ್ಲಿ ಹಲವು ಸಿನಿಮಾಗಳ ಚಿತ್ರೀಕರಣ ನಡೆದಿದೆ. ನಂದಿಬೆಟ್ಟ ಎಂದರೆ ನಮ್ಮ ತಂದೆ, ಅಪ್ಪು, ನನಗೆ ಮತ್ತು ನಮ್ಮ ಕುಟುಂಬದವರಿಗೆ ಪ್ರೀತಿ ಹೆಚ್ಚು' ಎಂದು ನಟ ಶಿವರಾಜ್ ಕುಮಾರ್ ತಿಳಿಸಿದರು.

ಮೈಸೂರಿನ ಶಕ್ತಿಧಾಮದ ಮಕ್ಕಳ ಜತೆ ಗುರುವಾರ ನಂದಿ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ಅವರು ಸುದ್ದಿಗಾರರ ಜತೆ ಮಾತನಾಡಿದರು. ಮಕ್ಕಳ ಜತೆ ಶಿವರಾಜ್ ಕುಮಾರ್ ದಂಪತಿ ಭೋಗ ನಂದೀಶ್ವರ ದೇವಾಲಯ ಹಾಗೂ ನಂದಿಬೆಟ್ಟಕ್ಕೆ ಭೇಟಿ ನೀಡಿದ್ದರು.

ಮೈಸೂರಿನ ಶಕ್ತಿಧಾಮದ ಮಕ್ಕಳ ಜತೆ ನಂದಿಯ ಭೋಗ ನಂದೀಶ್ವರ ದೇವಾಲಯಕ್ಕೆ ಭೇಟಿ ನೀಡಿದ್ದ ನಟ ಶಿವರಾಜ್ ಕುಮಾರ್ ದಂಪತಿ

ಇದೇ ಮೊದಲ ಬಾರಿಗೆ ಶಕ್ತಿಧಾಮದ ಮಕ್ಕಳು ಬೆಂಗಳೂರಿಗೆ ಬಂದಿದ್ದಾರೆ. ಶುಕ್ರವಾರ ಅವರು ಶಕ್ತಿಧಾಮಕ್ಕೆ ಮರಳುವರು. ನಮ್ಮ ತಂದೆ, ತಾಯಿ ಹಾಗೂ ಹಲವರು ಶಕ್ತಿಧಾಮವನ್ನು ಬೆಳೆಸಿದರು. ನಮಗೆ ಹತ್ತಿರವಾದ ಸಂಸ್ಥೆ ಇದು ಎಂದು ಹೇಳಿದರು.

ಮಕ್ಕಳಿಗೆ ಶಕ್ತಿಧಾಮ ನಮ್ಮ ಮನೆ ಎನ್ನುವ ಭಾವನೆ ಬೆಳೆಸಬೇಕು. ಅವರಿಗೆ ಇದು ನಮ್ಮ ಮನೆ, ನಮ್ಮ ಕುಟುಂಬ ಎನ್ನುವ ಭಾವನೆ ಬರಬೇಕು. ಮಕ್ಕಳ ಜತೆ ಎಂದಿಗೂ ಇರುತ್ತೇವೆ. ಮಕ್ಕಳನ್ನು ಬರಿ ಓದುವುದಷ್ಟಕ್ಕೆ ಸೀಮಿತಗೊಳಿಸಬಾರದು. ಅವರಲ್ಲಿ ಅರಿವು ಮೂಡಿಸಬೇಕು ಎಂದರು.

ಅಪ್ಪು (ಪುನೀತ್ ರಾಜ್‌ಕುಮಾರ್) ಇಲ್ಲ ಎನ್ನುವ ನೋವು ಎಂದಿಗೂ ಇರುತ್ತದೆ. ಅಪ್ಪು ಅಮರವಾಗಿ ಇರುತ್ತಾನೆ. ಜೇಮ್ಸ್ ಚಿತ್ರಕ್ಕೆ ಡಬ್ಬಿಂಗ್ ಮಾಡಿದ್ದೇನೆ. ಅಭಿಮಾನಿಗಳಿಗೆ ಇಷ್ಟವಾಗುತ್ತದೆ ಎಂದುಕೊಂಡಿದ್ದೇನೆ. ಡಬ್ಬಿಂಗ್ ಮಾಡುವಾಗ ಕಷ್ಟವಾಯಿತು ಎಂದು ಅವರು ಹೇಳಿದರು

150 ಮಕ್ಕಳು ಮೂರು ಬಸ್‌ಗಳಲ್ಲಿ ನಂದಿಗೆ ಬಂದಿದ್ದರು. ಭೋಗ ನಂದೀಶ್ವರ ದೇವಾಲಯದಲ್ಲಿ ದರ್ಶನ ಪಡೆದು ನಂದಿಬೆಟ್ಟಕ್ಕೆ ತೆರಳಿದರು. ಗೀತಾ ಶಿವರಾಜ್ ಕುಮಾರ್ ಮತ್ತಿತರರು ಇದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ತೆಲುಗು ನಟ ಅಲ್ಲು ಅರ್ಜುನ್ ಅವರು ನಗರದ ಕಂಠೀರವ ಸ್ಟುಡಿಯೊಗೆ ಗುರುವಾರ ಭೇಟಿ ನೀಡಿ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಯ ದರ್ಶನ ಪಡೆದರು –ಪ್ರಜಾವಾಣಿ ಚಿತ್ರ/

ಅಂಧ ಮಕ್ಕಳಿಗೆ ಬ್ರೈಲ್ ಲಿಪಿ ಪಠ್ಯ ಪೂರೈಸಿ: ಹೈಕೋರ್ಟ್

ಬೆಂಗಳೂರು: 'ಅಂಧ ವಿದ್ಯಾರ್ಥಿಗಳಿಗೆ ಅಗತ್ಯವಿರುವ ಬ್ರೈಲ್ ಲಿಪಿ ಪಠ್ಯ ಪುಸ್ತಕಗಳನ್ನು ಇ-ಪಬ್ 3 ಮಾದರಿಯಲ್ಲಿ ಪರಿವರ್ತಿಸಿ ಪೂರೈಸುವ ಕಾರ್ಯವನ್ನು ಇನ್ನೆರಡು ತಿಂಗಳಲ್ಲಿ ಪೂರ್ಣಗೊಳಿಸಿ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, 'ದಿ ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್' ಸಂಸ್ಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಸರ್ಕಾರಿ ವಕೀಲೆ ಎಚ್.ವಾಣಿ, 'ಅಂಧ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದ 1ರಿಂದ 10ನೇ ತರಗತಿಯ 132 ಬ್ರೈಲ್ ಲಿಪಿಯ ಪಠ್ಯ ಪುಸ್ತಕಗಳನ್ನುಇ-ಪಬ್ 3 ಮಾದರಿಯಲ್ಲಿ ಕರ್ನಾಟಕ ಪಠ್ಯಪುಸ್ತಕ ಸೊಸೈಟಿಯ (ಕೆಟಿಬಿಎಸ್) ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಉಳಿದ 403 ಪುಸ್ತಕಗಳನ್ನು ಇ-ಪಠ್ಯಕ್ಕೆ ಪರಿವರ್ತಿಸಿ ಅಪ್‌ಲೋಡ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಮುಂದಿನ ಶೈಕ್ಷಣಿಕ ವರ್ಷ ಆರಂಭವಾಗುವುದರೊಳಗೆ ಆ ಕಾರ್ಯವನ್ನೂ ಪೂರ್ಣಗೊಳಿಸಲಾಗುವುದು' ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಅಷ್ಟೊಂದು ಸಮಯ ನೀಡಲಾಗದು. ಎರಡು ತಿಂಗಳಲ್ಲಿ ಪೂರೈಸಿ' ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಅಮೆರಿಕ ಕಾರ್ಯಾಚರಣೆಯಲ್ಲಿ ಐ.ಎಸ್ ನಾಯಕ ಸಾವು: ಬೈಡನ್

ವಾಷಿಂಗ್ಟನ್ (ಎಎಫ್‌ಪಿ): ಸಿರಿಯಾದಲ್ಲಿ ಅಮೆರಿಕ ಪಡೆಗಳು ನಡೆಸಿದ ದಾಳಿಯ ಸಮಯದಲ್ಲಿ ಇಸ್ಲಾಮಿಕ್ ಸ್ಟೇಟ್ ಗುಂಪಿನ ನಾಯಕ ಅಬು ಇಬ್ರಾಹಿಂ ಅಲ್-ಹಶಿಮಿ ಅಲ್-ಖುರೇಶಿ ತನ್ನ ಕುಟುಂಬದ ಸದಸ್ಯರೊಂದಿಗೆ ಸ್ಫೋಟಿಸಿಕೊಂಡು ಮೃತಪಟ್ಟಿದ್ದಾನೆ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಗುರುವಾರ ಹೇಳಿದ್ದಾರೆ.

'ಕಳೆದ ರಾತ್ರಿ ವಾಯವ್ಯ ಸಿರಿಯಾದಲ್ಲಿ ಅಮೆರಿಕ ಮಿಲಿಟರಿ ಪಡೆಗಳು ಅಮೆರಿಕದ ಜನರು ಮತ್ತು ನಮ್ಮ ಮಿತ್ರರಾಷ್ಟ್ರಗಳನ್ನು ರಕ್ಷಿಸಲು, ಜಗತ್ತನ್ನು ಸುರಕ್ಷಿತ ಸ್ಥಳವಾಗಿಸಲು ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ಕೈಗೊಂಡವು' ಎಂದು ಬೈಡನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದಟ್ಟಣೆ ಕಾರಿಡಾರ್: ಮರು ಟೆಂಡರ್ ಕೂಡ ಸ್ಥಗಿತ?

ಒಂದನೇ ಪುಟದಿಂದ

'ಈ ರಸ್ತೆಗಳ ಅಭಿವೃದ್ಧಿಗೆ ತಗಲುವ ವೆಚ್ಚಕ್ಕಿಂತಲೂ ಅವುಗಳನ್ನು ಐದು ವರ್ಷಗಳ ನಿರ್ವಹಿಸುವುದಕ್ಕೆ ತಗಲುವ ವೆಚ್ಚ ಹೆಚ್ಚು ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಕೆಲವು ನಿರ್ದಿಷ್ಟ ಲೋಪಗಳ ಕಾರಣಕ್ಕೆ ಈ ಹಿಂದಿನ ಟೆಂಡರ್ ರದ್ದುಪಡಿಸಲಾಗಿತ್ತು. ಮರು ಟೆಂಡರ್ ಕರೆಯುವಾಗ ಅವುಗಳನ್ನು ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡಲಾಗಿತ್ತು.'

'ಟೆಂಡರ್‌ನ ಕೆಲವು ಅಂಶಗಳನ್ನು ಮಾರ್ಪಾಡು ಮಾಡಿ ಮರು ಟೆಂಡರ್ ಕರೆಯಲಾಗಿದೆ ಎಂದು ಸಭೆಯಲ್ಲಿ ಕೆಆರ್‌ಡಿಸಿಎಲ್ ತಿಳಿಸಿತ್ತು. ಅದರೆ, ಟೆಂಡರ್ ರದ್ದುಪಡಿಸುವಾಗ ಯಾವೆಲ್ಲ ಅಂಶಗಳಿಗೆ ಸಂಬಂಧಿಸಿ ಆಕ್ಷೇಪ ವ್ಯಕ್ತಪಡಿಸಲಾಗಿತ್ತೋ, ಅವುಗಳೆಲ್ಲವನ್ನು ಮರು ಟೆಂಡರ್‌ನಲ್ಲಿ ಸರಿಪಡಿಸಿಲ್ಲ. ಹಾಗಾಗಿ 12 ಅತಿ ದಟ್ಟಣೆ ಕಾರಿಡಾರ್‌ಗಳ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕು' ಎಂದು ಸ್ಪಷ್ಟವಾಗಿ ಸೂಚಿಸಿದ್ದಾರೆ.

'ಈ ಬಗ್ಗೆ ಅನುಸರಣಾ ವರದಿ ಸಲ್ಲಿಸಬೇಕು. ಈ ಹಿಂದೆ ಟೆಂಡರ್ ರದ್ದುಪಡಿಸಲು ಕಾರಣವಾಗಿದ್ದ ಅಂಶಗಳನ್ನು ಗುರುತಿಸಿ ಅವುಗಳನ್ನು ಮಾರ್ಪಾಡುಗಳನ್ನು ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸುವ ಸಲುವಾಗಿ ಈ ಟೆಂಡರ್ ಪ್ರಕ್ರಿಯೆಯ ಎಲ್ಲ ಕಡತಗಳನ್ನೂ ಸಲ್ಲಿಸಬೇಕು' ಎಂದು ಅವರು ನಿರ್ದೇಶನ ನೀಡಿದ್ದಾರೆ.

'ಇಲಾಖೆಯು ಈ ಹಿಂದೆ ಕಪ್ಪುಪಟ್ಟಿಗೆ ಸೇರಿಸಿದ್ದ ಗುತ್ತಿಗೆದಾರರಿಗೆ ಒಂದು ಪ್ಯಾಕೇಜ್‌ನ ಕಾಮಗಾರಿ ನೀಡಲು ಮುಂದಾಗಿರುವ ನಿಗಮದ ನಡೆಗೂ ಮುಖ್ಯಮಂತ್ರಿ ಅವರು ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು' ಎಂದು ಗೊತ್ತಾಗಿದೆ.

ನಗರದಲ್ಲಿ ಒಟ್ಟು 191 ಕಿ.ಮೀ ಉದ್ದದ ಕಾರಿಡಾರ್‌ಗಳ ನಿರ್ವಹಣೆಯ ಹೊಣೆಯನ್ನು ಬಿಬಿಎಂಪಿಯ ಬದಲು ಕೆಆರ್‌ಡಿಸಿಎಲ್‌ಗೆ ರಾಜ್ಯ ಸರ್ಕಾರ ವಹಿಸಿದೆ. ಈ ಕಾರಿಡಾರ್‌ಗಳ ಉನ್ನತೀಕರಣಕ್ಕೆ ಒಟ್ಟು ₹ 335.17 ಕೋಟಿ, ದೈನಂದಿನ ನಿರ್ವಹಣೆಗೆ ಮೊದಲ ವರ್ಷಕ್ಕೆ ₹ 142.12 ಕೋಟಿ, ಇನ್ನುಳಿದ ನಾಲ್ಕು ವರ್ಷಗಳ ನಿರ್ವಹಣೆಗೆ ₹ 643.19 ಕೋಟಿ ವೆಚ್ಚವಾಗುತ್ತದೆ ಎಂದು ಕೆಆರ್‌ಡಿಸಿಎಲ್ ಅಂದಾಜಿಸಿತ್ತು. ಈ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕುರಿತ ನಾಲ್ಕು ಪ್ಯಾಕೇಜ್‌ಗಳೂ ಸೇರಿ ಒಟ್ಟು ₹1,120.48 ಕೋಟಿ ವೆಚ್ಚದ ಟೆಂಡರ್‌ಗಳನ್ನು ನಿಗಮ ಈ ಹಿಂದೆ ಅಂತಿಮಗೊಳಿಸಿತ್ತು.

ಈ ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ದುಬಾರಿ ವೆಚ್ಚ ಮಾಡುವುದು, ವೈಟ್‌ಟಾಪಿಂಗ್ ಮಾಡಲಾದ ರಸ್ತೆಗಳ ನಿರ್ವಹಣೆಗೂ (ಒಟ್ಟು 191 ಕಿ.ಮೀ ರಸ್ತೆಯಲ್ಲಿ 53.42 ಕಿ.ಮೀ ರಸ್ತೆಗಳನ್ನು ವೈಟ್‌ಟಾಪಿಂಗ್ ಮಾಡಲಾಗಿದೆ) ದುಬಾರಿ ವೆಚ್ಚ ಮಾಡುತ್ತಿರುವುದು, ಕಾಮಗಾರಿಯ ನಿರ್ವಹಿಸಿದ ಗುತ್ತಿಗೆದಾರರು ಕನಿಷ್ಠ ಪಕ್ಷ ಆರಂಭಿಕ ಎರಡು ವರ್ಷ ಕಾಲ (ದೋಷ ಬಾಧ್ಯತಾ ಅವಧಿ) ರಸ್ತೆಗಳ ನಿರ್ವಹಣೆ ಮಾಡುವ ಉತ್ತರದಾಯಿತ್ವ ಹೊಂದಿದ್ದರೂ ಮತ್ತೆ ಅವರಿಗೆ ನಿರ್ವಹಣೆ ವೆಚ್ಚ ಭರಿಸುವುದೂ ಸೇರಿದಂತೆ ಈ ಟೆಂಡರ್‌ನ ಅನೇಕ ಲೋಪಗಳ ಬಗ್ಗೆ 'ಪ್ರಜಾವಾಣಿ' ಸರಣಿ ವರದಿಗಳ ಮೂಲಕ ಸರ್ಕಾರದ ಗಮನ ಸೆಳೆದಿತ್ತು. ಈ ವಿಚಾರಗಳನ್ನೇ ಮುಂದಿಟ್ಟುಕೊಂಡು ಮುಖ್ಯಮಂತ್ರಿಯವರು ಕೆಆರ್‌ಡಿಸಿಎಲ್‌ನಿಂದ ವಿವರಣೆ ಕೇಳಿದ್ದರು. ನಿಗಮವು ಈ ಬಗ್ಗೆ ಸ್ಪಷ್ಟನೆ ನೀಡಿತ್ತು. ಬಳಿಕ ಮುಖ್ಯಮಂತ್ರಿಯವರು ಹಳೆಯ ಟೆಂಡರ್ ರದ್ದುಪಡಿಸಿ ಅಲ್ಪಾವಧಿಯ ಮರು ಟೆಂಡರ್ ಕರೆಯಬೇಕು ಎಂದು ಸೂಚನೆ ನೀಡಿದ್ದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/6/2022
ದಿನಾಂಕ : 28-01-2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ತುಮಕೂರು – ರಾಯದುರ್ಗ: ಹೊಸ ಬಿಜಿ ಮಾರ್ಗ ಯೋಜನೆ : ದೊಡ್ಡಹಳ್ಳಿ ಮತ್ತು ಕಂಬದೂರು ನಿಲ್ದಾಣಗಳ ಡಿಪೋದಲ್ಲಿ ಹಾಗೂ ದೊಡ್ಡಹಳ್ಳಿ ಮತ್ತು ಕದಿರಿದೇವರಪಲ್ಲಿ ಹೊಸ ರೈಲ್ವೆ ನಿಲ್ದಾಣಗಳ ನಡುವೆ ಕಿ.ಮೀ.130/400 ನಿಂದ ಕಿ.ಮೀ.122/750 ವರೆಗಿನ ರಚನೆಗೆ ಮಷೀನ್ ಕ್ರಷ್ಡ್ ಸ್ಟೋನ್ ಬಲ್ಲಾಸ್ಟ್‌ನ ಸರಬರಾಜು. (ಟೆಂಡರ್ ಉಲ್ಲೇಖ ಸಂ. ಟಿಕೆ–ಆರ್‌ಡಿಜಿ/86)	ರೂ. 3,64,41,000/-
2	ಲೋಂಡಾ – ಮೀರಜ್ ಡಬ್ಲಿಂಗ್ : ಉಗಾರ ಖುರ್ದ, ಶೇಡಬಾಳ ಮತ್ತು ವಿಜಯನಗರ ನಿಲ್ದಾಣಗಳ ಯಾರ್ಡ್ ಒಳಗೊಂಡಂತೆ ಕುಡಚಿ (ಆರ್‌ಡಿ-1 ಮಾತ್ರ ಒಳಗೊಂಡು) ಮತ್ತು ಮೀರಜ್ (ಮೀರಜ್ ಯಾರ್ಡ್ ಹೊರತುಪಡಿಸಿ) ಕಿ.ಮೀ.715/000 ನಿಂದ ಕಿ.ಮೀ.745/350 ವರೆಗೆ (30.35 ಕಿ.ಮೀ) ಬಿಜಿ ಮಾರ್ಗದ ಜೋಡಣೆ ಮತ್ತು ಇತರೆ ವಿವಿಧ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂಖ್ಯೆ : ಎಲ್‌ಡಿ–ಎಂಆರ್‌ಜೆ/65)	ರೂ. 13,34,08,319/-
3	ಗದಗ – ಹೊಟಗಿ ಡಬ್ಲಿಂಗ್ ಯೋಜನೆ : ಕುಡಗಿ ಮತ್ತು ಅಲಿಯಾಬಾದ್ ಯಾರ್ಡ್‌ನಲ್ಲಿ ಟ್ರ್ಯಾಕ್‌ನ ಜೋಡಣೆ ಮತ್ತು ಹಾಕುವ ಕಾಮಗಾರಿ. (ಟೆಂಡರ್ ಉಲ್ಲೇಖ ಸಂಖ್ಯೆ : ಹೆಚ್‌ಜಿಎ/78ಆರ್)	ರೂ. 2,59,10,835/-
4	ತುಮಕೂರು – ರಾಯದುರ್ಗ: ಹೊಸ ಬಿಜಿ ಮಾರ್ಗ ಯೋಜನೆ : ಕದಿರಿದೇವರಪಲ್ಲಿ ಮತ್ತು ದೊಡ್ಡಹಳ್ಳಿ ಹೊಸ ರೈಲ್ವೆ ನಿಲ್ದಾಣಗಳ ನಡುವೆ ಕಿ.ಮೀ. 130/400 ನಿಂದ ಕಿ.ಮೀ.122/750 ವರೆಗೆ ಬಿಜಿ ಟ್ರ್ಯಾಕ್‌ನ ಜೋಡಣೆ ಮತ್ತು ಇತರೆ ಸಂಬಂಧಿತ ಕಾಮಗಾರಿಗಳು. (ಟೆಂಡರ್ ಉಲ್ಲೇಖ ಸಂಖ್ಯೆ ಟಿಕೆ–ಆರ್‌ಡಿಜಿ/87)	ರೂ. 3,28,46,864/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21–02–2022ರಂದು 11:00 ಗಂಟೆವರೆಗೆ.
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು
ಬೆಂಗಳೂರು ದಂಡು
ಪಿಯುಬಿ/399/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22
S.W.Railways SWRRLY SWRRLY

Government of Madhya Pradesh
Office of the Engineer-in-Chief Water Resources Department,
Jal Sansadhan Bhawan, Tulsi Nagar, Bhopal (MP.)
Email Id: ceproc.encwrd.bpl@nic.in Tel: 0755-2767635
Fax: 0755-2552406
N.I.T. No. 872/2021-22/E-in-C/e-tendering
Bhopal, Dated 25.01.2022

Bids for following works are invited on website https://www.mptenders.gov.in Last Date of purchase/download of Bid Document and submission of bid is 01.03.2022, 17:30 hrs. Any amendment/modification can be seen only on the website. Detailed N.I.T. and other details can be viewed on above mentioned website.

S. No.	Tender No.	Work	District	Amount (Lakhs)
1	2022_WRD_181300	On Turnkey Basis:- Construction of Gangai Tank, Lihda Tank, Kheri Tank and Chakora Minor Tank, per detailed scope of work but not limited to that.	Betul	2269.32
2	2022_WRD_181304	On Turnkey Basis:- Construction of Minkur Tank, per detailed scope of work but not limited to that.	Balaghat	1407.49

G-22240/21 Sd/- Chief Engineer (Procurement)
पहला डोज़ रक्षा – दूसरा डोज़ सुरक्षा ।

ಜಿಲ್ಲಾ ಪಂಚಾಯತ್, ರಾಮನಗರ
ಆಯುಷ್ ಇಲಾಖೆ, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ರಾಮನಗರ
ಜಿಲ್ಲಾ ಪಂಚಾಯತ್ ಭವನ, ಎರಡನೇ ಮಹಡಿ, ಬಿ.ಎಂ. ರಸ್ತೆ, ರಾಮನಗರ
ದೂರವಾಣಿ: 080–27272704. ಇ–ಮೇಲ್: ayushdaoramanagara@gmail.com
ಸಂಖ್ಯೆ: ಜಿ.ಆ.ಕಾ.ರಾ/28/ಔಷಧಿ/2021–22 ದಿನಾಂಕ: 01.02.2022

ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆಯುಷ್ ಕಚೇರಿ, ರಾಮನಗರವರು 2021–22ನೇ ಸಾಲಿನ ಔಷಧಿ ಖರೀದಿಗಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಅಪ್‌ಲೋಡ್ ಪ್ರಾರಂಭ ದಿನಾಂಕ: 01.02.2022. ಕೊನೆಯ ದಿನಾಂಕ: 09.02.2022. ವಿವರಗಳನ್ನು (www.eproc.karnataka.gov.in) ನಿಂದ ಪಡೆಯಬಹುದು. ದೂರವಾಣಿ ಸಂಖ್ಯೆ: 080–27272704 ಸಂಪರ್ಕಿಸುವುದು.

ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು
ರಾಮನಗರ
ವಾಸಾಸಂಇ/ರಾನ/ಬ್ರಾಂಚ್/457/2021–22

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: jscbinfo@jscbl.com

ಸಾರ್ವಜನಿಕ ಪ್ರಕಟಣೆ

ಶ್ರೀ ವೆಂಕಟೇಶ್ವರ.ಎಸ್. S/o. ಲೇ. ಸಿದ್ದಯ್ಯ

ಶ್ರೀಮತಿ ಭಾಗ್ಯಲಕ್ಷ್ಮಿ W/o. ಶ್ರೀ ವೆಂಕಟೇಶ್ವರ.ಎಸ್.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಭಾವ ಚಿತ್ರದಲ್ಲಿರುವ ಶ್ರೀ ವೆಂಕಟೇಶ್ವರ .ಎಸ್. S/o ಲೇ. ಸಿದ್ದಯ್ಯ, ಶ್ರೀಮತಿ ಭಾಗ್ಯಲಕ್ಷ್ಮಿ W/o. ಶ್ರೀ ವೆಂಕಟೇಶ್ವರ.ಎಸ್. ಆದ ಇವರು, ನಂ. 37, 1ನೇ ಮಹಡಿ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು– 96, ಇಲ್ಲಿ ವಾಸವಾಗಿರುವ ಇವರು ವಳಗೆರಹಳ್ಳಿ ಗ್ರಾಮ, ಕೆಂಗೇರಿ ಹೋಬಳಿ, ವಾರ್ಡ್‌ನಂ. 159(ಕೆಂಗೇರಿ) ಬೆಂಗಳೂರು–560063. ಇಲ್ಲಿರುವ ಖಾತಾ ನಂ. 49, ಅಸೆಸ್‌ಮೆಂಟ್ ನಂ. 24/1 ಒಳಗೊಂಡಿರುವ, ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರ ದಿಂದ ದಕ್ಷಿಣಕ್ಕೆ:50 ಅಡಿ ಒಟ್ಟು 1500.00 ಚದರ ಅಡಿ. ವಿಸ್ತೀರ್ಣವುಳ್ಳ, ನಂ. 6/3ಡಿ ರ ಮನೆ ಸ್ಥಿರಾಸ್ತಿ ಸದರಿ ಸ್ವತ್ತಿನ ಚೆಕ್ಕುಬಂದಿ, ಪೂರ್ವಕ್ಕೆ: ಖಾಸಗಿ ಸ್ವತ್ತು, ಪಶ್ಚಿಮಕ್ಕೆ: ಖಾಸಗಿ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಸ್ವತ್ತು, ಈ ಸ್ಥಿರಾಸ್ತಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಸ್ಥಿರಾಸ್ತಿಯ ಆಧಾರದ ಮೇಲೆ ಮನೆ ಖರೀದಿ ಸಾಲವಾಗಿ ರೂ. 70.00 ಲಕ್ಷಗಳನ್ನು ಪಡೆದಿರುತ್ತಾರೆ ಹಾಗೂ ಇದೇ ಸ್ಥಿರಾಸ್ತಿ ಮೇಲೆ ಹಲವು ವಿಭಾಗ ಪತ್ರಗಳನ್ನು ಮಾಡಿ ನಕಲಿ ಸ್ಥಿರಾಸ್ತಿ ಸಂಖ್ಯೆಗಳನ್ನು ಸೃಷ್ಟಿಸಿ ಇದರ ಆಧಾರದ ಮೇಲೆ ವಿವಿಧ ಹಣಕಾಸು ಸಂಸ್ಥೆಗಳಲ್ಲಿ ಸ್ಥಿರಾಸ್ತಿ ಖರೀದಿ ಮಾಡುವ ಸಲುವಾಗಿ ಸಾಲವನ್ನು ಪಡೆದಿರುವುದು ಕಂಡು ಬಂದಿರುತ್ತದೆ. ನಮ್ಮ ಬ್ಯಾಂಕಿನ ವತಿಯಿಂದ ಇವರ ವಿರುದ್ಧ ವಿಜಯನಗರ ಪೋಲಿಸ್ ಠಾಣೆಯಲ್ಲಿ 19/01/2022ರಂದು ಎಫ್.ಐ.ಆರ್. ದಾಖಲಿಸಲಾಗಿದ್ದು,ಇದರ ಸಂಖ್ಯೆ 0007/2022 ಆಗಿರುತ್ತದೆ. ಮುಂದಿನ ದಿನಗಳಲ್ಲಿ ಇವರ ಜೊತೆಯಲ್ಲಿ ವ್ಯವಹಾರ ಮಾಡುವಾಗ ಜಾಗರೂಕತೆಯಿಂದ ವ್ಯವಹರಿಸಬೇಕಾಗಿ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಸ್ಥಳ : ಬೆಂಗಳೂರು
ದಿನಾಂಕ : 03/02/2022
ಸಹಿ/– ಅಧ್ಯಕ್ಷರು
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

Form No. 18
Notice for appearance in Appeals Order 41 Rule 14 CPC, and Rules 1, 2, 4 and 11 of Chapter IV Karnataka High Court Rules
IN THE HIGH COURT OF KARNATAKA AT BENGALURU
MFA No. 2707 / 2021 (FC-DB)

Appellant : SMT. BHAGYASHREE S. W/O RAGHAVENDRA C., D/O MR. SUBRAMANYA P C, AGED ABOUT 29 YEARS, R/AT NO.008, BENAKA HOMES, LIBERO APTS, SENNAPPA LAYOUT, NEW BEL ROAD, BANGALORE-560 094.
PRESENTLY R/AT SHREE SADAN, NEAR SYNDICATE BANK, ALAKE, MANGALURU-575 003
By Sri RUDRABHUSHAN C.B., ADVOCATE

Vs

Respondent : SRI. RAGHAVENDRA C, S/O LATE MR.CHANDRASHEKARA RAO, AGED ABOUT 37 YEARS, R/AT NO.008, BENAKA HOMES, LIBERO APTS, SENNAPPA LAYOUT, NEW BEL ROAD, BENGALORE-560 094.

Appeal From the Judgement/Award/Order passed on 11/09/2020 in M.C. Number 2920/2018 on the file of the V ADDL. PRL. JUDGE, FAMILY COURT, BENGALURU.

To, Respondent : SRI. RAGHAVENDRA C, S/O LATE MR. CHANDRASHEKARA RAO, AGED ABOUT 37 YEARS, R/AT NO.008, BENAKA HOMES, LIBERO APTS, SENNAPPA LAYOUT, NEW BEL ROAD, BENGALORE-560 094.

Whereas the aforementioned Appeal preferred has been registered by this Court.

NOTICE IS HEREBY given to you to appear in this Court in person or through an Advocate duly instructed or through some one authorized by law to act for you in this case on 10/03/2022 at 10.30 a.m., in case you intend to contest the appeal. If you fail so to appear, the appeal will be dealt with, heard and decided in your absence.

Given under my hand and the seal of this court on 20TH DAY OF JANUARY 2022.

By order of the Court,
(SYED MUKTHAR AHMED)
Assistant Registrar

ಟಿಮ್‌ಕೆನ್ ಇಂಡಿಯಾ ನಿಯಮಿತ

TIMKEN

CIN - L29130KA1996PLC048230

ನೋಂದಣಿ ಕಛೇರಿ: 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100
ದೂರವಾಣಿ : 080 41362000 ಫ್ಯಾಕ್ಸ್ : 080 41362010 ಇ-ಮೇಲ್ : tilinvestor@timken.com
ವೆಬ್‌ಸೈಟ್ : www.timken.com/en-in

ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ಡಿಸೆಂಬರ್ 31, 2021ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಒಂಬತ್ತು ತಿಂಗಳು ಅವಧಿಯ ಪರಿಶೋಧಿತವಲ್ಲದ ಆರ್ಥಿಕ ಫಲಿತಾಂಶದ ಪ್ರತ್ಯೇಕವಾದ ಸಾರಾಂಶ

(ರೂ. ದಶಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	31/12/2021 ಕ್ಕೆ ಕೊನೆಗೊಂಡ ತ್ರೈಮಾಸಿಕ (ಪರಿಶೋಧಿತವಲ್ಲದ)	31/12/2020 ಕ್ಕೆ ಕೊನೆಗೊಂಡ ಕಳೆದ ವರ್ಷದ ತ್ರೈಮಾಸಿಕಕ್ಕೆ ಅನುಗುಣವಾಗಿ (ಪರಿಶೋಧಿತವಲ್ಲದ)	31/12/2021 ಕ್ಕೆ ಕೊನೆಗೊಂಡ ಪ್ರಸ್ತುತ ಅವಧಿಯ ವರ್ಷದಿಂದ ಇಲ್ಲಿಯವರೆಗಿನ ಅಂಶಗಳು (ಪರಿಶೋಧಿತವಲ್ಲದ)
1.	ಕಾರ್ಯಾಚರಣೆಯಿಂದ ಒಟ್ಟು ಆದಾಯ (ನಿವ್ವಳ)	5,128	3,848	15,452
2.	ನಿವ್ವಳ ಲಾಭ / (ನಷ್ಟ) ಈ ಅವಧಿಗೆ (ತೆರಿಗೆ, ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ಮುನ್ನ)	950	498	2,771
3.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ಮುನ್ನ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	950	498	2,771
4.	ನಿವ್ವಳ ಲಾಭ / (ನಷ್ಟ) ಈ ಅವಧಿಯ ತೆರಿಗೆ ನಂತರ (ಅಸಾಮಾನ್ಯವಾದ ಮತ್ತು / ಅಥವಾ ಅಸಾಧಾರಣ ಬಾಬ್ತುಗಳ ನಂತರ #)	698	372	2,057
5.	ಈ ಅವಧಿಯ ಒಟ್ಟು ಸಮಸ್ತ ಆದಾಯ {ಲಾಭ/(ನಷ್ಟ) ಒಳಗೊಂಡಂತೆ ಈ ಅವಧಿಗೆ (ತೆರಿಗೆ ನಂತರ) ಹಾಗೂ ಇತರೆ ಸಮಸ್ತ ಆದಾಯ (ತೆರಿಗೆ ನಂತರ)}	698	366	2,032
6.	ಈಕ್ವಿಟಿ ಷೇರು ಬಂಡವಾಳ	752	752	752
7.	ಪ್ರತಿ ಷೇರಿನ ಗಳಿಕೆಗಳು (ಪ್ರತಿ ರೂ.10/– ರಂತೆ) (ನಿರಂತರ ಕಾರ್ಯಾಚರಣೆಗಳಿಗೆ) ಮೂಲತವಾದ ಮತ್ತು ದುರ್ಬಲಗೊಳಿಸಿದ *ವಾರ್ಷಿಕವಲ್ಲದ	9.28*	4.94*	27.35*

ಮೇಲೆ ತಿಳಿಸಿರುವ ಫಲಿತಾಂಶವು ಸೆಕ್ಯೂರಿಟಿಸ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ ನಿಬಂಧನೆ 33 (ಲಿಸ್ಟಿಂಗ್ ಅನಿವಾರ್ಯತೆ ಹಾಗೂ ತೆರೆದ ದಾಖಲಾತಿ ಅವಶ್ಯಕತೆಗಳು) ರ ಅನ್ವಯ ನಿಬಂಧನೆ 2015 ರ ಆದೇಶದ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿದ ತ್ರೈಮಾಸಿಕ ಅವಧಿಯ ಆರ್ಥಿಕ ಫಲಿತಾಂಶದ ಸಂಪೂರ್ಣವಾದ ನಮೂನೆಯ ಪ್ರತ್ಯೇಕವಾದ ಸಾರಾಂಶ. ತ್ರೈಮಾಸಿಕದ ಆರ್ಥಿಕ ಫಲಿತಾಂಶದ ಪೂರ್ಣ ನಮೂನೆಯು ಸ್ಟಾಕ್‌ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ (BSE: www.bseindia.com & NSE: www.nseindia.com)ಮತ್ತು ಕಂಪನಿ ವೆಬ್‌ಸೈಟ್ www.timken.com/en-in ನಲ್ಲಿ ವೀಕ್ಷಿಸಬಹುದು.

ಬೆಂಗಳೂರು
2ನೇ ಫೆಬ್ರವರಿ, 2022

ಮಂಡಳಿಯ ಆದೇಶದಂತೆ
ಸಹಿ/– ಸಂಜಯ್ ಕೌಲ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 05159352

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, ('ಕಕ್ಷಿದಾರ') ಈ ಕೆಳಕಂಡ "ಷೆಡ್ಯೂಲ್" ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ "ಷೆಡ್ಯೂಲ್ ಸ್ವತ್ತುಗಳು" ಎಂದು ಕರೆಯಲ್ಪಡಲಾಗಿದ್ದು, ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ತಾವೆ ಸದರಿ ಷೆಡ್ಯೂಲ್ ಸ್ವತ್ತುಗಳ ಏಕಮೇವ ಮತ್ತು ನಿರುಪಾಧಿಕ ಮಾಲೀಕರೆಂದೂ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ ಅಥವಾ ಮತ್ತಾವುದೇ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಂತಹ ತಮ್ಮ ಕ್ಲೇಮುಗಳನ್ನು ಮತ್ತು ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ 15 (ಹದಿನೈದು) ದಿನಗಳ ಅವಧಿಯೊಳಗೆ ಈ ಕೆಳಕಂಡವರಿಗೆ ತಲುಪುವಂತೆ ಸಲ್ಲಿಸತಕ್ಕದ್ದು. ತಿಳಿಸಿದ 15 (ಹದಿನೈದು) ದಿನಗಳ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ, ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಅಧಿಕಾರ, ಹಿತಾಸಕ್ತಿ ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರಗಳು)

ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್ ಪುರಂ ಹೋಬಳಿ, ಪಟ್ಟಂದೂರು ಅಗ್ರಹಾರ ಗ್ರಾಮ, ಇಲ್ಲಿ ಪರಿವರ್ತನೆಯಾಗಿರುವ ಸ್ಥಿರಾಸ್ತಿ ಸ್ವತ್ತಿನ ಒಟ್ಟಾರೆ ವಿಸ್ತೀರ್ಣ 11 ಎಕರೆಗಳು 10 ಗುಂಟೆಗಳು, ಹಾಗೂ ಇದರ ಚಕ್ಕುಬಂದಿ ಕೆಳಕಂಡಂತಿರುವುದು:

ಮಾಲೀಕರ ಹೆಸರು	ಸರ್ವೆ ನಂ	ವಿಸ್ತೀರ್ಣ	ಚಕ್ಕುಬಂದಿ: ಪೂರ್ವಕ್ಕೆ :	ಪಶ್ಚಿಮಕ್ಕೆ :	ಉತ್ತರಕ್ಕೆ :	ದಕ್ಷಿಣಕ್ಕೆ :
ಸಂಧ್ಯಾ ರ್ಹೈನ್ ರಿವರ್ ಪ್ರಾಜೆಕ್ಟ್ಸ್ ಪ್ರೈ ಲಿ.,	27(ಪಿ)	4 ಗುಂಟೆಗಳು	ರಸ್ತೆ ಮತ್ತು ಚನ್ನಸಂದ್ರ ಗಡಿ	ಸರ್ವೆ ನಂ.27 ರ ಉಳಿದ ಭಾಗ	ಸರ್ವೆ ನಂ.26	ಸರ್ವೆ ನಂ.30
ಸಂಧ್ಯಾ ರ್ಹೈನ್ ರಿವರ್ ಪ್ರಾಜೆಕ್ಟ್ಸ್ ಪ್ರೈ ಲಿ.,	30(ಪಿ)	28 ಗುಂಟೆಗಳು	ರಸ್ತೆ ಮತ್ತು ಚನ್ನಸಂದ್ರ ಗಡಿ	ಸರ್ವೆ ನಂ.30 ರ ಉಳಿದ ಭಾಗ	ಸರ್ವೆ ನಂ.27	ಸರ್ವೆ ನಂ.31
ಸಂಧ್ಯಾ ರ್ಹೈನ್ ರಿವರ್ ಪ್ರಾಜೆಕ್ಟ್ಸ್ ಪ್ರೈ ಲಿ.,	31(ಪಿ)	03 ಎಕರೆ 19 ಗುಂಟೆಗಳು	ರಸ್ತೆ ಮತ್ತು ಚನ್ನಸಂದ್ರ ಗಡಿ	ಸರ್ವೆ ನಂ.31 ರ ಉಳಿದ ಭಾಗ	ಸರ್ವೆ ನಂ.30	ಸರ್ವೆ ನಂ.36
ಸಂಧ್ಯಾ ರ್ಹೈನ್ ರಿವರ್ ಪ್ರಾಜೆಕ್ಟ್ಸ್ ಪ್ರೈ ಲಿ.,	35(ಪಿ)	18 ಗುಂಟೆಗಳು	ಸರ್ವೆ ನಂ.36	ಸರ್ವೆ ನಂ.35 ರ ಉಳಿದ ಭಾಗ	ಸರ್ವೆ ನಂ.36	ರಸ್ತೆ
ಸಂಧ್ಯಾ ರ್ಹೈನ್ ರಿವರ್ ಪ್ರಾಜೆಕ್ಟ್ಸ್ ಪ್ರೈ ಲಿ.,	36(ಪಿ)	06 ಎಕರೆ 21 ಗುಂಟೆಗಳು	ರಸ್ತೆ ಮತ್ತು ಚನ್ನಸಂದ್ರ ಗಡಿ	ಸರ್ವೆ ನಂ.35 ಮತ್ತು ಸರ್ವೆ ನಂ.36 ರ ಉಳಿದ ಭಾಗ	ಸರ್ವೆ ನಂ.31	ರಸ್ತೆ

ಸಹಿ/–
ಶ್ರೀನಿವಾಸ್ ಬಿ.ಆರ್. & ಬ್ರಿಜಿತ ಪ್ರಕಾಶ್, ಪಾಲುದಾರರು
ದುಅ ಅಸೋಸಿಯೇಟ್ಸ್,
ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಅಲಸೂರು ರಸ್ತೆ, ಬೆಂಗಳೂರು–560 042
ದೂ. ಸಂ. 91–80–25588799/ 25589909, ಫ್ಯಾಕ್ಸ್ : 91–80–25588801.

3M INDIA LIMITED

CIN:L31300KA1987PLC013543, Regd Office: 48-51, Electronics City, Hosur Road, Bengaluru - 560100, Website: www.3m.com/in

Extract of the Standalone and Consolidated Financial Results for the quarter and nine months ended 31 December 2021

(Rs. in Lakhs, except per share data, unless otherwise stated)

Particulars	Standalone: 3 months ended 31 December 2021 (Unaudited)	9 months ended 31 December 2021 (Unaudited)	3 months ended 31 December 2020 (Unaudited)	12 months ended 31 March 2021 (Audited)	Consolidated: 3 months ended 31 December 2021 (Unaudited)	9 months ended 31 December 2021 (Unaudited)	3 months ended 31 December 2020 (Unaudited)	12 months ended 31 March 2021 (Audited)
Total income from operations (including other income)	76,975.30	225,159.27	69,027.78	244,723.16	83,397.01	243,435.89	74,712.91	262,956.87
Net Profit for the period (before tax, Exceptional and / or Extraordinary items)	9,119.69	21,631.09	7,133.87	20,244.08	8,898.40	21,610.62	8,073.68	21,992.16
Net Profit for the period before tax (after Exceptional and / or Extraordinary items)	9,119.69	21,631.09	7,133.87	20,244.08	8,898.40	21,610.62	8,073.68	21,992.16
Net Profit for the period after tax	6,773.81	16,058.33	5,267.51	14,930.09	6,674.44	16,105.60	5,938.71	16,237.65
Total comprehensive income for the period [Comprising Profit / (Loss) for the period (after tax) and other comprehensive income (after tax)]	6,709.96	15,866.78	5,173.96	14,674.69	6,601.44	15,886.60	5,835.41	15,945.64
Equity share capital	1,126.51	1,126.51	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)	236,891.01	236,891.01	214,430.30	221,024.23	205,793.00	205,793.00	182,841.55	189,906.40
Earnings per share (in Rs.) (of Rs. 10/- each)								
a) Basic (in Rs.)	60.13	142.55	46.75	132.53	59.25	142.97	52.72	144.14
b) Diluted (in Rs.)	60.13	142.55	46.75	132.53	59.25	142.97	52.72	144.14

Notes:
1. The above standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and approved by the Board of Directors on 03 February 2022.
2. The above is an extract of the detailed format for the unaudited financial results for the quarter ended 31 December 2021 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter ended 31 December 2021 are available on the Bombay Stock Exchange website (www.bseindia.com), the National Stock Exchange website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

Place: Bengaluru
Date: 03 February 2022

By Order of the Board
For 3M India Limited
Ramesh Ramadurai
Managing Director

‘ಗೇಟ್’ ಪರೀಕ್ಷೆ ಮುಂದೂಡಲು ಸುಪ್ರೀಂಕೋರ್ಟ್ ನಿರಾಕರಣೆ

ನವದೆಹಲಿ (ಪಿಟಿಐ): ಇದೇ 5ರಂದು ನಿಗದಿಯಾಗಿರುವ ಎಂಜಿನಿಯರಿಂಗ್ ಗ್ರಾಜುಯೇಟ್ ಆಪ್ಟಿಟ್ಯೂಡ್ ಪರೀಕ್ಷೆಯನ್ನು (ಗೇಟ್) ಮುಂದೂಡಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ.

ಕೋವಿಡ್ ಪಿಡುಗಿನ ಸಂಬಂಧ ದೇಶದ ವಿವಿಧೆಡೆ ನಿರ್ಬಂಧ ಜಾರಿಯಲ್ಲಿರುವ ಕಾರಣ ಪರೀಕ್ಷೆಯನ್ನು ಮುಂದೂಡುವಂತೆ ಕೆಲ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯ ಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯ ಕಾಂತ್ ಮತ್ತು ವಿಕ್ರಮ್ ನಾಥ್ ಅವರ ಪೀಠ ವಿಚಾರಣೆ ನಡೆಸಿತು.

ಪರೀಕ್ಷೆಗೆ 48 ಗಂಟೆಗಳ ಮೊದಲು ಅದನ್ನು ಮುಂದೂಡು ವುದು ಅವ್ಯವಸ್ಥೆ ಮತ್ತು ಅನಿಶ್ಚಿತತೆಗೆ ಕಾರಣವಾಗುತ್ತದೆ. ಪರೀಕ್ಷೆಗಾಗಿ ತಯಾರಿ ನಡೆಸಿರುವ ವಿದ್ಯಾರ್ಥಿಗಳ ಜೀವನದೊಂದಿಗೆ ಆಟವಾಡಲು ಸಾಧ್ಯವಿಲ್ಲ ಎಂದು ಪೀಠ ಅಭಿಪ್ರಾಯಪಟ್ಟಿತು.

ಪರೀಕ್ಷೆಯನ್ನು ಯಾವಾಗ ನಡೆಸಬೇಕು ಎಂಬುದು ಶೈಕ್ಷಣಿಕ ನೀತಿಯ ವಿಷಯವಾಗಿದ್ದು, ನ್ಯಾಯಾಲಯ ಅದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಹೇಳಿತು.

ಪರೀಕ್ಷೆಗೆ 9 ಲಕ್ಷ ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ. ಇದರಲ್ಲಿ 20,000 ವಿದ್ಯಾರ್ಥಿಗಳು ಪರೀಕ್ಷೆಯನ್ನು ಮುಂದೂಡುವಂತೆ ಆನ್‌ಲೈನ್ ಮೂಲಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಕೊಡಿಗೇಹಳ್ಳಿ: ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರಿಂದ ಪರಿಶೀಲನೆ

ಕೆಳಸೇತುವೆ ಪೂರ್ಣಕ್ಕೆ 45 ದಿನಗಳ ಗಡುವು

ಪ್ರಜಾವಾಣಿ ವಾರ್ತೆ

ಯಲಹಂಕ: ಕೊಡಿಗೇಹಳ್ಳಿ-ವಿರೂಪಾಕ್ಷಪುರ ರೈಲ್ವೆ ಕೆಳಸೇತುವೆ ಮತ್ತು ಜಿಕೆವಿಕೆ ಹಿಂಭಾಗದ ಸಹಕಾರ ನಗರ ಎಲ್ ಆ್ಯಂಡ್ ಟಿ ಕೆಳಸೇತುವೆ ಕಾಮಗಾರಿಯನ್ನು ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಗುರುವಾರ ಪರಿಶೀಲಿಸಿದರು. 45 ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಗಡುವು ನೀಡಿದರು.

ಬಳ್ಳಾರಿ ಮುಖ್ಯರಸ್ತೆ ಮೂಲಕ ಸಹಕಾರ ನಗರ, ವಿದ್ಯಾರಣ್ಯಪುರ, ದೊಡ್ಡಬೊಮ್ಮಸಂದ್ರ, ತಿಂಡ್ಲು ಸೇರಿದಂತೆ ಹಲವು ಬಡಾವಣೆಗಳಿಗೆ ಈ ಮಾರ್ಗದಲ್ಲಿಯೇ ಸಂಚರಿಸಬೇಕಾಗಿದೆ. ಪ್ರತಿ ಭಾರಿ ಮಳೆ ಬಂದಾಗಲೂ ಸೇತುವೆಯ ಕೆಳಭಾಗ ಜಲಾವೃತವಾಗಿ ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ. ವಾಹನ ಸವಾರರು ಪರ್ಯಾಯ ಮಾರ್ಗಗಳ ಮೂಲಕ ನಾಲ್ಕೈದು ಕಿಲೋ ಮೀಟರ್ ಸುತ್ತಿಕೊಂಡು ತಮ್ಮ ಬಡಾವಣೆಗಳಿಗೆ ಸಂಚರಿಸಬೇಕಾದ ಪರಿಸ್ಥಿತಿ ಇದೆ.

‘ಕಳೆದ 10 ವರ್ಷಗಳಿಂದ ಈ ಭಾಗದ ಜನ ಹಲವು ರೀತಿಯ ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ರೈಲ್ವೆ, ಬಿಬಿಎಂಪಿ ಹಾಗೂ ಜಲ ಮಂಡಳಿ ಅಧಿಕಾರಿಗಳಿಗೆ ಸಾಕಷ್ಟು ಭಾರಿ ದೂರು ನೀಡಿ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದು ಸ್ಥಳೀಯರು ದೂರಿದರು.

‘ಕೊಡಿಗೇಹಳ್ಳಿಯ ವಿರೂಪಾಕ್ಷಪುರ ಮತ್ತು ಸಹಕಾರ ನಗರದ ಜಿಕೆವಿಕೆ ಕೆಳ ಸೇತುವೆಗಳು ಮಳೆಗಾಲದಲ್ಲಿ ಸಂಪೂರ್ಣ ಜಲಾವೃತ ಆಗುವುದರಿಂದ ವರ್ಷದಲ್ಲಿ 6 ತಿಂಗಳ ಕಾಲ ಇಲ್ಲಿನ ಜನಜೀವನ ಅಸ್ತವ್ಯಸ್ತವಾಗುತ್ತಿದೆ. ನೀರು ಹೊರಹೋಗಲು ಅವಕಾಶವಿದ್ದು, ಬಿಬಿಎಂಪಿ ಮತ್ತು ರೈಲ್ವೆ ಇಲಾಖೆಯಲ್ಲಿ ತಾಂತ್ರಿಕ ಪರಿಣಿತರಿದ್ದರೂ ಸಹ, ಸಮಸ್ಯೆ ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ’ ಎಂದು ಬಿಜೆಪಿ ಮುಖಂಡ ಕೆ.ಎನ್. ಚಕ್ರಪಾಣಿ ದೂರಿದರು.

ಜನರ ಸಮಸ್ಯೆ ಆಲಿಸಿದ ಉಪಲೋಕಾಯುಕ್ತರು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. 45 ದಿನಗಳ ಒಳಗಾಗಿ ಸಮಸ್ಯೆ ಬಗೆಹರಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಂಬಂಧಪಟ್ಟ ಇಲಾಖೆಗಳ ಜೊತೆ ಸೋಮವಾರ ಸಭೆ ನಡೆಸಲಾಗುವುದು. ಅವೈಜ್ಞಾನಿಕ ಕೆಳಸೇತುವೆ ನಿರ್ಮಾಣದಿಂದ ಸ್ಥಳೀಯರು ಎದುರಿಸುತ್ತಿರುವ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಿಸಿಕೊಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್‌.ಪಾಟೀಲ ಅವರು ಗುರುವಾರ ಕೊಡಿಗೇಹಳ್ಳಿ ಕೆಳ ಸೇತುವೆ ಕಾಮಗಾರಿಯನ್ನು ಪರಿಶೀಲನೆ ನಡೆಸಿದರು. ಸ್ಥಳೀಯ ಮುಖಂಡ ಕೆ.ಎನ್‌.ಚಕ್ರಪಾಣಿ ಮತ್ತು ಅಧಿಕಾರಿಗಳು ಇದ್ದರು

ಜೂನ್ 5ರಂದು ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆ

ನವದೆಹಲಿ (ಪಿಟಿಐ): ದೇಶದಲ್ಲಿ 861 ಹುದ್ದೆಗಳ ಭರ್ತಿಗಾಗಿ 2022ನೇ ಸಾಲಿನ ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಯನ್ನು ಜೂನ್ 5ರಂದು ನಡೆಸುವ ಸಂಬಂಧ ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ಅಧಿಸೂಚನೆ ಹೊರಡಿಸಿದೆ.

ಅಭ್ಯರ್ಥಿಗಳು ಫೆಬ್ರುವರಿ 22ರಂದು ಸಂಜೆ 6ರೊಳಗೆ ಆನ್‌ಲೈನ್‌ನಲ್ಲಿ (www.upsconline.nic.in) ಅರ್ಜಿ ಸಲ್ಲಿಸಬಹುದು. ಆನ್‌ಲೈನ್ ಅರ್ಜಿಗಳನ್ನು ಮಾರ್ಚ್ 1 ರಿಂದ ಮಾರ್ಚ್ 7 ರ ಸಂಜೆ 6 ರೊಳಗೆ ಹಿಂಪಡೆಯಬಹುದು.

ಕೇಂದ್ರದ ವಿವಿಧ ಇಲಾಖೆಗಳಲ್ಲಿ 8.72 ಲಕ್ಷ ಹುದ್ದೆ ಖಾಲಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2020 ಮಾರ್ಚ್1ರ ವರೆಗೆ 8.72 ಲಕ್ಷ ಹುದ್ದೆಗಳು ಖಾಲಿ ಇದ್ದವು ಎಂದು ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಅವರು ಗುರುವಾರ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ), ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್‌ಸಿ) ಮತ್ತು ರೈಲ್ವೆ ನೇಮಕಾತಿ ಮಂಡಳಿಗಳು (ಆರ್‌ಆರ್‌ಬಿ) 2018–19 ಮತ್ತು 2020–21ರ ಅವಧಿಯಲ್ಲಿ 2.65 ಲಕ್ಷ ನೇಮಕಾತಿಗಳನ್ನು ನಡೆಸಿವೆ ಎಂದೂ ಲಿಖಿತ ಉತ್ತರದಲ್ಲಿ ಸಚಿವರು ತಿಳಿಸಿದ್ದಾರೆ.

ಸಿಬ್ಬಂದಿ ನೇಮಕಾತಿ ಮಾಡುವ ಯುಪಿಎಸ್‌ಸಿ ಯಲ್ಲೇ 485 ಹುದ್ದೆಗಳು ಖಾಲಿಯಿವೆ. ಇದರಲ್ಲಿ ಎ ಗುಂಪಿನ 45, ಬಿ ಗುಂಪಿನ 240 ಮತ್ತು ಸಿ ಗುಂಪಿನ 200 ಹುದ್ದೆಗಳು ಸೇರಿವೆ ಎಂದು ಹೇಳಿದ್ದಾರೆ.

ಕಾದ ಎಣ್ಣೆ ಸುರಿದ ಪ್ರಕರಣ: ವ್ಯಕ್ತಿ ಬಂಧನ

ಬೆಂಗಳೂರು: ಪತ್ನಿ ಹಾಗೂ ಮಗಳ ಮೇಲೆ ಕಾದ ಎಣ್ಣೆ ಸುರಿದಿದ್ದ ಆರೋಪಿ ಥಾಮಸ್ ಎಂಬಾತನನ್ನು ಆಡುಗೋಡಿ ಪೊಲೀಸರು ಬಂಧಿಸಿದ್ದಾರೆ.

‘ಎಲ್.ಆರ್. ನಗರದ ನಿವಾಸಿ ಥಾಮಸ್, ಜ. 30ರಂದು ಕೃತ್ಯ ಎಸಗಿ ಪರಾರಿಯಾಗಿದ್ದ. ಘಟನೆಯಲ್ಲಿ ಗಾಯಗೊಂಡಿದ್ದ ಆತನ ಪತ್ನಿ ಅಂಥೋಣಿಯಮ್ಮ ಹಾಗೂ ಮಗಳು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಲಾಗಿದೆ. ಆತ ಪತ್ನಿಯ ಶೀಲ ಶಂಕಿಸಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದ. ಹಲ್ಲೆಯನ್ನೂ ಮಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

ರಾಜಕುಮಾರ್ ಸಮಾಧಿ ರಸ್ತೆಯಲ್ಲಿ ಇರುವ ಕಂಠೀರವ ಸ್ಟುಡಿಯೋ ಎದುರು ಅಂಡರ್ ಪಾಸ್ ನಿರ್ಮಿಸುವ ಕಾಮಗಾರಿ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವುದು (ಎಡ ಚಿತ್ರ). ಕಾಮಗಾರಿ ಸ್ಥಗಿತಗೊಂಡು ಕಸದ ತಾಣವಾಗಿರುವ ಸ್ಥಳ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಕಂಠೀರವ ಸ್ಟುಡಿಯೋ ಎದುರಿನ ಕೆಳ ಸೇತುವೆ ಕಾಮಗಾರಿ ನನೆಗುದಿಗೆ

ಕೆಳ ಸೇತುವೆ ಕಾಮಗಾರಿಗೆ ಬಿಡದ ಗ್ರಹಣ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ವಾಹನ ಸಂಚಾರಕ್ಕೆ ಅನುಕೂಲ ಆಗಬೇಕಿದ್ದ ಅಂಡರ್ ಪಾಸ್ ಕಾಮಗಾರಿ ಅರ್ಧಕ್ಕೆ ನಿಂತು ಒಂಬತ್ತು ವರ್ಷಗಳೇ ಆಗಿವೆ. ಕಂಠೀರವ ಸ್ಟುಡಿಯೋ ಬಳಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಲು ಹೊರಟಿದ್ದ ಕಾಮಗಾರಿ ಸ್ಥಗಿತಗೊಂಡು ವಾಹನ ಸವಾರರು ನಿತ್ಯ ಪರದಾಡುವಂತಾಗಿದೆ.

ವಾಹನ ಸಂಚಾರ ದಟ್ಟಣೆ ಕಡಿಮೆ ಮಾಡಲು ಮತ್ತು ಸಿಗ್ನಲ್ ರಹಿತ ವಾಹನ ಸಂಚಾರಕ್ಕೆ ಅನುಕೂಲ ಆಗುವಂತೆ ನಿರ್ಮಿಸಿದ್ದ ಅಂಡರ್ ಪಾಸ್ ಈಗ ಕಸ ಸುರಿಯುವ ತಾಣವಾಗಿ ಮಾರ್ಪಟ್ಟಿದೆ. ಈ ಕಾಮಗಾರಿಗೆ ಅಗತ್ಯ ಇರುವ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಲು ಅನುದಾನ ಲಭ್ಯವಾಗದ ಕಾರಣಕ್ಕೆ ಕಾಮಗಾರಿ ನಿಂತಲ್ಲೇ ನಿಂತಿದೆ.

ಈ ಕೆಳಸೇತುವೆಯ ಒಂದು ಬದಿ ಮಹಾಲಕ್ಷ್ಮೀ ಲೇಔಟ್ ಕ್ಷೇತ್ರಕ್ಕೆ ಒಳಪಟ್ಟರೆ, ಮತ್ತೊಂದು ಬದಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುತ್ತಿದೆ. 2013-14ರಲ್ಲಿ ಈ ಅಂಡರ್‌ಪಾಸ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಇದಕ್ಕಾಗಿ ₹18 ಕೋಟಿ ಅನುದಾನ ನಿಗದಿ ಮಾಡಲಾಗಿದ್ದು, ಅದರಲ್ಲಿ ₹8 ಕೋಟಿಯಷ್ಟು ಖರ್ಚಾಗಿದೆ. ಅಷ್ಟಕ್ಕೆ ಕಾಮಗಾರಿ ಸ್ಥಗಿತಗೊಂಡು ಒಂಬತ್ತು ವರ್ಷಗಳೇ ಕಳೆದಿವೆ.

'28 ಮನೆಗಳನ್ನು ಸ್ವಾಧೀನ ಮಾಡಿಕೊಂಡು ಶೇ 50ರಷ್ಟು ನಗದು ಪರಿಹಾರ ಮತ್ತು ಬದಲಿ ನಿವೇಶನ ಒದಗಿಸಲು ತೀರ್ಮಾನಿಸಲಾಗಿತ್ತು. ನಗದು ಪರಿಹಾರ ವಿತರಿಸಿದ ಬಿಡಿಎ, ಬದಲಿ ನಿವೇಶನ ಒದಗಿಸಲಿಲ್ಲ. ಹೀಗಾಗಿ, ಕಾಮಗಾರಿ ಮುಂದುವರಿಸಲು ಸಾಧ್ಯವಾಗಿಲ್ಲ. ಬಿಡಿಎ ಅಧಿಕಾರಿಗಳ ಇಚ್ಛಾಶಕ್ತಿ ಕೊರತೆಯೇ ಕೆಳ ಸೇತುವೆ ಕಾಮಗಾರಿ ಸ್ಥಗಿತಗೊಳ್ಳಲು ಕಾರಣ' ಎನ್ನುತ್ತಾರೆ ಸ್ಥಳೀಯರು.

ಈ ಕಾಮಗಾರಿ ಪೂರ್ಣಗೊಂಡಿದ್ದರೆ ಸಿಗ್ನಲ್ ರಹಿತ ವಾಹನ ಸಂಚಾರಕ್ಕೆ ಅನುಕೂಲ ಆಗುತ್ತಿತ್ತು. ಆದರೆ, ಈಗ ವಾಹನಗಳ ಸಂಚಾರಕ್ಕೆ ಇದೇ ಅಂಡರ್ ಪಾಸ್ ಅಡಚಣೆಯಾಗಿ ಪರಿಣಮಿಸಿದೆ. ಮಹಾಲಕ್ಷ್ಮೀ ಲೇಔಟ್, ನಂದಿನಿ ಲೇಔಟ್ ಕಡೆಯಿಂದ ಬರುವ ವಾಹನಗಳು ಗೊರಗುಂಟೆಪಾಳ್ಯ ಕಡೆಗೆ ಬಲ ತಿರುವು ಪಡೆಯಬೇಕೆಂದರೆ ಸುತ್ತಾಡಿಕೊಂಡು ಬರಬೇಕಾದ ಅನಿವಾರ್ಯತೆ ಇದೆ. ಪೀಣ್ಯ ಕೈಗಾರಿಕಾ ಪ್ರದೇಶದಿಂದ ಮಹಾಲಕ್ಷ್ಮೀ ಲೇಔಟ್ ಕಡೆಗೆ ಬರಬೇಕಾದ ಮತ್ತು ವಾಪಸ್ ಹೋಗಬೇಕಾದ ವಾಹನಗಳೂ ಸಂಚಾರ ದಟ್ಟಣೆ ಸೀಳಿಕೊಂಡು ಹೋಗಬೇಕಾದ ಅನಿವಾರ್ಯತೆ ಇದೆ.

ಸುತ್ತು ಬಳಸಿ ಹಾದಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವ ವಾಹನಗಳಿಗೆ ಸಂಚಾರ ಪೊಲೀಸರಿಂದ ದಂಡ ಬೀಳುವುದು ಗ್ಯಾರಂಟಿ. ಕಾಮಗಾರಿ ಆರಂಭಿಸಿ ಅರ್ಧಕ್ಕೆ ನಿಲ್ಲಿಸಿರುವ ಬಿಡಿಎ ಮಾಡಿರುವ ತಪ್ಪಿನಿಂದ ವಾಹನ ಸವಾರರು ತೊಂದರೆ ಅನುಭವಿಸಬೇಕಾಗಿದೆ. ಸುತ್ತು ಬಳಸು ಹಾದಿ ಕ್ರಮಿಸಲು ವಾಹನ ಸವಾರರೂ ದುಬಾರಿ ದರದ ಇಂಧನ ಖರ್ಚು ಮಾಡಬೇಕಾದ ಅನಿವಾರ್ಯತೆಯೂ ಇದೆ ಎಂದು ವಾಹನ ಸವಾರರು ಬೇಸರ ವ್ಯಕ್ತಪಡಿಸುತ್ತಾರೆ.

ಹೊರ ವಲಯ ಒಳ ಬೇಗುದಿ

'ಬಾಕಿ ಪರಿಹಾರಕ್ಕೆ ಅಗತ್ಯ ಕ್ರಮ'

ಉಳಿದ ಕಾಮಗಾರಿಗೆ ಅನುಮೋದನೆ ದೊರೆತಿದೆ. ಪರಿಹಾರ ನೀಡಲು ಹಣ ಇಲ್ಲ ಎಂಬ ಕಾರಣಕ್ಕೆ ಕಾಮಗಾರಿ ಮುಂದುವರಿಸಲು ಸಾಧ್ಯವಾಗಿರಲಿಲ್ಲ. ಶೇ 50ರಷ್ಟು ಬಾಕಿ ಪರಿಹಾರ ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉಳಿದ ಕಾಮಗಾರಿ ನಡೆಸಲು ಬಿಡಿಎ ಆಡಳಿತ ಮಂಡಳಿ ಸಭೆಯಲ್ಲೂ ಅನುಮೋದನೆ ದೊರೆತಿದೆ.

ಕೆ.ಗೋಪಾಲಯ್ಯ, ಅಬಕಾರಿ ಸಚಿವ

'ಪೂರ್ವ ಸಿದ್ಧತೆ ಇಲ್ಲದ ಯೋಜನೆ'

ಸಾರ್ವಜನಿಕರಿಗೆ ಅನುಕೂಲ ಮಾಡುವ ಬದಲು ಈ ಸೇತುವೆ ಅನಾನುಕೂಲ ತಂದೊಡ್ಡಿದೆ. ಸರ್ಕಾರ ಖರ್ಚು ಮಾಡಿದ ಹಣ ಹಲವು ವರ್ಷಗಳಿಂದ ಪೋಲಾಗಿದೆ. ವಾಹನಗಳನ್ನು ಸುತ್ತು ಬಳಸಿಕೊಂಡು ಹೋಗಬೇಕಾದ ಸ್ಥಿತಿ ಇದೆ. ಸಮಗ್ರ ಯೋಜನೆ ರೂಪಿಸಿಕೊಳ್ಳದೆ, ಪೂರ್ವ ಸಿದ್ಧತೆ ಮಾಡಿಕೊಳ್ಳದೆ ಕಾಮಗಾರಿ ಆರಂಭಿಸಿದ್ದೇ ಇದಕ್ಕೆ ಕಾರಣ. ಕೂಡಲೇ ಕಾಮಗಾರಿ ಪೂರ್ಣಗೊಳಿಸಿ ಜನರಿಗೆ ಆಗುತ್ತಿರುವ ಅನಾನುಕೂಲ ತಪ್ಪಿಸಬೇಕು.

ಶ್ರೀಕಾಂತ್ ಚನ್ನಾಳ್, ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ಸಂಸ್ಥೆಯ ಬೆಂಗಳೂರು ಕೇಂದ್ರದ ಅಧ್ಯಕ್ಷ

ದೇವಸ್ಥಾನ ಸ್ವತಂತ್ರ ನಿರ್ಧಾರ ಆಗಿಲ್ಲ: ಜೊಲ್ಲೆ

ಬೆಂಗಳೂರು: ಮುಜರಾಯಿ ದೇವಸ್ಥಾನಗಳನ್ನು ಸರ್ಕಾರದ ಹಿಡಿತದಿಂದ ಸ್ವತಂತ್ರಗೊಳಿಸುವ ಬಗ್ಗೆ ಯಾವುದೇ ನಿರ್ಧಾರ ಆಗಿಲ್ಲ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರು, ಆಗಮಿಕರು ಮತ್ತು ಉಪಾಧಿವಂತರ ಒಕ್ಕೂಟದ ಸದಸ್ಯರ ಭೇಟಿಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಈ ವಿಷಯವಾಗಿ ಕಾನೂನು ಪಂಡಿತರು, ಧಾರ್ಮಿಕ ಮುಖಂಡರ ಜತೆಗೆ ಚರ್ಚೆ ನಡೆಸಿದ್ದೇವೆ. ಅಂತಿಮವಾಗಿ ಮುಖ್ಯಮಂತ್ರಿಯವರ ಜತೆಗೆ ಚರ್ಚೆ ನಡೆಸಬೇಕಾಗಿದೆ ಎಂದು ತಿಳಿಸಿದರು.

ಒಕ್ಕೂಟ ಕೂಡ ಹಿಂದೂ ದೇವಾಲಯಗಳನ್ನು ಖಾಸಗೀಕರಣ ಮಾಡಬಾರದು. ಅದರಿಂದ ತೊಂದರೆ ಆಗುತ್ತದೆ ಎಂದು ಹೇಳಿದೆ ಎಂದರು.

ಮುಜರಾಯಿ ದೇವಸ್ಥಾನಗಳ ಅರ್ಚಕರ ನಿವೃತ್ತಿ ವಯಸ್ಸನ್ನು 60 ವರ್ಷಕ್ಕೆ ಎಂದು ಘೋಷಣೆ ಮಾಡಿರುವುದನ್ನು ಹಿಂದಕ್ಕೆ ಪಡೆಯಬೇಕು. ಪ್ರತಿ ತಿಂಗಳು ಪೂಜಾ ಸಾಮಗ್ರಿಗಳಿಗೆ ನೀಡುತ್ತಿರುವ ತಸ್ತೀಕ್ ಹಣ ₹4 ಸಾವಿರದಿಂದ ₹5 ಸಾವಿರಕ್ಕೆ ಏರಿಕೆ ಮಾಡಬೇಕು ಎಂದು ಬೇಡಿಕೆ ಸಲ್ಲಿಸಿದ್ದಾರೆ ಎಂದು ಹೇಳಿದರು.

ಒಕ್ಕೂಟದ ಮುಖ್ಯಸ್ಥ ಕೆ.ಎಸ್.ಎನ್.ದೀಕ್ಷಿತ್ ನೇತೃತ್ವದಲ್ಲಿ ಅರ್ಚಕರು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

'ಸಿಎಂ, ವರಿಷ್ಠರ ನಿರ್ಧಾರಕ್ಕೆ ಬದ್ಧ'

'ಸಚಿವ ಸ್ಥಾನದಲ್ಲಿ ಮುಂದುವರಿಸುವುದು ಅಥವಾ ಕೈಬಿಡುವುದು ಮುಖ್ಯಮಂತ್ರಿ ಮತ್ತು ವರಿಷ್ಠರಿಗೆ ಬಿಟ್ಟಿದ್ದು' ಎಂದು ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ಕೆಲವು ಸಚಿವರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಕೆಲವರ ಅನುಭವ ಇರಬಹುದು. ಆ ರೀತಿ ಆಗಿಲ್ಲ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಬಗ್ಗೆ ಏನೂ ಮಾತನಾಡುವುದಿಲ್ಲ. ಮುಖ್ಯಮಂತ್ರಿ ಮತ್ತು ವರಿಷ್ಠರು ಏನು ಹೇಳುತ್ತಾರೋ ಅದಕ್ಕೆ ಬದ್ಧನಾಗಿರುತ್ತೇನೆ' ಎಂದು ಹೇಳಿದರು.

ಬೆಂಗಳೂರಿನ ಗಾಂಧಿ ಪ್ರತಿಮೆ, ಮೌರ್ಯ ವೃತ್ತದಲ್ಲಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ವತಿಯಿಂದ ಗುರುವಾರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು, ಎನ್. ಶಿವಣ್ಣ, ಅಧ್ಯಕ್ಷರು ನೇತೃತ್ವದಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಶಿಶುಪಾಲನ ಕೇಂದ್ರಗಳನ್ನು ನಡೆಸುವ ಪ್ರಸ್ತಾಪವನ್ನು ಕೈಬಿಡುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು. –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಹೊಸ ಪ್ರಕರಣಗಳ ಸಂಖ್ಯೆ 16,436ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದ್ದು, ಗುರುವಾರ 16,436 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ವಾರದಿಂದ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದೆ. ಒಂದು ದಿನದ ಅವಧಿಯಲ್ಲಿ 1.45 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 11.31 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 38.60 ಲಕ್ಷಕ್ಕೆ ಏರಿಕೆಯಾಗಿದೆ.

26 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 6,640 ಮಂದಿ ಸೋಂಕಿತರಾಗಿದ್ದಾರೆ. ಬೆಳಗಾವಿಯಲ್ಲಿ 1,508, ಮೈಸೂರಿನಲ್ಲಿ 706, ಶಿವಮೊಗ್ಗದಲ್ಲಿ 701, ತುಮಕೂರಿನಲ್ಲಿ 572, ಉತ್ತರ ಕನ್ನಡದಲ್ಲಿ 567 ಹಾಗೂ ಧಾರವಾಡದಲ್ಲಿ 535 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 27,570 ಮಂದಿ ಸೇರಿದಂತೆ ರಾಜ್ಯದಲ್ಲಿ 44,819 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 36.72 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.48 ಲಕ್ಷಕ್ಕೆ ಇಳಿಕೆಯಾಗಿದೆ. ಬೆಂಗಳೂರಿನಲ್ಲಿ 71 ಸಾವಿರ ಸಕ್ರಿಯ ಪ್ರಕರಣಗಳಿವೆ.

ಕೊರೊನಾ ಸೋಂಕಿತರಲ್ಲಿ 60 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 14 ಮಂದಿ, ದಕ್ಷಿಣ ಕನ್ನಡ, ಮಂಡ್ಯ ಹಾಗೂ ಮೈಸೂರಿನಲ್ಲಿ ತಲಾ ಐದು ಮಂದಿ, ಹಾವೇರಿ, ಚಿಕ್ಕಬಳ್ಳಾಪುರ ಹಾಗೂ ಬೆಳಗಾವಿಯಲ್ಲಿ ತಲಾ ಮೂವರು, ಯಾದಗಿರಿ, ಉತ್ತರ ಕನ್ನಡ, ತುಮಕೂರು, ಉಡುಪಿ, ಕಲಬುರಗಿ ಹಾಗೂ ಚಾಮರಾಜನಗರದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 0.36 ರಷ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,197ಕ್ಕೆ ತಲುಪಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

17,43,065 ▲ ಒಟ್ಟು ಸೋಂಕಿತರು (17,36,425 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
71,525 ▼	16,54,910 ▲	16,629 ▲

ದಿನದ ಏರಿಕೆ

ಹೊಸ ಪ್ರಕರಣ	6,640	▼
ಗುಣಮುಖ	27,570	▲
ಸಾವು	14	▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	38.67 ಕೋಟಿ ▲	4.18 ಕೋಟಿ ▲
ಸಕ್ರಿಯ ಪ್ರಕರಣ	7.45 ಕೋಟಿ ▲	15.33 ಲಕ್ಷ ▼
ಗುಣಮುಖ	30.064 ಕೋಟಿ ▲	3.97 ಕೋಟಿ ▲
ಸಾವು	57.22 ಲಕ್ಷ ▲	4.98 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	30.90 ಲಕ್ಷ ▲	1.72 ಲಕ್ಷ ▲
ಗುಣಮುಖ	33.62 ಲಕ್ಷ	2.59 ಲಕ್ಷ ▼
ಸಾವು	12,012 ▲	1,008 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರಿಟನ್	ಅಮೆರಿಕ	ಫ್ರಾನ್ಸ್
1.12 ಲಕ್ಷ ▲	3.02 ಲಕ್ಷ ▲	3.15 ಲಕ್ಷ ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು

ಅಮೆರಿಕ	ಫ್ರಾನ್ಸ್	ಬ್ರಿಟನ್
2.88 ಕೋಟಿ ▼	66.32 ಲಕ್ಷ ▲	25.89 ಲಕ್ಷ ▲

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.42 ಲಕ್ಷ
ಕೇರಳ	56,100 ▲
ತಮಿಳುನಾಡು	37,636 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	77.53 ▲
ಕೇರಳ	61.29 ▲
ತಮಿಳುನಾಡು	33.75 ▲

ಭಾರತದ ಕೋವಿಡ್ ಸಂಖ್ಯೆ ವಿವರ: ಗುರುವಾರ ಬೆಳಿಗ್ಗೆ 8ರವರೆಗಿನ ಮಾಹಿತಿ
ಪ್ರಜಾವಾಣಿ ಗ್ರಾಫಿಕ್ಸ್

ಎನ್‌ಟಿಎಂ ಶಾಲೆ ಸ್ಥಳಾಂತರ ಆರಂಭ; ಪ್ರತಿಭಟನೆ

ಮೈಸೂರು: ಮಹಾರಾಣಿ ಮಾದರಿ (ಎನ್‌ಟಿಎಂ) ಶಾಲೆಯನ್ನು, ಅದರ ಎದುರಿಗಿರುವ ಮಹಾರಾಣಿ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆಯ ಆವರಣದ ಕಟ್ಟಡಕ್ಕೆ ಸ್ಥಳಾಂತರಿಸುವ ಪ್ರಯತ್ನಕ್ಕೆ ಗುರುವಾರ, ಶಾಲೆ ಉಳಿಸಿ ಹೋರಾಟ ಸಮಿತಿ ಸದಸ್ಯರು ತಡೆಯೊಡ್ಡಿದರು.

ಶಾಲೆಯ ಪೀಠೋಪಕರಣಗಳಿದ್ದ ಲಾರಿಯ ಮತ್ತು ಆಟೊ ಹೊರಡಲು ಅನುವಾಗುತ್ತಿದ್ದಂತೆ ಸಮಿತಿ ಸದಸ್ಯರು ರಸ್ತೆಯಲ್ಲಿ ಮಲಗಿ, ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು. ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, 'ಹೈಕೋರ್ಟ್ ಹಾಗೂ ಸರ್ಕಾರವು ಶಾಲೆ ಸ್ಥಳಾಂತರಕ್ಕೆ ಆದೇಶ ನೀಡಿದೆ. ಶಾಲೆಯನ್ನು ಕೇವಲ 20 ಮೀಟರ್ ದೂರದಲ್ಲಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಗುತ್ತಿದೆ' ಎಂದರು.

ಸ್ವಾಮಿ ವಿವೇಕಾನಂದ ಅವರು ಮೈಸೂರಿಗೆ ಬಂದಿದ್ದಾಗ ಈಗ ಇರುವ ಎನ್‌ಟಿಎಂ, ಪಕ್ಕದ ನಿರಂಜನ ಮಠದಲ್ಲಿ ತಂಗಿದ್ದರು ಎಂಬ ಕಾರಣಕ್ಕೆ, ಇಲ್ಲಿ ಸ್ಮಾರಕದ ಜತೆಗೆ, ವಿವೇಕಾನಂದ ಸಾಂಸ್ಕೃತಿಕ ಕೇಂದ್ರ ನಿರ್ಮಿಸಲು ರಾಮಕೃಷ್ಣ ಆಶ್ರಮ ಯೋಜನೆ ರೂಪಿಸಿತ್ತು. ಅದನ್ನು ವಿರೋಧಿಸಿ ಮಾದರಿ ಶಾಲೆ ಉಳಿಸಿ ಹೋರಾಟ ನಡೆಯುತ್ತಿದೆ.

ನೈರುತ್ಯ ರೈಲ್ವೆ ವಲಯಕ್ಕೆ ₹6,900 ಕೋಟಿ ಅನುದಾನ

ಹುಬ್ಬಳ್ಳಿ: ಕೇಂದ್ರ ರೈಲ್ವೆ ಬಜೆಟ್‌ನಲ್ಲಿ ನೈರುತ್ಯ ರೈಲ್ವೆ ವಲಯಕ್ಕೆ ₹ 6,900 ಕೋಟಿ ಅನುದಾನ ದೊರತಿದೆ. ಹುಬ್ಬಳ್ಳಿ-ಬೆಂಗಳೂರು ನಡುವಿನ ಜೋಡಿ ಮಾರ್ಗದ ಕಾರ್ಯ ಇದೇ ವರ್ಷ ಡಿಸೆಂಬರ್ ಅಂತ್ಯಕ್ಕೆ ಪೂರ್ಣವಾಗಲಿದೆ ಎಂದು ನೈರುತ್ಯ ರೈಲ್ವೆ ವಲಯ ಪ್ರಧಾನ ವ್ಯವಸ್ಥಾಪಕ ಸಂಜೀವ ಕಿಶೋರ್ ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವರ್ಷ ₹ 4,900 ಕೋಟಿ ಅನುದಾನ ನೀಡಲಾಗಿತ್ತು. ಈ ವರ್ಷ ಶೇ 40 ರಷ್ಟು ಹೆಚ್ಚಳವಾಗಿದೆ. ಅದರಲ್ಲಿ ರಾಜ್ಯದ ರೈಲ್ವೆ ಅಭಿವೃದ್ಧಿ ಕಾರ್ಯಗಳಿಗೆ ₹6 ಸಾವಿರ ಕೋಟಿ ಲಭಿಸಲಿದ್ದು, ಇದರಲ್ಲಿ ರಾಜ್ಯದ ಪಾಲು ₹783 ಕೋಟಿ ಸೇರಿದೆ ಎಂದರು.

ಹೊಸ ಮಾರ್ಗಕ್ಕಾಗಿ ₹ 323 ಕೋಟಿ, ಜೋಡಿ ಮಾರ್ಗ ನಿರ್ಮಾಣಕ್ಕೆ ₹1,455 ಕೋಟಿ, ವಿದ್ಯುದ್ದೀಕರಣಕ್ಕಾಗಿ ₹6,11 ಕೋಟಿ ಮೀಸಲಾಗಿಡಲಾಗಿದೆ. ಬೆಂಗಳೂರು ಸಬ್ ಅರ್ಬನ್ ಯೋಜನೆಗೆ ₹450 ಕೋಟಿ, ರೈಲು ಮಾರ್ಗ ಸುರಕ್ಷತೆಗೆ ₹625 ಕೋಟಿ, ಮೇಲ್ಸೇತುವೆ, ಸುರಂಗ ಮಾರ್ಗ ನಿರ್ಮಾಣಕ್ಕೆ ₹1,276 ಕೋಟಿ ಅನುದಾನ ನೀಡಲಾಗಿದೆ ಎಂದು ಹೇಳಿದರು.

ಧಾರವಾಡ-ಕಿತ್ತೂರು ರೈಲು ಮಾರ್ಗಕ್ಕೆ ₹20 ಕೋಟಿ, ಗದಗ-ವಾಡಿ ಮಾರ್ಗಕ್ಕೆ ₹187 ಕೋಟಿ, ಶಿವಮೊಗ್ಗ-ಶಿಕಾರಿಪುರ-ರಾಣೆಬೆನ್ನೂರ, ತುಮಕೂರು- ದಾವಣಗೆರೆ, ಬಾಗಲಕೋಟೆ-ಕುಡಚಿ ಮಾರ್ಗಕ್ಕೆ ತಲಾ ₹50 ಕೋಟಿ, ರಾಯದುರ್ಗ-ತುಮಕೂರು ಮಾರ್ಗಕ್ಕೆ ₹100 ಕೋಟಿ ಮಂಜೂರು ಮಾಡಲಾಗಿದೆ ಎಂದರು.

ಗದಗ-ಕೂಡಗಿ-ಹುಟಗಿ ಜೋಡಿ ಮಾರ್ಗ ನಿರ್ಮಾಣಕ್ಕೆ ₹200 ಕೋಟಿ, ಹುಬ್ಬಳ್ಳಿ-ಚಿಕ್ಕಜಾಜೂರು ಜೋಡಿ ಮಾರ್ಗ ನಿರ್ಮಾಣಕ್ಕೆ ₹210 ಕೋಟಿ ಮಂಜೂರಾಗಿದೆ. ಯಶವಂತಪುರ-ಚನ್ನಸಂದ್ರ ಮಾರ್ಗಕ್ಕೆ ₹115, ಯಲಹಂಕ-ಪೆನುಕೊಂಡಕ್ಕೆ ₹54 ಕೋಟಿ, ಪೆನುಕೊಂಡ-ಧರ್ಮಾವರಂಗೆ ₹60, ಬೈಯಪ್ಪನಹಳ್ಳಿ-ಹೊಸೂರಗೆ ₹140 ಕೋಟಿ, ಅರಸೀಕೆರೆ-ತುಮಕೂರಿಗೆ ₹51.8 ಕೋಟಿ ನೀಡಲಾಗಿದೆ ಎಂದರು.

ಹುಬ್ಬಳ್ಳಿ-ಬೆಂಗಳೂರಿನ ನಡುವಿನ ನಿಟ್ಟೂರು-ಬಾಣಸಂದ್ರದ 20 ಕಿ.ಮೀ. ಹಾಗೂ ಹಾವೇರಿ-ಸಂಶಿ ನಡುವಿನ 50 ಕಿ.ಮೀ. ಜೋಡಿ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದೆ. ಉಳಿದ 50 ಕಿ.ಮೀ. ಕಾಮಗಾರಿಯನ್ನು ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಿದರೆ, ಹುಬ್ಬಳ್ಳಿ-ಬೆಂಗಳೂರು ಮಾರ್ಗದ ಜೋಡಿ ಮಾರ್ಗ ಪೂರ್ಣವಾಗಲಿದೆ. ಹುಬ್ಬಳ್ಳಿ-ತಾಳಗುಪ್ಪ ಮಾರ್ಗದ ಸರ್ವೆ ಕಾರ್ಯ ನಡೆದಿದ್ದು, ಮೂರು ತಿಂಗಳಲ್ಲಿ ರೈಲ್ವೆ ಬೋರ್ಡ್‌ಗೆ ವರದಿ ನೀಡಲಾಗುವುದು ಎಂದರು.

ಕಾರ್ಮಿಕರ ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗೆ ₹70 ಕೋಟಿ

ಬೆಂಗಳೂರು: ರಾಜ್ಯದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಶ್ರಮ ಸಾಮರ್ಥ್ಯ ಟೂಲ್ ವಿತರಣೆಗಾಗಿ ಈ ಸಾಲಿನಲ್ಲಿ ₹100 ಕೋಟಿ ಮೀಸಲಿಟ್ಟಿದ್ದು, ಕಾರ್ಮಿಕರ ಮಕ್ಕಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ₹70 ಕೋಟಿ ಮೀಸಲಿಡಲಾಗಿದೆ ಎಂದು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಹೇಳಿದ್ದಾರೆ.

ನಗರದ ಯಶವಂತಪುರದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯ ಸಭೆಯಲ್ಲಿ ಅವರು ಮಾತನಾಡಿದರು.

ಮಂಡಳಿಯಲ್ಲಿ ಇದುವರೆಗೆ 28,94,389 ಕಾರ್ಮಿಕರು ನೋಂದಣಿಯಾಗಿದ್ದಾರೆ. ಎಂದು ಹೇಳಿದರು.

ಯಲಹಂಕ ಪೊಲೀಸರಿಂದ ಆರೋಪಿಗಳ ಬಂಧನ

ಎಂಜಿನಿಯರ್ ಅಪಹರಿಸಿ ₹ 33 ಲಕ್ಷಕ್ಕೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿವಿಲ್ ಎಂಜಿನಿಯರೊಬ್ಬರನ್ನು ಅಪಹರಿಸಿ, ಅವರ ಬಿಡುಗಡೆಗೆ ₹ 33 ಲಕ್ಷಕ್ಕೆ ಬೇಡಿಕೆ ಇರಿಸಿದ್ದ ಆರೋಪದಡಿ ಆರು ಮಂದಿಯನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

'ಕೆ.ಆರ್.ಪುರದ ನಂದಗೋಪಾಲ್ (31), ರಾಮಮೂರ್ತಿನಗರದ ವಿಘ್ನೇಶ್, ಮನೋಜ್, ಶಿವಾಜಿನಗರದ ಶಬಾಜ್ ಅಹಮ್ಮದ್, ಕೋಲಾರ ಕೆ.ಜಿ.ಎಫ್‌ನ ಎಸ್. ಸುನೀಲ್ ಹಾಗೂ ಆಂಧ್ರಪ್ರದೇಶದ ಅಶೋಕ ಬಂಧಿತರು. ಅವರಿಂದ ಎರಡು ಕಾರು, ಚಿನ್ನಾಭರಣ ಹಾಗೂ ಕಬ್ಬಿಣದ ರಾಡು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಟಾಸ್ಕ್ ಎವರ್ ಡೆಲಿವರಿ ಆ್ಯಂಡ್ ಸರ್ವೀಸ್' ಕಂಪನಿ ಮಾಲೀಕರೂ ಆಗಿದ್ದ ಸಿವಿಲ್ ಎಂಜಿನಿಯರ್ ಮಾನಸ್ ಅವರನ್ನು ಆರೋಪಿಗಳು ಫೆ. 2ರಂದು ಅಪಹರಣ ಮಾಡಿದ್ದರು. ಪ್ರತ್ಯದರ್ಶಿಯೊಬ್ಬರು ನೀಡಿದ್ದ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಹುಡುಕಾಟ ಆರಂಭಿಸಲಾಗಿತ್ತು.'

'ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಕೋಗಿಲಹಳ್ಳಿ ಸೇತುವೆ ಬಳಿಯ ಗ್ಯಾರೇಜೊಂದರಲ್ಲಿ ಆರೋಪಿಗಳು ಅಡಗಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಇನ್‌ಸ್ಪೆಕ್ಟರ್ ನೇತೃತ್ವದ ತಂಡ, ಸ್ಥಳಕ್ಕೆ ಹೋಗಿ ಎಂಜಿನಿಯರ್ ಮಾನಸ್ ಅವರನ್ನು ರಕ್ಷಿಸಿದೆ. ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದೂ ತಿಳಿಸಿದರು.

₹ 3 ಲಕ್ಷ ಬಾಕಿ ನೀಡದಿದ್ದಕ್ಕೆ ಕೃತ್ಯ: 'ಬಾಣಸವಾಡಿ ಬಳಿ ಕಟ್ಟಡವೊಂದರ ನಿರ್ಮಾಣ ಕೆಲಸ ನಡೆದಿದೆ. ಅದಕ್ಕಾಗಿ ಅಡಿಪಾಯ ಅಗೆಯುವ ಕೆಲಸದ ಗುತ್ತಿಗೆಯನ್ನು ಎಂಜಿನಿಯರ್ ಮಾನಸ್ ತಮ್ಮದಾಗಿಸಿಕೊಂಡಿದ್ದರು. ಅದೇ ಕೆಲಸವನ್ನು ಆರೋಪಿಗಳಾದ ನಂದಗೋಪಾಲ್ ಹಾಗೂ ಸುನೀಲ್‌ಗೆ ಉಪಗುತ್ತಿಗೆ ನೀಡಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕೆಲಸ ಮುಗಿದ ಬಳಿಕ ಆರೋಪಿಗಳಿಗೆ ₹ 3 ಲಕ್ಷ ಕೊಡುವುದು ಬಾಕಿ ಇತ್ತು. ಹಲವು ದಿನವಾದರೂ ಎಂಜಿನಿಯರ್ ಮಾನಸ್ ಹಣ ನೀಡಿರಲಿಲ್ಲ. ಅದೇ ವಿಚಾರವಾಗಿ ಕೋಪಗೊಂಡಿದ್ದ ಆರೋಪಿಗಳು, ಒಡಿಶಾದ ಮಾನಸ್ ಅವರನ್ನೇ ಅಪಹರಿಸಿ ₹ 33 ಲಕ್ಷಕ್ಕೆ ಬೇಡಿಕೆ ಇರಿಸಿದ್ದರು. ಕೊಲೆ ಮಾಡುವ ಉದ್ದೇಶವೂ ಅವರದ್ದಾಗಿತ್ತು' ಎಂದೂ ತಿಳಿಸಿದರು.

ಕಲಬೆರಕೆ ಚಿನ್ನ ಮಾರಾಟ: ಬಂಧನ

ಬೆಂಗಳೂರು: ಅಸಲಿ ಚಿನ್ನದೊಂದಿಗೆ ನಕಲಿ ಚಿನ್ನ ಬೆರೆಸಿ ಕಲಬೆರಕೆ ಮಾಡಿ ಮಾರುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಹಲಸೂರು ಗೇಟ್ ಠಾಣೆ ವ್ಯಾಪ್ತಿಯ ನಗರ್ತಪೇಟೆಯಲ್ಲಿರುವ ಅಂಗಡಿಯೊಂದರ ಮೇಲೆ ದಾಳಿ ಮಾಡಲಾಗಿತ್ತು. ಕಲಬೆರಕೆ ಚಿನ್ನ ತಯಾರಿಸುತ್ತಿದ್ದ ಜಾಲ ಪತ್ತೆಯಾಯಿತು' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. 'ಜಾಲದಲ್ಲಿ ಸಕ್ರಿಯರಾಗಿದ್ದ ನಾಲ್ವರನ್ನು ಬಂಧಿಸಲಾಗಿದ್ದು, ಅವರ ಹೆಸರು ಗೌಪ್ಯವಾಗಿರಸಲಾಗಿದೆ. ಅವರಿಂದ 1 ಕೆ.ಜಿ 794 ಗ್ರಾಂ ಚಿನ್ನ ಹಾಗೂ ₹ 20 ಸಾವಿರ ನಗದು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಯಾವುದೇ ಪರವಾನಗಿ ಇಲ್ಲದೆ ಆರೋಪಿಗಳು ಅಂಗಡಿ ತೆರೆದಿದ್ದರು. ಅಸಲಿ ಚಿನ್ನ ಹಾಗೂ ನಕಲಿ ಚಿನ್ನ ಬೆರೆಸಿ, ಬಿಸ್ಕತ್‌ಗಳನ್ನು ತಯಾರಿಸುತ್ತಿದ್ದರು. ಚಿನ್ನ ಶುದ್ಧತೆ ಬಗ್ಗೆ ನಕಲಿ ಸೀಲುಗಳನ್ನು ಹಾಕಿ, ಗ್ರಾಹಕರಿಗೆ ಮಾರುತ್ತಿದ್ದರು. ದಿನಕ್ಕೆ 3 ಕೆ.ಜಿ.ಯಿಂದ 5 ಕೆ.ಜಿ.ಯಷ್ಟು ಚಿನ್ನ ಮಾರುತ್ತಿದ್ದ ಮಾಹಿತಿ ಇದೆ.'

'ಚಿನ್ನ ತಯಾರಿಕೆಗೆ ಬಳಸುತ್ತಿದ್ದ ರಾಸಾಯನಿಕ ಹಾಗೂ ಇತರೆ ವಸ್ತುಗಳನ್ನೂ ಜಪ್ತಿ ಮಾಡಲಾಗಿದೆ. ಯಾರಿಗೆಲ್ಲ ಚಿನ್ನ ಮಾರಿದ್ದಾರೆಂದು ಪರಿಶೀಲನೆ ನಡೆಸಲಾಗುತ್ತಿದೆ' ಎಂದೂ ಹೇಳಿದರು.

ಅಪರಾಧ ಸುದ್ದಿ

ಮನೆಗೆ ನುಗ್ಗಿ ಕಳ್ಳತನ: ಶಿಕ್ಷೆ

ಬೆಂಗಳೂರು: ಮನೆಯೊಂದಕ್ಕೆ ನುಗ್ಗಿ ಕಳ್ಳತನ ಮಾಡಿದ್ದ ಅಪರಾಧಿ ಸುರೇಶ್ ಎಂಬಾತನಿಗೆ 4 ವರ್ಷಗಳ ಜೈಲು ಶಿಕ್ಷೆ ವಿಧಿಸಿ ನಗರದ 11 ನೇ ಎಸಿಎಂಎಂ ನ್ಯಾಯಾಲಯ ಆದೇಶ ಹೊರಡಿಸಿದೆ.

ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ 2013ರಲ್ಲಿ ದಾಖಲಾಗಿದ್ದ ಕಳ್ಳತನ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಎಂ.ಆರ್. ಒಡೆಯರ್ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಸವಿತಾ ಪಾಟೀಲ ವಾದಿಸಿದ್ದರು.

ತಮಿಳುನಾಡಿನ ಸುರೇಶ್, ತನ್ನಿಬ್ಬರು ಸಹಚರರ ಜೊತೆ ನಗರಕ್ಕೆ ಬಂದಿದ್ದ. ಮೂವರು ಸೇರಿಕೊಂಡು ಬಾಬುಸಾಪಾಳ್ಯದ ನಿವಾಸಿಯೊಬ್ಬರ ಮನೆಯಲ್ಲಿ ವಜ್ರ-ಚಿನ್ನಾಭರಣ, ದೇವರ ವಿಗ್ರಹಗಳನ್ನು ಕದ್ದಿದ್ದರು. ಮನೆ ಮುಂದೆ ನಿಲ್ಲಿಸಿದ್ದ ಕಾರಿನ ಸಮೇತ ಪರಾರಿಯಾಗಿದ್ದರು.

ಹೆಣ್ಣೂರು ಪೊಲೀಸರು, ಆರೋಪಿ ಸುರೇಶ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಒಳ ಉಡುಪಿನಲ್ಲಿ ಡ್ರಗ್ಸ್: ಜೈಲಿನ ಎಫ್‌ಡಿಎ ಬಂಧನ

ಬೆಂಗಳೂರು: ಒಳ ಉಡುಪಿನಲ್ಲಿ ಡ್ರಗ್ಸ್ ಬಚ್ಚಿಟ್ಟುಕೊಂಡು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದೊಳಗೆ ಸಾಗಿಸುತ್ತಿದ್ದ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಗಂಗಾಧರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಗಂಗಾಧರ್

'ಆರೋಪಿ ಗಂಗಾಧರ್, ಕಾರಾಗೃಹದ ದಾಖಲಾತಿ ವಿಭಾಗದಲ್ಲಿ ಎಫ್‌ಡಿಎ ಆಗಿ ಕೆಲ ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಜೈಲಿನೊಳಗಿನ ಕೈದಿಗಳ ಜೊತೆ ಸಂಪರ್ಕವಿಟ್ಟುಕೊಂಡಿದ್ದ ಅವರು, ನಿರಂತರವಾಗಿ ಡ್ರಗ್ಸ್ ಸಾಗಿಸುತ್ತಿದ್ದ ಮಾಹಿತಿ ಇದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಗಂಗಾಧರ್ ಅವರು ಎಂದಿನಂತೆ ಗುರುವಾರ ಬೆಳಿಗ್ಗೆ ಕೆಲಸಕ್ಕೆಂದು ಜೈಲಿಗೆ ಬಂದಿದ್ದರು. ಪ್ರವೇಶ ದ್ವಾರದಲ್ಲಿ ಅವರನ್ನು ತಡೆದಿದ್ದ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಸಿಬ್ಬಂದಿ, ಪರಿಶೀಲನೆ ನಡೆಸಿದ್ದರು. ಅನುಮಾನಾಸ್ಪದ ವಸ್ತು ಇರುವುದು ಸಿಬ್ಬಂದಿಗೆ ಗೊತ್ತಾಗಿತ್ತು.'

'ಜೈಲಿನ ಕೊಠಡಿಯೊಂದಕ್ಕೆ ಗಂಗಾಧರ್ ಅವರನ್ನು ಕರೆದೊಯ್ದಿದ್ದ ಸಿಬ್ಬಂದಿ, ಹೆಚ್ಚಿನ ಪರಿಶೀಲನೆ ನಡೆಸಿದ್ದರು. ಆಗ ಆರೋಪಿಯ ಒಳ ಉಡುಪಿನಲ್ಲಿ ಡ್ರಗ್ಸ್ ಇರುವುದು ಪತ್ತೆಯಾಗಿತ್ತು. ಜೈಲಿನ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದ ಕೆಎಸ್‌ಐಎಸ್‌ಎಫ್ ಸಿಬ್ಬಂದಿ, ಅವರ ನಿರ್ದೇಶನದಂತೆ ಆರೋಪಿಯನ್ನು ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಗೆ ಒಪ್ಪಿಸಿದ್ದರು. ಮೊಬೈಲ್ ಸಹ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಡ್ರಗ್ಸ್ ಜಾಲದ ನಂಟು: 'ಜೈಲಿನಲ್ಲಿರುವ ಕೈದಿಗಳಿಗೆ ಹೊರಗಿನಿಂದ ಡ್ರಗ್ಸ್ ಪೂರೈಸುವ ಜಾಲ ಸಕ್ರಿಯವಾಗಿರುವ ಅನುಮಾನವಿತ್ತು. ಅದೇ ಜಾಲದಲ್ಲಿ ಇದೀಗ ಜೈಲಿನ ಎಫ್‌ಡಿಎ ಸಿಕ್ಕಿಬಿದ್ದಿದ್ದಾರೆ. ಈತನ ಜೊತೆ ಬೇರೆ ಯಾರೆಲ್ಲ ಜಾಲದಲ್ಲಿದ್ದಾರೆಂಬುದನ್ನು ತಿಳಿದುಕೊಳ್ಳಲಾಗುತ್ತಿದೆ' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

'ಎಫ್‌ಡಿಎ ಬಳಿ ಎಲ್‌ಎಸ್‌ಡಿ ಕಾಗದ ಚೂರು ಹಾಗೂ ಹಶೀಷ್ ಸಿಕ್ಕಿದೆ. ಇದನ್ನು ಕೊಟ್ಟವರು ಯಾರು ? ಹಾಗೂ ಇದನ್ನು ಜೈಲಿನಲ್ಲಿ ಯಾರಿಗೂ ಕೊಡಲಾಗುತ್ತಿತ್ತು ಎಂಬುದರ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ಅಮಾನತು: ಡ್ರಗ್ಸ್ ಪೂರೈಕೆ ವೇಳೆ ಸಿಕ್ಕಿಬಿದ್ದಿರುವ ಗಂಗಾಧರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

'ಆರೋಪಿ ಗಂಗಾಧರ್ ಜೊತೆ ಮತ್ತಷ್ಟು ಮಂದಿ ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾಗಿರುವ ಸಾಧ್ಯತೆ ಇದೆ. ಅವರನ್ನು ಪತ್ತೆ ಮಾಡಿ ಬಂಧಿಸಿ' ಎಂಬುದಾಗಿ ಜೈಲಿನ ಅಧಿಕಾರಿಗಳು, ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು & ಒಳಚರಂಡಿ ಮಂಡಳಿ, ವಿಭಾಗ, ಕೋಲಾರ

ಕಾರ್ಯಪಾಲಕ ಅಭಿಯಂತರರ, ಕಛೇರಿ ಕನನೀಸ ಮತ್ತು ಒ.ಚ.ಮಂಡಳಿ, ವಿಭಾಗ, ಕೋಲಾರ. ನಂ. 2114, ಹನುಮೇಗೌಡ ಕಾಂಪೌಂಡ್, ಎಂ.ಬಿ. ರಸ್ತೆ, ಕೋಲಾರ–563101. ದೂ.: 08152–223403 ಫ್ಯಾಕ್ಸ್: 08152–220742, ಮೊಬೈಲ್: 9480813121 24X7 ಸಹಾಯವಾಣಿ: 080–40001000

ಟೆಂಡರ್ ಪ್ರಕಟಣೆ

ಈ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಕೆಳಕಂಡ ತಾಂತ್ರಿಕ/ಆರ್ಥಿಕ ಅರ್ಹತೆಗಳನ್ನು ಹೊಂದಿರುವ ಸಂಸ್ಥೆ/ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್ ಅನ್ನು ಮೊಹರಾದ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. **ಕಾಮಗಾರಿಯ ಹೆಸರು** (1) ಸಂಖ್ಯೆ: ಕಜಮ/ಕಾ.ಅ/ಕೋ/ತಾ.ಸ./ಸ.ಅ–1/928/2020–21 ದಿನಾಂಕ: 02.02.2022 ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂಬರ್ KUWSDB/2021-22/OW/WORK_INDENT3112 ಬಾಗೇಪಲ್ಲಿ ಪಟ್ಟಣದ ಒಳಚರಂಡಿ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ ವೆಟ್‌ವೆಲ್‌ನಲ್ಲಿ 3 ಸಂಖ್ಯೆ 15 ಹೆಚ್.ಪಿ ಅಥವಾ ಸೂಕ್ತ ಸಾಮರ್ಥ್ಯದ ನಾನ್‌ಕ್ಲಾಗ್ ಸೀವೇಜ್ ಪಂಪ್‌ಸೆಟ್, 150 ಕೆ.ವಿ.ಎ Transformer ಹಾಗೂ 100 ಕೆ.ವಿ.ಎ ಡಿ.ಜಿ ಸೆಟ್ ಮತ್ತು ಸಂಬಂಧಿತ ಪರಿಕರಣಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿ. ಅಂದಾಜು ಮೊತ್ತ **ರೂ. 48,40,537/–** ಬಿಡ್ ಭದ್ರತೆ ಮೊತ್ತ **ರೂ 97,000/–. ತಾಂತ್ರಿಕ ಅರ್ಹತೆಯ ನಿಬಂಧನೆಗಳು:** ಗುತ್ತಿಗೆದಾರರು ಕಳೆದ 5 ಆರ್ಥಿಕ ವರ್ಷಗಳಲ್ಲಿ ಟೆಂಡರ್ ಮೊತ್ತದ ಶೇ.50ಕ್ಕಿಂತ ಕಡಿಮೆ ಇಲ್ಲದ ಒಂದು ಸಮಾನ ರೂಪದ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ತಾಂತ್ರಿಕ ಇತರೆ ನಿಬಂದನೆಗಳು e-Procurement ಹಾಗೂ ಬಿಡ್ ದಾಖಲೆಯಲ್ಲಿರುವಂತೆ. **ಟೆಂಡರ್ ಕಾರ್ಯಸೂಚಿ ದಿನಾಂಕ ಹಾಗೂ ಸಮಯ: (1)** ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿಯ ದಿನಾಂಕ: **03.02.2022 ಬೆಳಗ್ಗೆ 11.00 ರಿಂದ 17.02.2022, ಸಂಜೆ 5.00. (2)** ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.02.2022, ಸಂಜೆ 5.30 ಘಂಟೆಯ ಒಳಗೆ. (3)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19.02.2022, ಬೆಳಗ್ಗೆ 11.00 ಘಂಟೆ ನಂತರ. (4)** ಆರ್ಥಿಕ ಬಿಡ್ ತೆರೆಯುವ ದಿನಾಂಕ: **21.02.2022, ಬೆಳಗ್ಗೆ 11.00 ಘಂಟೆ ನಂತರ**

ಸಹಿ/- ಕಾರ್ಯಪಾಲಕ ಅಭಿಯಂತರು,
ಕನನೀಸ ಮತ್ತು ಒ.ಚ ಮಂಡಳಿ, ವಿಭಾಗ, ಕೋಲಾರ.

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ361/ಎಂಸಿಎ/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅತಿಥಿ ಉಪನ್ಯಾಸಕರನ್ನು ಮನೆಗೆ ಅಟ್ಟುವುದು ಯಾವ ಸೀಮೆಯ ಆಡಳಿತ ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕವು ಭಾರತದ ಶೈಕ್ಷಣಿಕ ರಾಜಧಾನಿ ಆಗಬೇಕು ಎನ್ನುತ್ತಿರುವ ರಾಜ್ಯ ಸರ್ಕಾರ, 9,881 ಅತಿಥಿ ಉಪನ್ಯಾಸಕರನ್ನು ಕಿತ್ತೊಗೆದಿದೆ. ಕೆಲಸ ಮಾಡಿದವರನ್ನು ಮನೆಗೆ ಅಟ್ಟುವುದು ಯಾವ ಸೀಮೆಯ ಆಡಳಿತ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ

'ಪ್ರಜಾವಾಣಿ'ಯಲ್ಲಿ ಗುರುವಾರ ಪ್ರಕಟವಾದ 'ಹೆಚ್ಚಿದ ಕಾರ್ಯಭಾರ: 9,881 ಅತಿಥಿ ಉಪನ್ಯಾಸಕರ ಉದ್ಯೋಗಕ್ಕೆ ಕುತ್ತು' ವರದಿಯನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಅತಿಥಿ ಉಪನ್ಯಾಸಕರಿಗೆ ಒಳ್ಳೆಯದು ಮಾಡಿ ಎಂದು ಅಲವತ್ತುಕೊಂಡರೆ, ಅವರಲ್ಲಿ ಏಕಾಏಕಿ ಅರ್ಧಕ್ಕೂ ಹೆಚ್ಚು ಜನರನ್ನು ಕಿತ್ತುಹಾಕಿರುವುದು ಎಷ್ಟು ಸರಿ' ಎಂದು ಕೇಳಿದ್ದಾರೆ.

ಆರೇ ತಿಂಗಳಲ್ಲಿ ಅಭಿವೃದ್ಧಿ ಹರಿಕಾರರಾಗುವುದು ಎಂದರೆ ಇದೇನಾ? ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ ಎಂದರೆ ನಿರುದ್ಯೋಗ ಸೃಷ್ಟಿಯೇ? ಸರ್ಕಾರ ಇರುವುದು ಸಬೂಬು ಹೇಳುವುದಕ್ಕಲ್ಲ, ಕಾರಣ ಹೇಳಿ ಪಲಾಯನ ಮಾಡುವುದಕ್ಕಲ್ಲ. ನ್ಯಾಯ ಕೊಡುವ ಬಗ್ಗೆ ಕ್ರಮ ವಹಿಸಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಕೂಡಲೇ ಈ ಬಿಕ್ಕಟ್ಟನ್ನು ಬಗೆಹರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಭಾರತವು ವಿಶ್ವಗುರು ಆಗಬೇಕು ಎನ್ನುತ್ತೀರಿ, ರಾಷ್ಟ್ರೀಯ ಶಿಕ್ಷಣದ ಮೂಲಕ ದೇಶವನ್ನು ಜ್ಞಾನಕಾಶಿ ಮಾಡುತ್ತೇವೆ ಎಂದು ಹೇಳುತ್ತೀರಿ, ದೇಶ ಕಟ್ಟುವುದರಲ್ಲಿ ಶಿಕ್ಷಣವೇ ನಿರ್ಣಾಯಕ. ಆ ಶಿಕ್ಷಣ ವ್ಯವಸ್ಥೆಗೆ ಗುರುವೇ ನಾಯಕ. ಆದರೆ ಇಂದು ಕಲಿಸುವ ಗುರುವು ದಿಕ್ಕಿಲ್ಲದೆ ಬೀದಿಯಲ್ಲಿ ನಿಂತಿದ್ದಾನೆ. ಸರ್ಕಾರ ಹೇಳುವುದು ಒಂದು, ಮಾಡುವುದು ಇನ್ನೊಂದು ಎಂದು ಅವರು ಟೀಕಿಸಿದ್ದಾರೆ.

ಉನ್ನತ ಶಿಕ್ಷಣ ವ್ಯವಸ್ಥೆಯ ಕತ್ತು ಹಿಸುಕಿ, ವ್ಯವಸ್ಥಿತವಾಗಿ ಖಾಸಗಿ ವಲಯವನ್ನು ಬಲಪಡಿಸುವ, ಮಕ್ಕಳು-ಪೋಷಕರನ್ನು ಖಾಸಗಿಯವರ ಗುಲಾಮರನ್ನಾಗಿಸುವ ಹುನ್ನಾರ ಇದರ ಹಿಂದೆ ಇದೆಯಾ? ಎನ್ನುವ ಅನುಮಾನ ಬರುತ್ತಿದೆ ಎಂದು ಅವರು ಹೇಳಿದ್ದಾರೆ.

ಅತಿಥಿ ಉಪನ್ಯಾಸಕರ ಆಯ್ಕೆಯಲ್ಲಿ ಶೈಕ್ಷಣಿಕ ಅರ್ಹತೆ, ಹಿರಿತನ ಆಧರಿಸಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ. ಹಾಗಾದರೆ, ಇವೆರಡೂ ಅರ್ಹತೆಗಳು ಇಲ್ಲದಿದ್ದವರನ್ನು ಇಷ್ಟು ದಿನ ಅತ್ಯಂತ ಕನಿಷ್ಠ ಸಂಬಳಕ್ಕೆ ದುಡಿಸಿಕೊಂಡಿದ್ದು ಯಾಕೆ? ಅದಕ್ಕೆ ಕಾನೂನಿನಲ್ಲಿ ಅವಕಾಶ ಇತ್ತೇ ಎಂದು ಕುಟುಕಿದ್ದಾರೆ.

'ಅತಿಥಿ ಉಪನ್ಯಾಸಕರ ನೇಮಕ: ಹಿರಿತನ, ಅರ್ಹತೆಗೆ ಆದ್ಯತೆ'

'ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸುಮಾರು 14 ಸಾವಿರ ಮಂದಿ ಕಾರ್ಯನಿರ್ವಹಿಸುತ್ತಿದ್ದು, 2021-22ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಈ ಪೈಕಿ 10,600 ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿದೆ. ವಾಸ್ತವ ಹೀಗಿರುವಾಗ, 9,881 ಮಂದಿ ಕೆಲಸ ಕಳೆದುಕೊಳ್ಳುವ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ?' ಎಂದು ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್ ಪ್ರಶ್ನಿಸಿದ್ದಾರೆ.

'ಪ್ರಜಾವಾಣಿ'ಯ ಪ್ರಕಟವಾದ ವರದಿಗೆ ಪ್ರತಿಕ್ರಿಯಿಸಿರುವ ಅವರು, 'ಸೇವಾಹಿರಿತನ, ವಯಸ್ಸು ಮತ್ತು ಯುಜಿಸಿ ನಿಗದಿತ ಅರ್ಹತೆ ಈ ಮೂರನ್ನು ಪರಿಗಣಿಸಿ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುತ್ತಿದೆ. ಜತೆಗೆ ನಿಯಮಾನುಸಾರ ಅರ್ಹರ ಪಟ್ಟಿ ಸಿದ್ಧಪಡಿಸಲಾಗಿದೆ. ಹೀಗಾಗಿ 14 ಸಾವಿರ ಮಂದಿಯ ಪೈಕಿ ಕೇವಲ 3,400 ಮಂದಿ ಮಾತ್ರ ಆಯ್ಕೆ ಆಗುತ್ತಿಲ್ಲ. ಆದರೆ, ಅವರಲ್ಲಿ ಕೂಡ ಹೆಚ್ಚಿನವರು ಅತ್ಯಂತ ಕಡಿಮೆ ಅನುಭವ ಹೊಂದಿದವರಾಗಿದ್ದಾರೆ' ಎಂದು ವಿವರಿಸಿದ್ದಾರೆ.

ಕಾಡಾನೆ ದಾಳಿಗೆ ರೈತ ಸಾವು

ಹುಣಸೂರು/ಹನಗೋಡು: ತಾಲ್ಲೂಕಿನ ಕೊಳವಿಗೆ ಗ್ರಾಮ ಹಾಗೂ ನಾಗಾಪುರ ಪುನರ್ವಸತಿ ಬ್ಲಾಕ್‌ನಲ್ಲಿ ಎರಡು ಆನೆಗಳು ಬುಧವಾರ ರಾತ್ರಿ ಮತ್ತು ಗುರುವಾರ ನಸುಕಿನಲ್ಲಿ ದಾಳಿ ನಡೆಸಿವೆ.

ನಾಗರಹೊಳೆ ವೀರನಹೊಸಹಳ್ಳಿ ಅರಣ್ಯದಿಂದ ಬುಧವಾರ ರಾತ್ರಿ ಬಂದ ಆನೆಯ ದಾಳಿಗೆ ಸಿಲುಕಿ ಕೊಳವಿಗೆ ಗ್ರಾಮದ ನಿವಾಸಿ ರಾಜೇಶ್ (56) ಮೃತಪಟ್ಟರು. ತಂದೆಯ ವೈಕುಂಠ ಸಮಾರಾಧನೆಗಾಗಿ ಮನೆಯ ಹಿತ್ತಲಿನಲ್ಲಿ ಕೆಲಸ ಮಾಡುತ್ತಿದ್ದ ಅವರು ಆನೆ ದಾಳಿಯಿಂದ ಪಾರಾಗಲು ಮರವೇರಿದ್ದರು. ಆದರೆ, ಸೊಂಡಿಲಿನಿಂದ ಅವರನ್ನು ಆನೆಯು ಮರದಿಂದಲೇ ತೆಗೆದು ಎಸೆದಿತ್ತು.

'ಅರಣ್ಯದ ಕೆಲವೆಡೆ ರೈಲ್ವೆ ಬ್ಯಾರಿಕೇಡ್ ಹಾಕದಿರುವುದರಿಂದ ಆನೆಗಳು ನಿತ್ಯ ಬರುತ್ತಿದ್ದು, ಕೂಡಲೇ ಬ್ಯಾರಿಕೇಡ್ ಹಾಕಬೇಕು' ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಇಲ್ಲಿಗೆ 15 ಕಿ.ಮೀ ದೂರದ ನಾಗಾಪುರ ಪುನರ್ವಸತಿ 6ನೇ ಬ್ಲಾಕ್‌ನಲ್ಲಿ ಗುರುವಾರ ನಸುಕಿನಲ್ಲಿ ಮತ್ತೊಂದು ಆನೆ ಕಾಣಿಸಿಕೊಂಡು ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವೀರನಹೊಸಹಳ್ಳಿ ವಲಯ ಅರಣ್ಯಾಧಿಕಾರಿ ನಮನ ನಾರಾಯಣ ನಾಯಕ, 'ಎರಡೂ ಆನೆಗಳು ಬೇರೆ. ರೈಲ್ವೆ ತಡೆಗೋಡೆ ಮತ್ತು ಸೋಲಾರ್ ಲೈನ್ ದಾಟಿದ ಮೂರು ಆನೆಗಳಲ್ಲಿ ಎರಡು ಕಾಡಿಗೆ ಮರಳಿದ್ದವು. ಒಂದು ಕಾಡಿಗೆ ಹೋಗದೆ ನಾಗಾಪುರಕ್ಕೆ ನುಗ್ಗಿತ್ತು' ಎಂದರು.

ತಾ.ಪಂ ಇ.ಒ ಭೈರಪ್ಪ ಅಮಾನತು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಿರುಕುಳ ಹಾಗೂ ಲಂಚಕ್ಕೆ ಆಗ್ರಹಿಸಿದ ಆರೋಪದ ಮೇಲೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಭೈರಪ್ಪ ಅವರನ್ನು ಗುರುವಾರ ಸೇವೆಯಿಂದ ಅಮಾನತು ಮಾಡಲಾಗಿದೆ.

ಭೈರಪ್ಪ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರ ಸೂಚನೆ ಮೇರೆಗೆ ಅಮಾನತು ಮಾಡಲಾಗಿದೆ.

'ಭೈರಪ್ಪ ಅವರು ಸೋಲಾರ್ ದೀಪ ಖರೀದಿ, ನಿವೇಶನ ಪರಿವರ್ತನೆ ಮತ್ತು ಅಭಿವೃದ್ಧಿ ಕಾಮಗಾರಿ ವಿಚಾರಗಳಲ್ಲಿ ಅವ್ಯವಹಾರ ನಡೆಸಿದ್ದಾರೆ. ಅಭಿವೃದ್ಧಿ ಅಧಿಕಾರಿಗಳನ್ನು ಲಂಚಕ್ಕಾಗಿ ಪೀಡಿಸಿದ್ದಾರೆ' ಎಂಬ ಆರೋಪ ಎದುರಿಸುತ್ತಿದ್ದರು. ಲಂಚಕ್ಕೆ ಆಗ್ರಹಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿತ್ತು.

'ತಾಲ್ಲೂಕಿನ ಹಂಪಾಪುರ ಸ.ನಂ. 30/8, 31/2, 31/ 5, 31/6 ಸೇರಿ ಕೃಷಿ ಜಮೀನುಗಳನ್ನು ನಿವೇಶನಗಳನ್ನಾಗಿ ಪರಿವರ್ತಿಸಿರುವಲ್ಲಿ ಅಕ್ರಮ ಎಸಗಿದ್ದಾರೆ' ಎಂದು ಆರೋಪಿಸಲಾಗಿತ್ತು. '165 ನಿವೇಶನಗಳ ಪರಿವರ್ತನೆಯಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಶಾಮೀಲಾಗಿದ್ದಾರೆ. ಜೊತೆಗೆ ತಾಲ್ಲೂಕು ಪಂಚಾಯ್ತಿ ಕಚೇರಿಗೆ ಪೀಠೋಪಕರಣ ಖರೀದಿ ಹಾಗೂ ವಿವಿಧ ಕಾಮಗಾರಿಗಳಲ್ಲಿ ಲಂಚ ನೀಡುವಂತೆ ಒತ್ತಾಯಿಸುತ್ತಿದ್ದಾರೆ' ಎಂಬ ಆರೋಪವೂ ಇತ್ತು.

ಭೀಕರ ಅಪಘಾತ: ಮೂವರ ಸಾವು

ಹಿರಿಯೂರು: ತಾಲ್ಲೂಕಿನ ಗುಯಿಲಾಳು ಟೋಲ್‌ನಲ್ಲಿ ನಿಂತಿದ್ದ ಟ್ಯಾಂಕರ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ನಿದ್ದೆ ಮಂಪರಿನಲ್ಲಿದ್ದ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

ಬೆಳಗಾವಿಯ ಸುಭಾಷ್ ನಗರದ ವಿಶ್ವನಾಥ ಶಾನುಭೋಗ (72), ಸಹೋದರ ರಮೇಶ್ ಶಾನುಭೋಗ (65) ಹಾಗೂ ರಮೇಶ್ ಅವರ ಪತ್ನಿ ಸೀಮಾ ಶಾನುಭೋಗ (55) ಮೃತಪಟ್ಟವರು. ಇವರು ಬೆಳಗಾವಿಯಿಂದ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

ರಮೇಶ್ ಶಾನುಭೋಗ ಅವರು ಕಾರು ಚಾಲನೆ ಮಾಡುತ್ತಿದ್ದರು. ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಟೋಲ್ ಸಮೀಪ ಬಂದಾಗಲೂ ಕಾರಿನ ವೇಗ ಕಡಿಮೆ ಆಗಿಲ್ಲ. ಟ್ಯಾಂಕರ್ ಸಾಗುತ್ತಿದ್ದ ಟೋಲ್ ಲೇನ್‌ಗೆ ಕಾರು ಬಂದಿದೆ. ವೇಗವಾಗಿ ಬಂದ ಕಾರು ಮುಂದಿದ್ದ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ ಎಂದು ಪೊಲೀಸರು ತಿಳಿಸಿದರು.

ಘಟನೆಯಿಂದ ಭೀತಿಗೊಳಗಾದ ಟೋಲ್ ಸಿಬ್ಬಂದಿ ಅಪಘಾತದ ಸ್ಥಳಕ್ಕೆ ಧಾವಿಸಿ, ಕಾರಿನಲ್ಲಿ ಸಿಲುಕಿಕೊಂಡಿದ್ದವರನ್ನು ಹೊರಗೆ ತೆಗೆದರು. ಸಹೋದರರಿಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದರು. ಸೀಮಾ ಅವರನ್ನು ಆಂಬುಲೆನ್ಸ್‌ಗೆ ಸ್ಥಳಾಂತರಿಸುವಾಗ ಮೃತಪಟ್ಟರು ಎಂದು ಹೇಳಿದರು.

ರಾಮನ್ ಸಂಶೋಧನಾ ಸಂಸ್ಥೆ
ಬೆಂಗಳೂರು–560080

ರಾಮನ್ ಸಂಶೋಧನಾ ಸಂಸ್ಥೆಯು ಭಾರತ ಸರ್ಕಾರದಿಂದ ಅನುದಾನಿತಗೊಂಡು ಮೂಲಭೂತ ವಿಜ್ಞಾನ ಸಂಶೋಧನೆಯಲ್ಲಿ ತೊಡಗಿಕೊಂಡಿರುವ ಒಂದು ಪ್ರಧಾನ ಸ್ವಾಯತ್ತ ಸಂಸ್ಥೆಯಾಗಿದೆ. ಈ ಸಂಸ್ಥೆಯು ಭೌತಶಾಸ್ತ್ರ ವಿಭಾಗದ ವಿವಿಧ ಶಾಖೆಗಳಲ್ಲಿನ ಸ್ನಾತಕೋತ್ತರ (ಪಿ.ಎಚ್‌ಡಿ) ಪದವಿಯಲ್ಲಿ ಸಂಶೋಧನೆ ನಡೆಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ವಿವರಗಳಿಗಾಗಿ ವೀಕ್ಷಿಸಿ:https://www.rri.res.in/phd_programme.html

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)
ಬೆವಿಕಂನ ಕೆಳಗಿನ ಕಾಮಗಾರಿಗೆ ಟೆಂಡರ್‌ನ್ನು ಆಹ್ವಾನಿಸಿದೆ.
ವಿಚಾರಣೆ ಸಂಖ್ಯೆ: ಬೆವಿಕಂ/ಉಪ್ರವ್ಯ(SG&EV)/ಬಿಸಿ-53/2021-22/Enq-16 ದಿನಾಂಕ: 03.02.2022. ಕಾಮಗಾರಿಯ ಹೆಸರು: **ಬೆವಿಕಂ ಸ್ವಾಮ್ಯದ ಸ್ಥಳಗಳಲ್ಲಿ ವಿದ್ಯುತ್‌ವಾಹನ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ.** ಬಿಡ್ ದಾಖಲೆಗಳ ಲಭ್ಯತೆ: **07.02.2022 ರಂದು 17.00 ಗಂಟೆಯ ನಂತರ.** ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **21.02.2022 ರಂದು 17.00 ಗಂಟೆವರೆಗೆ.** ಬಿಡ್ ದಾಖಲೆಗಳನ್ನು ತೆರೆಯುವುದು: **23.02.2022 ರಂದು 11.00 ಗಂಟೆಗೆ.**
ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.02.2022 ರಂದು 17.00 ಗಂಟೆಯವರೆಗೆ.** ಬಿಡ್-ಪೂರ್ವಸಭೆ: **15.02.2022 ರಂದು 11.00 ಗಂಟೆಗೆ.**
ಬಿಡ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಬೆವಿಕಂ ಆಹ್ವಾನಿಸಿದೆ. ಸಂಬಂಧಿಸಿದ ವಿಚಾರಣೆಯ ಬಗ್ಗೆ ವಿವರವಾದ ಪ್ರಕಟಣೆಯನ್ನು ವೆಬ್‌ಸೈಟ್ https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು. ಇತರೆ ಯಾವುದೇ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.
ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು (ಎಸ್.ಜಿ.&ಇ.ವಿ), ಬೆವಿಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಜಿಲ್ಲೆ
ಹೊಸಪೇಟೆ, 583201 Tel: 08394-295655
Email :vijayanagaradc@gmail.com
ಸಂ/ಕಂ/ಭೂಸ್ವಾ/60/2021–22 ದಿನಾಂಕ:– 01/02/2022
-:ಅಧಿಸೂಚನೆ:-
ವಿಜಯನಗರ ಜಿಲ್ಲೆಯ ನೂತನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಭೂಸ್ವಾಧೀನ ಕುರಿತು ಇತರೆ ಪ್ರಕರಣಗಳ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಪರವಾಗಿ ಕಾನೂನು ಸಲಹೆ ನೀಡಲು ಕಾನೂನು ಸಲಹೆಗಾರ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ದಿನಾಂಕ:-07/02/2022 ರಿಂದ ಅರ್ಜಿ ಸಲ್ಲಿಸಲು ಆಹ್ವಾನಿಸಲಾಗಿದೆ.
ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಸರ್ಕಾರದ ಸುತ್ತೋಲೆಯ ತಿದ್ದುಪಡಿ ಆದೇಶ ಸಂಖ್ಯೆ:ಕಂಇ 34 ಭೂಸ್ವಾ 2010 ದಿನಾಂಕ:-11.10.2012 ರ ಪ್ರಕಾರ "ನಿವೃತ್ತ ಜಿಲ್ಲಾ ನ್ಯಾಯಾಧೀಶರು/ ನಿವೃತ್ತ ಸಿವಿಲ್ ನ್ಯಾಯಾಧೀಶರು/ ಕಾನೂನು ಪದವೀಧರರಾಗಿರುವ (ಎಲ್.ಎಲ್.ಬಿ) ಕಂದಾಯ ಇಲಾಖೆಯ ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು/ ನಿವೃತ್ತ ತಹಶೀಲ್ದಾರ್/ನಿವೃತ್ತ ಉಪ ತಹಶೀಲ್ದಾರ್‌ರವರು" ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು. [illegible] ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 313(ಬಿ) ಪ್ರಕಾರ ಮಾಸಿಕ ಸಂಚಿತ ವೇತನವನ್ನು ನಿಗದಿಗೊಳಿಸಲಾಗುವುದು.
ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಬೇಕು ನಮೂನೆ ವಿವರವನ್ನು vijayanagara.nic.in ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅಲ್ಲದೇ ನೇರವಾಗಿ ಜಿಲ್ಲಾಧಿಕಾರಿಗಳ ಇ-ಮೇಲ್ vijayanagaradc@gmail.com ವಿಳಾಸ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-21/02/2022
ಸಹಿ/- ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ
ಡಿಐಪಿಆರ್/ಹೊಸಪೇಟೆ/ಬಳ್ಳಾರಿ/29/ಎಂಸಿಎ/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಎನ್.ಆರ್. ಚೌಕ, ಬೆಂಗಳೂರು–560002
ನಂ.: ಕಾಪಾಅ/ರಮೂ–ಟಿಇಸಿ/ಟೆಂಡರ್/07/2021–2022 ದಿನಾಂಕ: 03.02.2022
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ–2)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ – ಟಿಇಸಿ ವಿಭಾಗ ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷಗಳಲ್ಲಿ)	ಇಎಂಡಿ (ಲಕ್ಷಗಳಲ್ಲಿ)
1	ಸಂಚಾರಿ ಪೊಲೀಸರ ಕೋರಿಕೆಯಂತೆ ಪೂರ್ವ ವಲಯದ ಮುಖ್ಯ ಮತ್ತು ಉಪಮುಖ್ಯ ರಸ್ತೆಗಳ ರಂಬ್ಲರ್ ಸ್ಟ್ರಿಪ್‌ಗಳು, ಲೇನ್ ಮಾರ್ಕಿಂಗ್, ಜಂಕ್ಷನ್ ಮಾರ್ಕಿಂಗ್‌ಗಳಿಗೆ ಥರ್ಮೋಪ್ಲಾಸ್ಟಿಕ್ ಪೇಂಟಿಂಗ್, ವಿವಿಧ ರೀತಿಯ ಸೈನ್ ಬೋರ್ಡ್‌ಗಳು, ಪೆಲಿಕಾನ್ ಸಿಗ್ನಲ್‌ಗಳು, ವೈಜ್ಞಾನಿಕ ಹಂಪ್‌ಗಳು, ಮೀಡಿಯನ್, ಮೀಡಿಯನ್‌ಗಳಿಗೆ ಮತ್ತು ಕರ್ಬ್ ಸ್ಟೋನ್‌ಗಳಿಗೆ ಪೇಂಟಿಂಗ್ ಒದಗಿಸುವುದು, ಹೆಚ್‌ಆರ್‌ಪಿಸಿ ಮತ್ತು ಇತರ ಸುರಕ್ಷತಾ ಪೀಠೋಪಕರಣಗಳನ್ನು ಒದಗಿಸುವುದು. (ಕರೆ–2) (ಟೆಂಡರ್ ದಸ್ತಾವೇಜು ನಮೂನೆ: ಕೆಡಬ್ಲ್ಯು–4)	718.00	10.78

ವೇಳಾಪಟ್ಟಿ: (1) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ದಸ್ತಾವೇಜುಗಳ ಲಭ್ಯತೆ: **04.02.2022** ರಿಂದ. (2) ಪೂರ್ವಭಾವಿ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.02.2022ರ ಮಧ್ಯಾಹ್ನ 1:30**ರ ವರೆಗೆ. (3) ಪೂರ್ವಭಾವಿ ಸಭೆ: **09.02.2022ರ ಮಧ್ಯಾಹ್ನ 3:30 ಗಂಟೆಗೆ.** (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.02.2022ರ ಸಂಜೆ 4:00 ಗಂಟೆವರೆಗೆ.** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.02.2022ರ ಸಂಜೆ 4:30 ಗಂಟೆಗೆ.** (6) ಆರ್ಥಿಕ ಬಿಡ್ ತೆರೆಯುವ ದಿನಾಂಕ: **ಟೆಂಡರ್‌ದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು (ರಮೂ–ಟಿಇಸಿ), ಬಿಬಿಎಂಪಿ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ, ನಂ.1 ಹೇಮಾವತಿ ಎಡದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ, ದೂರವಾಣಿ: 08176–252204
ಅಲ್ಪಾವಧಿ ಟೆಂಡರ್ ಪ್ರಕಟಣೆ–07/2021–22 ದಿನಾಂಕ: 01.02.2022/ಐಟಂವಾರು ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) Two cover System
ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ ಕೆಪಿಡಬ್ಲ್ಯುಡಿ/ಸಿಪಿಡಬ್ಲ್ಯುಡಿ ಹಾಗೂ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳ ಅರ್ಹ ಹಾಗೂ ಕಾವೇರಿ ನೀರಾವರಿ ನಿಗಮದಿಂದ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ಸಂಖ್ಯೆ: 5 ಪ್ಯಾಕೇಜ್ ಕಾಮಗಾರಿಗಳು ಕಾಮಗಾರಿಗಳ ವಿವರ: ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕಿನ ರಸ್ತೆಗಳ ನಿರ್ಮಾಣ ಮತ್ತು ಅಭಿವೃದ್ಧಿ ಕಾಮಗಾರಿಗಳು ಟೆಂಡರ್‌ಗಿಟ್ಟ ಕಾಮಗಾರಿಯ ಮೊತ್ತ: ರೂ. 84.00 ರಿಂದ ರೂ. 220.55 ಲಕ್ಷಗಳು. ಇ.ಎಂ.ಡಿ. ಮೊತ್ತ: ರೂ. 1,68,000/– ರಿಂದ ರೂ.3,31,000/– ಅವಧಿ: 6 ತಿಂಗಳುಗಳು. ಇ–ಪ್ರೊಕ್ಯೂರ್‌ಮೆಂಟ್‌ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ:02.02.2022 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:15.02.2022 ರ 16.00 ಗಂಟೆಯವರೆಗೆ. Pre bid meeting – ದಿನಾಂಕ: 05.02.2022. ರಂದು ಮುಖ್ಯ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ಜಲಾಶಯ ಯೋಜನೆ, ಗೊರೂರು ಕಛೇರಿ, ಸ್ವೀಕೃತ ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:17.02.2022 ರಂದು 16.00 ಗಂಟೆಗಳು, ಅರ್ಹತೆಪಡೆದ ಗುತ್ತಿಗೆದಾರರ ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿರುವ ಟೆಂಡರ್‌ಗಿಟ್ಟ ಅಂದಾಜುಮೊತ್ತ ಹಾಗೂ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತ ಮತ್ತು ಇ.ಎಂ.ಡಿ. ಮೊತ್ತವು ಅಂತಿಮವಾಗಿರುತ್ತದೆ ಮತ್ತು ಪ್ರಚಲಿತದಲ್ಲಿರುವ ತೆರಿಗೆಗಳು ಅನ್ವಯವಾಗುತ್ತದೆ. ಸೂಚನೆ: ಹೆಚ್ಚಿನ ವಿವರ/ಮಾಹಿತಿಗಳನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕಛೇರಿಯಲ್ಲಿ ಪಡೆಯ ಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/695/2021–22

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೂವಿನಹಡಗಲಿ, ಬಳ್ಳಾರಿ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/2021–22/1939 ದಿ:–02/02/2022.
ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪ್ರಕಟಣೆ ಮುಂದೂಡಿಕೆ.
ಉಲ್ಲೇಖ:1.ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 1817 ದಿನಾಂಕ: 11/01/2022.
ಮೇಲಿನ ಉಲ್ಲೇಖದಲ್ಲಿನ ಈ ಕಛೇರಿಯಿಂದ ಆಹ್ವಾನಿಸಲಾದ ಅಲ್ಪಾವಧಿ ಟೆಂಡರ್ ಪ್ರಕಟಣೆ ಉಲ್ಲೇಖ (1)ರಲ್ಲಿನ ಕಾಮಗಾರಿಯ ಟೆಂಡರ್‌ಗಳನ್ನು ಅನಿವಾರ್ಯ ಕಾರಣಗಳಿಂದಾಗಿ ಈ ಕೆಳಕಾಣಿಸಿದಂತೆ ಮುಂದೂಡಲಾಗಿದೆ.
ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: 09/02/2022 ರಂದು 16.00 ಗಂಟೆಯ ವರೆಗೆ. ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 10/02/2022 ರಂದು 16.00 ಗಂಟೆಯ ವರೆಗೆ. ಇ) ಇ–ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ: 11/02/2022 ರಂದು 16.30 ಗಂಟೆಗೆ
ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೂವಿನ ಹಡಗಲಿ
ಡಿಐಪಿಆರ್/ಬಳ್ಳಾರಿ/716/ಎಂಸಿಎ/2021–22

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ನಂದಿನಗರ, ಅಂಚೆ ಪೆಟ್ಟಿಗೆ ಸಂಖ್ಯೆ 6, ಬೀದರ–585 226
ಸಂಖ್ಯೆ: ಕುಸ/ಶೈವಿ/ಪ.ಸಂ.ಡಿ/ಪ್ರವೇಶ/2021–22 ದಿನಾಂಕ: 03–02–2022
ಅಧಿಸೂಚನೆ
ವಿಷಯ: ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳಲ್ಲಿ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಉಳಿದಿರುವ ಸೀಟುಗಳಿಗೆ ಪ್ರವೇಶ ಪಡೆಯುವ ಕುರಿತು.
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಅಂಗ ಸಂಸ್ಥೆಗಳಾದ ಐದು (5) ಪಶು ಸಂಗೋಪನಾ ಪಾಲಿಟೆಕ್ನಿಕ್‌ಗಳಲ್ಲಿ ಉಳಿದಿರುವ 52 ಸೀಟುಗಳನ್ನು ಭರ್ತಿಮಾಡಲು ನೇರ ಸಂದರ್ಶನವನ್ನು ದಿನಾಂಕ: 16.02.2022 ರಂದು ಬೆಳಿಗ್ಗೆ 09.30 ಘಂಟೆಗೆ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಭಾಂಗಣ, ನಂದಿನಗರ, ಬೀದರ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.
ಹೆಚ್ಚಿನ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.kvafsu.edu.inನಲ್ಲಿ ಪ್ರಕಟಿಸಲಾಗಿದೆ.
ಆದೇಶದ ಮೇರೆಗೆ
ಸಹಿ/– (ಕೆ.ಸಿ.ವೀರಣ್ಣ)
ಕುಲಸಚಿವರು

ಪುರಸಭೆ ಕಾರ್ಯಾಲಯ ಕುರೇಕುಪ್ಪ ಬಳ್ಳಾರಿ (ಜಿಲ್ಲೆ),
583123. ☎ : 08395–295601
E-mail : itstaffkurekuppa@gmail.com
Web Site: www.kurekuppatown.mrc.gov.in
ಸಂಖ್ಯೆ: ಪುಸಕು/ಕೆ.ಕೆ.ಆರ್.ಡಿ.ಬಿ/ಕಾಮಗಾರಿ/2021–22 ದಿನಾಂಕ:31.01.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಬಳ್ಳಾರಿ ಜಿಲ್ಲೆ ಕುರೇಕುಪ್ಪ ಪುರಸಭೆಗೆ ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಅನುಮೋದನೆಯಾದ ಕಾಮಗಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ KW-4ರ ಟೆಂಡರ್ ದಸ್ತಾವೇಜು ಅನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್‌ಅಹ್ವಾನಿಸಲಾಗಿರುತ್ತದೆ.
ಪ್ಯಾಕೇಜ್‌ಕಾಮಗಾರಿ ವಿವರ: Providing and Laying of BT road from pashusangopane to nadakaryala in kurekuppa town (DMA/2021-22/RD/WORk_INDENT122816). ಟೆಂಡರ್‌ಗಿಟ್ಟ ಮೊತ್ತ(ರೂ.ಲಕ್ಷಗಳಲ್ಲಿ): 264.81. **EMD: 3,97,230/–.**
ಸದರಿ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ:02.03.2022ರಂದು 16.30 ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರನ್ನು ದಿನಾಂಕ:04.03.2022 ರಂದು 17:00 ಗಂಟೆಗೆ ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಇ–ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ :**https://eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ,
ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ ಕುರೇಕುಪ್ಪ
ಡಿಐಪಿಆರ್/ಬಳ್ಳಾರಿ/719/ಎಂಸಿಎ/2021–22

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು
E-Mail: dudc_ckg@yahoo.co.in ದೂ : 08262-239010
ಸಂ/ಡಿಯುಡಿಸಿ(1)ಸಿಆರ್/21/2020–21 ದಿನಾಂಕ :02.02.2022
ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ–2ನೇ ಕರೆ :
ನಗರೋತ್ಥಾನ (ಮುನಿಸಿಪಾಲಿಟಿ)–3 ರ ಯೋಜನೆಯಡಿ ಚಿಕ್ಕಮಗಳೂರು ನಗರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಕೆ.ಟಿ.ಟಿ.ಪಿ. ಕಾಯ್ದೆಯನ್ವಯ ನೋಂದಾಯಿತ ಅರ್ಹ 1 ನೇ ದರ್ಜೆ ಸಿವಿಲ್ ಗುತ್ತಿಗೆದಾರರುಗಳಿಂದ ಇ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಷರತ್ತುಗಳಿಗೊಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ. ಇಂಡೆಂಟ್ ನಂ: **DMA/2021-22/RD/WORK_INDENT116975/CALL-2**, ಟೆಂಡರ್‌ಗಿಟ್ಟ ಮೊತ್ತ ರೂ **490.41** ಲಕ್ಷ, ಕಾಲಾವಧಿ 06 ತಿಂಗಳು, ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ **09.02.2022 ರ 11–00** ಗಂಟೆಗೆ, ಸ್ಥಳ: ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ, ಚಿಕ್ಕಮಗಳೂರು, ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **28.02.2022 ರ 17.00** ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ **02.03.2022 ರ 10.30** ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿನಾಂಕ:**14.03.2022 ರ 11.00** ಗಂಟೆಗೆ. ಹೆಚ್ಚಿನ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ & ಜಿಲ್ಲಾ ನಗರಾಭಿವೃದ್ಧಿ ಕೋಶದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಯಾವುದೇ ಬದಲಾವಣೆಗಳಾದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು, ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/–ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182–222942, ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)–2ನೇ ಕರೆ
ಐ.ಎಫ್.ಟಿ ಸಂಖ್ಯೆ: 67/2021–22 ದಿನಾಂಕ : 01.02.2022
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಕೆಳಕಂಡ ಕಾಮಗಾರಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3 ದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ **3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ (ಮಳೆಹಾನಿ) ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕಿನ IM-ROVEMENTS TO BHADRAVATHI - HOLEHONNURU ROAD TO JOIN MM ROAD VIA YAMMIHATTI - THIMLAPURA-MARASHETTYHALLI-ARAKERE-DHANWADI ROAD CH 2.0 TO 2.80 KM AND REPAIR OF PIPE CULVERT at CH 3.60 KM IN BHADRAVATHI TQ. (FLOOD WORK) (Indent No.146453) ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ. 66.22 ಲಕ್ಷ ಮತ್ತು ಇ.ಎಂ.ಡಿ, ಮೊತ್ತ ರೂ. 1.32 ಲಕ್ಷ ಮತ್ತು ಇ.ಎಂ.ಡಿ. ಸದರಿ ಕಾಮಗಾರಿಯ ಟೆಂಡರ್ ಅವಧಿ 06 ತಿಂಗಳ ಮಳೆಗಾಲ ಸೇರಿ.**
ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್–3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ **ದಿನಾಂಕ: 01–02–2022 ರಿಂದ 09–02–2022 ರ 17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು **ದಿನಾಂಕ: 09–02–2022 ರ ಸಂಜೆ 5:00 ಗಂಟೆಯೊಳಗೆ** ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ **ದಿನಾಂಕ: 10–02–2022 ರಂದು** ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು **ದಿನಾಂಕ: 11–02–2022 ರ ನಂತರ** ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ 10–02/ಝೆಂಕಾರ್/2021–22

ಕರ್ನಾಟಕ ಸರ್ಕಾರದ ಸಚಿವಾಲಯ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
ವಿಕಾಸಸೌಧ, ಬೆಂಗಳೂರು–560 001.
ಸಂಖ್ಯೆ: ಪಸಮೀ/ಇ–325/ಪಸೇ/2021–22 ದಿನಾಂಕ: 25.01.2022
ಪ್ರಕಟಣೆ
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರದ ಕುಲಪತಿಯವರ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ.
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ ಇಲ್ಲಿನ ಕುಲಪತಿಯವರ ಹುದ್ದೆಯ ಅವಧಿಯು **ದಿನಾಂಕ: 22.02.2022ಕ್ಕೆ** ಅಂತ್ಯಗೊಳ್ಳಲಿದ್ದು, ಈ ಹುದ್ದೆಯನ್ನು ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಮಾರ್ಗಸೂಚಿಗಳು ಮತ್ತು ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿನಿಯಮ, 2004 ರನ್ವಯ ಹಾಗೂ ಅದರಲ್ಲಿ ಕಲಂ 13ರಲ್ಲಿ ವಿಧಿಸಿರುವ ಷರತ್ತು ಹಾಗೂ ನಿಬಂಧನೆಗಳಡಿ ಭರ್ತಿ ಮಾಡಲು ಉದ್ದೇಶಿಸಲಾಗಿದೆ.
ಆದ್ದರಿಂದ. ವಿಶ್ವವಿದ್ಯಾಲಯದ ಧನಸಹಾಯ ಆಯೋಗದ ಮಾರ್ಗಸೂಚಿಗಳು ಮತ್ತು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2004 ರನ್ವಯ ಕುಲಪತಿಯವರಾಗಿ ನೇಮಕ ಹೊಂದಲು ಬಯಸುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ
ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಪಶುವೈದ್ಯಕೀಯ ವಿಜ್ಞಾನ/ಪಶು ವಿಜ್ಞಾನ/ಹೈನುವಿಜ್ಞಾನ /ಮೀನುಗಾರಿಕೆ ವಿಜ್ಞಾನ ಹಾಗೂ ಈ ಸಂಬಂಧಿತ ಕ್ಷೇತ್ರದಲ್ಲಿ ಪ್ರಾಧ್ಯಾಪಕ ಅಥವಾ ತತ್ಸಮಾನ ವೃಂದಲ್ಲಿ 10 ವರ್ಷ ಅಥವಾ ಅದಕ್ಕೂ ಮೇಲ್ಪಟ್ಟ ಅವಧಿಗೆ ಸೇವೆ ಸಲ್ಲಿಸಿರತಕ್ಕದ್ದು. ಅರ್ಜಿ ಸಲ್ಲಿಸಲು ಬಯಸುವ ಅರ್ಹ ಅಭ್ಯರ್ಥಿಗಳು/ ಅಧಿಕಾರಿಗಳು ತಮ್ಮ ಸಂಪೂರ್ಣ ಸೇವಾ ವಿವರಗಳುಳ್ಳ ಅರ್ಜಿಗಳನ್ನು ಇದರೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ, ಅವಶ್ಯವಿರುವ ವಿವರ/ದಾಖಲೆಗಳೊಂದಿಗೆ 5 ಪ್ರತಿಗಳಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು ರವರಿಗೆ ಈ ಪ್ರಕಟಣೆ ಹೊರಡಿಸಿದ ಮೂವತ್ತು (30) ದಿನಗಳೊಳಗಾಗಿ ಸಲ್ಲಿಸತಕ್ಕದ್ದು.
ಅರ್ಜಿ ಸಲ್ಲಿಸಲು ನಿಗಧಿಪಡಿಸಲಾಗಿರುವ ನಮೂನೆಯನ್ನು ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್‌ನಲ್ಲಿ (www.kvafsu.edu.in) ಪಡೆಯುವುದು.
ಸಹಿ/– ಸರ್ಕಾರದ ಅಧೀನ ಕಾರ್ಯದರ್ಶಿ
ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
ವಾಸಾಸಂಇ/ಬೆಂನ/ಜಿಎ/3188/2021–22 (ಪಶುಸಂಗೋಪನೆ)
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.
ದೂರವಾಣಿ ಸಂಖ್ಯೆ: 080–22133370 ಫ್ಯಾಕ್ಸ್ ಸಂಖ್ಯೆ: 080–22133365
Email ID: eepwdbngdn@yahoo.com E-Portal : https://eproc.karnataka.gov.in
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 24/2021–22
ದಿನಾಂಕ: 02.02.2022
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣೆ ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಹಾಗೂ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನೆಲಮಂಗಲ ಹಾಗೂ ನಂ.1 ದಕ್ಷಿಣ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ 2 ಸಂಖ್ಯೆಯ (ರೂ. 200.00 ಮತ್ತು 300.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.
ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್‌ಟಲ್‌ನಲ್ಲಿ ಸೂಚಿಸಲಾಗಿದೆ.
ಕ್ರ.ಸ 1 ಕ್ಕೆ : (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 02.02.2022 ರಿಂದ.
2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ:09.02.2022 ಸಂಜೆ 4.00 ಗಂಟೆಯವರೆಗೆ.
3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 10.02.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಕ್ರ.ಸ 2 ಕ್ಕೆ : (1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 02.02.2022 ರಿಂದ.
2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ:16.02.2022 ಸಂಜೆ 4.00 ಗಂಟೆಯವರೆಗೆ.
3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 17.02.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.
ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.
DIPR/DDU/Zen/R.O:3203/2021-22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
3ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–1
ದೂ: 080–22032754, ಇ–ಮೇಲ್: diregov.rdpr@gov.in / rdpr.info@gmail.com
ಸಂ: ಗ್ರಾಅಪ/22/ಇ–ಆಡಳಿತ/2021 ಬೆಂಗಳೂರು ದಿನಾಂಕ: 04–02–2022
ಅಲ್ಪಾವಧಿ ಟೆಂಡರ್ ಪ್ರಕಟಣೆ
ಬಾಪೂಜಿ ಸೇವಾ ಕೇಂದ್ರ ತಂತ್ರಾಂಶಕ್ಕೆ ಅಗತ್ಯವಿರುವ ಹೆಚ್ಚುವರಿ **Payment Gateway** ಸೇವೆಯನ್ನು ಮತ್ತು ಗ್ರಾಮ ಪಂಚಾಯಿತಿಗಳನ್ನು **BBPS** ನಡಿ **On-board** ಮಾಡಲು ಟೆಂಡರ್ ಪ್ರಕ್ರಿಯೆ ಮೂಲಕ ಸೇವೆಯನ್ನು ಬ್ಯಾಂಕ್‌ಗಳಿಂದ ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://www.eproc.karnataka.gov.in** ನಿಂದ ದಿನಾಂಕ: **04.02.2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ (Cover-1 & Cover-2) ಸಲ್ಲಿಸಲು ಕೊನೆಯ ದಿನಾಂಕ: **23.02.2022ರ ಸಂಜೆ 5.00 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಮತ್ತು ಯಾವುದೇ ಸ್ಪಷ್ಟೀಕರಣಗಳಿಗಾಗಿ ನಿರ್ದೇಶಕರು (ಇ–ಆಡಳಿತ) ಗ್ರಾಅಪ ಇಲಾಖೆ ಇವರನ್ನು ಕಚೇರಿ ಸಮಯದಲ್ಲಿ ದೂರವಾಣಿ: 080–22032754 ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು (ಇ–ಆಡಳಿತ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ
DIPR/DDU/YC/3196/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಬೆಳಗಾವಿ
ನಂ. ಕಾ.ನಿ.ಅ/ಗ್ರಾ.ಕು.ನೀ.&ನೈ/ಬೆಳಗಾವಿ/ಪಿಬಿ–2,3&4/ಕು.ನೀ.ಸ.ಯೋ/ಕೆಡಬ್ಲ್ಯು–2&3/ಟೆಂಡರ್–61/2021–22/4569 ದಿನಾಂಕ: 02–02–2022
ಮುಂದುವರಿಸುವ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಉಲ್ಲೇಖ: ನಂ. ಕಾ.ನಿ.ಅ/ಗ್ರಾ.ಕು.ನೀ&ನೈ/ಬೆಳಗಾವಿ/ಪಿಬಿ–2,3,&4/ಕು.ನೀ.ಸ.ಯೋ/ಕೆಡಬ್ಲ್ಯು–2&3/ಟೆಂಡರ್–61/2021–22/4489 ದಿನಾಂಕ: 25–01–2022
ಮೇಲಿನ ಉಲ್ಲೇಖ (1) ರಡಿ ಈ ಕಚೇರಿಯ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಲಾದ ಈ ಕೆಳಗಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಗಿನಂತೆ ಮುಂದೂಡಲಾಗಿದೆ.
ಇಂಡೆಂಟ್ ನಂ. 38220, 37850, 38547, 38563, 38553, 38568, 38562 & 38565.

01 ಆನ್‌ಲೈನ್ ನಲ್ಲಿ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಅಪ್‌ಲೋಡ್ ಮಾಡುವ ದಿನಾಂಕ	:	02–02–2022
02 ಟೆಂಡರ್ ಪೂರ್ವಭಾವಿ ಸಭೆ ಕಾರ್ಯ–ನಿರ್ವಾಹಕ ಅಭಿಯಂತರವರ ಕಚೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಬೆಳಗಾವಿ, ಪಂ.ರಾ.ಇಂ. ವಿಭಾಗ ಕಚೇರಿಯ 1ನೇ ಮಹಡಿ ಕೊಲ್ಲಾಪೂರ ವೃತ್ತ ನೇಹರೂ ನಗರ, ಬೆಳಗಾವಿ–590010 ಇವರ ಕಚೇರಿಯಲ್ಲಿ	:	08–02–2022 ಬೆಳಿಗ್ಗೆ 11:30 ಘಂಟೆವರೆಗೆ
03 ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	:	11–02–2022 ಬೆಳಿಗ್ಗೆ 11:00 ಘಂಟೆವರೆಗೆ
04 ಇ–ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	:	14–02–2022 ಸಾಯಂಕಾಲ 17:31 ಗಂಟೆ ನಂತರ
05 ಭರ್ತಿ ಮಾಡಿದ ಇ–ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	:	ತಾಂತ್ರಿಕ ಬಿಡ್ ಅನುಮೋದಿಸಿದ ನಂತರ

ಸೂಚನೆ : ಹೆಚ್ಚಿನ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ e-procurement portal, www.eproc.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ.&ನೈ. ವಿಭಾಗ, ಬೆಳಗಾವಿ
DIPO/RO No. 1436/2021-22

‘ಗೌಳಿ’ ಟೀಸರ್‌ಗೆ ಪ್ರೇಕ್ಷಕರು ಫಿದಾ

ಸಿನಿಮಾದಿಂದ ಕೆಲಕಾಲ ದೂರವಿದ್ದ ನಟ ಶ್ರೀನಗರ ಕಿಟ್ಟಿ ಇದೀಗ ‘ಗೌಳಿ’ ಚಿತ್ರದ ಮುಖಾಂತರ ಮತ್ತೆ ತೆರೆಯ ಮೇಲೆ ಹೊಸ ಲುಕ್‌ನೊಂದಿಗೆ ಬಂದಿದ್ದಾರೆ. ಸೂರಾ ಎಸ್. ನಿರ್ದೇಶನದ ಈ ಚಿತ್ರದ ಟೀಸರ್ ಅನ್ನು ನಟರಾದ ಗಣೇಶ್, ಪ್ರೇಮ್ ಹಾಗೂ ‘ದುನಿಯಾ’ ವಿಜಯ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

ಛಾಯಾಗ್ರಾಹಕರಾಗಿದ್ದ ಸೂರ ಅವರ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದೆ. ‘ಇಂತಿ ನಿನ್ನ ಪ್ರೀತಿಯ’, ‘ಸವಾರಿ’, ‘ಹುಡುಗರು’ ಹೀಗೆ ಹಲವು ಹಿಟ್ ಚಿತ್ರಗಳಲ್ಲಿ ಲವರ್‌ಬಾಯ್ ಪಾತ್ರದ ಮುಖಾಂತರ ಚಂದನವನದಲ್ಲಿ ತನ್ನದೇ ಛಾಪು ಮೂಡಿಸಿದ್ದ ಶ್ರೀನಗರ ಕಿಟ್ಟಿ, ಇದೀಗ ರಫ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

‘ಗೌಳಿ ಎನ್ನುವುದು ಮಹಾರಾಷ್ಟ್ರ ಮೂಲದವರು. ಸಿದ್ಧಿ ಜನಾಂಗ ಹೇಗೆ ಶಿರಸಿ, ಯಲ್ಲಾಪುರದಲ್ಲಿ ಇದ್ದಾರೆಯೋ ಅದೇ ರೀತಿ ಗೌಳಿ ಜನಾಂಗವೂ ಇದೇ ಪ್ರದೇಶದಲ್ಲಿದೆ. ಇದೊಂದು ನೈಜ ಘಟನೆ ಆಧಾರಿತ ಸಿನಿಮಾ. ಕಥೆ ಸಿದ್ಧಪಡಿಸಿದ ಮೇಲೆ ಈ ಪಾತ್ರಕ್ಕೆ ಶ್ರೀನಗರ ಕಿಟ್ಟಿ ಅವರೇ ಸೂಕ್ತ ಎಂದು ನಾನು ಖಚಿತವಾಗಿದ್ದೆ. ಅವರು ಈ ಕಥೆಗಾಗಿ ಗೆಟಪ್ ಬದಲಾಯಿಸಿಕೊಂಡಿದ್ದಾರೆ. ಬಾಲನಟಿ ನಮನ, ಕಿಟ್ಟಿ ಮಗಳಾಗಿ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಯಲ್ಲಾಪುರ ಸುತ್ತಮುತ್ತಲ ಗ್ರಾಮೀಣ ಪ್ರದೇಶಗಳಲ್ಲಿ ಮೊದಲ ಹಂತದ ಚಿತ್ರೀಕರಣ ನಡೆಸಿದ್ದೇವೆ. ಅಲ್ಲದೆ ಬೆಂಗಳೂರು ಸುತ್ತಮುತ್ತ ಮತ್ತಷ್ಟು ಆ್ಯಕ್ಷನ್ ದೃಶ್ಯಗಳನ್ನು ಚಿತ್ರೀಕರಿಸಲಾಗಿದ್ದು, ಕೊನೆಯ ಹಂತದ ಇಪ್ಪತ್ತು ದಿನಗಳ ಚಿತ್ರೀಕರಣ ಮಾತ್ರವೇ ಬಾಕಿ ಉಳಿದಿದೆ’ ಎಂದರು ಸೂರ.

‘ಕಿಟ್ಟಿ ಅವರನ್ನು ಇದೇ ರೀತಿ ರಫ್ ಲುಕ್‌ನಲ್ಲಿ ಆ್ಯಕ್ಷನ್ ಸಿನಿಮಾಗಳಲ್ಲೇ ನೋಡಲು ಬಯಸುತ್ತೇನೆ. 22 ವರ್ಷದಿಂದ ನಾವೆಲ್ಲರೂ ಆತನ ಜೊತೆಗಿದ್ದೇವೆ. ಇದೊಂದು ಪವರ್‌ಫುಲ್ ಟೀಸರ್. ಪ್ರೇಕ್ಷಕರಿಗೆ ಇದೊಂದು ಅದ್ಭುತವಾದ ಮನರಂಜನೆ ನೀಡಲಿದೆ’ ಎಂದರು ಗಣೇಶ್. ರಘು ಸಿಂಗಂ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಪಾವನಾ ಗೌಡ ಚಿತ್ರದ ನಾಯಕಿ. ರಂಗಾಯಣ ರಘು, ಯಶ್ ಶೆಟ್ಟಿ, ಕಾಕ್ರೋಚ್ ಸುಧಿ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ❖

ಸಿನಿ ಸಂಕ್ಷಿಪ್ತ

ಮತ್ತೆ ಸಿನಿಮೋತ್ಸವ

ಫೆಬ್ರುವರಿ ಎರಡನೇ ವಾರದಿಂದ ಚಂದನವನದಲ್ಲಿ ಸಾಲು ಸಾಲು ಸಿನಿಮಾಗಳ ಹಬ್ಬ ಆರಂಭವಾಗಲಿದೆ. ಕಳೆಗುಂದಿದ್ದ ಚಿತ್ರಮಂದಿರಗಳಲ್ಲಿ ಮತ್ತೆ ಶಿಳ್ಳೆ, ಚಪ್ಪಾಳೆ ಪ್ರತಿಧ್ವನಿಸಲಿದೆ.

ಅಭಿಲಾಷ್ ಪಿ.ಎಸ್.

ಏರಿಕೆಯಾಗುತ್ತಿದ್ದ ಕೋವಿಡ್ ಪ್ರಕರಣಗಳ ನಿಯಂತ್ರಣಕ್ಕಾಗಿ ಹೇರಿದ್ದ ನಿರ್ಬಂಧಗಳನ್ನು ಸರ್ಕಾರ ಕ್ರಮೇಣವಾಗಿ ಸಡಿಲಗೊಳಿಸುತ್ತಿದೆ. ಪ್ರಸ್ತುತ ಚಿತ್ರಮಂದಿರಗಳಲ್ಲಿ, ಮಲ್ಟಿಪ್ಲೆಕ್ಸ್‌ಗಳಲ್ಲಿರುವ ಪ್ರೇಕ್ಷಕರ ಸಂಖ್ಯೆ ನಿರ್ಬಂಧವನ್ನೂ ತಜ್ಞರ ಸಲಹೆ ಪಡೆದು ತೆರವುಗೊಳಿಸುವ ಭರವಸೆಯನ್ನೂ ಚಿತ್ರರಂಗಕ್ಕೆ ಸರ್ಕಾರ ನೀಡಿದೆ. ಶೀಘ್ರದಲ್ಲೇ ಈ ಆದೇಶವೂ ಹೊರಬೀಳುವ ನಿರೀಕ್ಷೆಯಲ್ಲಿ ಚಿತ್ರರಂಗವಿದೆ. ಈ ಹಿನ್ನೆಲೆಯಲ್ಲಿ ಸಾಲು ಸಾಲು ಚಿತ್ರಗಳ ಬಿಡುಗಡೆ ದಿನಾಂಕ ಘೋಷಣೆಯಾಗಿವೆ. ಸುಮಾರು ಒಂದು ತಿಂಗಳ ಬಳಿಕ ಚಿತ್ರಮಂದಿರಗಳಲ್ಲಿ ಮತ್ತೆ ಸಿನಿಮೋತ್ಸವಕ್ಕೆ ಸಿದ್ಧತೆ ಆರಂಭವಾಗಿದೆ.

ಫೆ.11ಕ್ಕೆ ಮೂರು ಸಿನಿಮಾ: ಡಾರ್ಲಿಂಗ್ ಕೃಷ್ಣ, ರಾಚೆಲ್ ಡೇವಿಡ್, ಮಿಲನ ನಾಗರಾಜ್ ಅಭಿನಯದ ಬಹುನಿರೀಕ್ಷಿತ ‘ಲವ್ ಮಾಕ್ಟೇಲ್–2’ ಈಗಾಗಲೇ ಘೋಷಣೆಯಾದಂತೆ ಫೆ.11ಕ್ಕೇ ಬಿಡುಗಡೆಯಾಗಲಿದೆ. ಈ ಕುರಿತು ಗುರುವಾರ ಟ್ವಿಟರ್‌ನಲ್ಲಿ ಡಾರ್ಲಿಂಗ್ ಕೃಷ್ಣ ಮಾಹಿತಿ ನೀಡಿದ್ದಾರೆ.

ಡಾರ್ಲಿಂಗ್ ಕೃಷ್ಣ ಹಾಗೂ ಅವರ ಪತ್ನಿ, ನಟಿ ಮಿಲನಾ ನಾಗರಾಜ್ ಅವರೇ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಮಂಗಳವಾರ ಎರಡನೇ ಭಾಗದ ಟ್ರೇಲರ್ ಬಿಡುಗಡೆಯಾಗಿದ್ದು, ಪ್ರೇಕ್ಷಕರಲ್ಲಿ ಮತ್ತಷ್ಟು ಕುತೂಹಲ ಮೂಡಿಸಿದೆ. ‘ನಿಧಿ’ಯನ್ನು ಕಳೆದುಕೊಂಡ ‘ಆದಿ’ಯ ಕಥೆ ಎರಡನೇ ಭಾಗದಲ್ಲಿ ಸಾಗುತ್ತದೆ. ‘ಎರಡನೇ ಭಾಗದಲ್ಲಿ ನಿಧಿ ಪಾತ್ರ ಇರುತ್ತದೆ. ಆದಿ ನೆನಪುಗಳಲ್ಲಿ ನಿಧಿ ಜೀವಂತವಾಗಿರುತ್ತಾಳೆ. ಮೊದಲ ಭಾಗದಲ್ಲಿ ಹೇಳದೇ ಇರುವ ವಿಷಯಗಳು, ಪಾತ್ರಗಳು ಎರಡನೇ ಭಾಗದಲ್ಲಿ ಬರುತ್ತವೆ’ ಎಂದರು ಡಾರ್ಲಿಂಗ್ ಕೃಷ್ಣ.

ಇದೇ ಮೊದಲ ಬಾರಿಗೆ ನಟ ಅಚ್ಯುತ್ ಕುಮಾರ್ ನಾಯಕರಾಗಿ ನಟಿಸಿರುವ ‘ಫೋರ್ ವಾಲ್ಸ್’ ಕೂಡಾ ಫೆ.11ಕ್ಕೆ ತೆರೆ ಕಾಣಲಿದೆ. ‘ಮಂತ್ರಂ’ ಸಿನಿಮಾ ಮೂಲಕ ಚಂದನವನಕ್ಕೆ ನಿರ್ದೇಶಕರಾಗಿ ಪ್ರವೇಶಿಸಿದ್ದ ಎಸ್.ಎಸ್ ಸಜ್ಜನ್, ಈ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಅಚ್ಯುತ್ ಕುಮಾರ್, ಮೂರು ಶೇಡ್‌ಗಳಲ್ಲಿ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಫೆ.11ರಂದೇ ಎಸ್.ಎಸ್. ರವಿಗೌಡ ಹಾಗೂ ‘ಬಿಗ್‌ಬಾಸ್’ ಖ್ಯಾತಿಯ ದಿವ್ಯ ಸುರೇಶ್ ಅಭಿನಯಿಸಿರುವ ‘ರೌಡಿ ಬೇಬಿ’ ತೆರೆ ಕಾಣಲಿದೆ.

ಫೆ.18ಕ್ಕೆ ‘ವರದ’: ‘ರಾಬರ್ಟ್’ ಸಿನಿಮಾದ ಮುಖಾಂತರ ಸಿನಿ ಪಯಣದ ಹೊಸ ಇನಿಂಗ್ಸ್ ಆರಂಭಿಸಿರುವ ವಿನೋದ್ ಪ್ರಭಾಕರ್ ನಟನೆಯ ‘ವರದ’ ಸಿನಿಮಾ ಫೆ.18ಕ್ಕೆ ತೆರೆಕಾಣುತ್ತಿದೆ. ಉದಯ ಪ್ರಕಾಶ್ ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರದ ಸಹ ನಿರ್ಮಾಪಕರು ಸುನಿತಾ ಪ್ರಕಾಶ್. ಆ್ಯಕ್ಷನ್ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್ ಅವರ ತಂದೆ ಪಾತ್ರದಲ್ಲಿ ನಟ ಚರಣ್ ರಾಜ್ ನಟಿಸಿದ್ದಾರೆ. ಅಮಿತ ಈ ಚಿತ್ರದ ನಾಯಕಿ.

ಫೆ.25ಕ್ಕೆ ‘ಓಲ್ಡ್ ಮಾಂಕ್’: ಶ್ರೀನಿ ಹಾಗೂ ಅದಿತಿ ಪ್ರಭುದೇವ ನಟನೆ, ನಿರ್ದೇಶನದ ಚಿತ್ರ ‘ಓಲ್ಡ್‌ಮಾಂಕ್’ ಫೆ.25ಕ್ಕೆ ತೆರೆಕಾಣಲಿದೆ. ‘ವಿಕ್ರಾಂತ್ ರೋಣ’ ಬಿಡುಗಡೆ ಮುಂದಕ್ಕೆ ಹೋಗಿರುವ ಕಾರಣ ‘ಓಲ್ಡ್‌ಮಾಂಕ್’ ಹಾದಿ ಸುಗಮವಾಗಿದೆ. ಚಿತ್ರವು ಕನ್ನಡ ಹಾಗೂ ತೆಲುಗಿನಲ್ಲಿ ತೆರೆಕಾಣಲಿದೆ.

ಜ.11ರಂದು ತೆರೆಕಾಣಬೇಕಿದ್ದ ಪ್ರಭಾಸ್ ಅಭಿನಯದ ಪ್ಯಾನ್ ಇಂಡಿಯಾ ಸಿನಿಮಾ ‘ರಾಧೆ ಶ್ಯಾಮ್’ ಮುಂದೂಡಲ್ಪಟ್ಟಿತ್ತು. ಇದೀಗ ಮಾ.11ಕ್ಕೆ ಚಿತ್ರವು ತೆರೆ ಕಾಣಲಿದೆ ಎಂದು ಇನ್‌ಸ್ಟಾಗ್ರಾಂನಲ್ಲಿ ಪ್ರಭಾಸ್ ತಿಳಿಸಿದ್ದಾರೆ.

‘ಜೇಮ್ಸ್’ಗೆ ಶಿವರಾಜ್‌ಕುಮಾರ್ ಕಂಠದಾನ: ಚೇತನ್ ಕುಮಾರ್ ನಿರ್ದೇಶನದ, ನಟ ದಿವಂಗತ ಪುನೀತ್ ರಾಜ್‌ಕುಮಾರ್ ನಟನೆಯ ಕೊನೆಯ ಚಿತ್ರ ‘ಜೇಮ್ಸ್’, ಪುನೀತ್ ಜನ್ಮದಿನವಾದ ಮಾ.17ರಂದೇ ತೆರೆಕಾಣಲಿದೆ. ಪ್ಯಾನ್ ಇಂಡಿಯಾ ಸಿನಿಮಾವಾಗಿರುವ ‘ಜೇಮ್ಸ್’ನ ಚಿತ್ರೀಕರಣ ಈಗಾಗಲೇ ಪೂರ್ಣಗೊಂಡಿದ್ದು, ಪುನೀತ್ ಅವರ ಪಾತ್ರಕ್ಕೆ ನಟ ಶಿವರಾಜ್‌ಕುಮಾರ್ ಡಬ್ಬಿಂಗ್ ಮಾಡಿದ್ದಾರೆ.

ಮಾ.25ಕ್ಕೆ ‘ಆರ್.ಆರ್.ಆರ್’: ಎಸ್.ಎಸ್. ರಾಜಮೌಳಿ ನಿರ್ದೇಶನದ, ಜ್ಯೂನಿಯರ್ ಎನ್‌ಟಿಆರ್, ರಾಮ್‌ಚರಣ್ ತೇಜ, ಅಜಯ್ ದೇವ್‌ಗನ್, ಆಲಿಯಾ ಭಟ್ ನಟಿಸಿರುವ ಬಿಗ್‌ಬಜೆಟ್ ಪ್ಯಾನ್ ಇಂಡಿಯಾ ಸಿನಿಮಾ ಆರ್‌ಆರ್‌ಆರ್(ರೌದ್ರ-ರಣ-ರುಧಿರ) ಮಾ.25ಕ್ಕೆ ತೆರೆ ಕಾಣಲಿದೆ.

ಫೆ.24ಕ್ಕೆ ತೆರೆಗೆ ‘ಏಕ್ ಲವ್ ಯಾ’: ನಟ ಪ್ರೇಮ್ ಅವರು ನಿರ್ದೇಶಿಸಿರುವ, ರಾಣಾ, ರಚಿತಾ ರಾಮ್, ರೀಷ್ಮಾ ನಟನೆಯ ‘ಏಕ್ ಲವ್ ಯಾ’ ಸಿನಿಮಾ ಫೆ.24ಕ್ಕೆ ತೆರೆಕಾಣಲಿದೆ. ಕಳೆದ ಜ.21ರಂದು ಸಿನಿಮಾ ಬಿಡುಗಡೆ ದಿನಾಂಕ ನಿಗದಿಯಾಗಿತ್ತು. ❖

‘ಫೆ.24ಕ್ಕೆ ‘ವಿಕ್ರಾಂತ್ ರೋಣ’ ಬಿಡುಗಡೆ ಸಾಧ್ಯವಿಲ್ಲ’

ಫೆ.24ರಂದೇ ಬಿಡುಗಡೆಯಾಗಬೇಕಿದ್ದ ನಟ ಕಿಚ್ಚ ಸುದೀಪ್ ನಟನೆಯ, ಅನೂಪ್ ಭಂಡಾರಿ ನಿರ್ದೇಶನದ ಪ್ಯಾನ್ ಇಂಡಿಯಾ ಬಿಗ್ ಬಜೆಟ್ ಸಿನಿಮಾ ‘ವಿಕ್ರಾಂತ್ ರೋಣ’ ಯಾವಾಗ ತೆರೆಗೆ ಎನ್ನುವುದಕ್ಕೆ ನಿರ್ಮಾಪಕ ಜಾಕ್ ಮಂಜು ಉತ್ತರಿಸಿದ್ದಾರೆ. ‘ಸಿನಿಮಾ ಪುರವಣಿ’ಗೆ ಪ್ರತಿಕ್ರಿಯೆ ನೀಡಿರುವ ಜಾಕ್ ಮಂಜು ಅವರು, ‘ಸರ್ಕಾರ ತಕ್ಷಣದಲ್ಲೇ ಚಿತ್ರಮಂದಿರಗಳಲ್ಲಿ ಶೇ 100 ಆಸನ ಭರ್ತಿಗೆ ಅವಕಾಶ ನೀಡಿದರೂ, ಫೆ.24ಕ್ಕಂತೂ ‘ವಿಕ್ರಾಂತ್ ರೋಣ’ ತೆರೆಕಾಣುವುದಿಲ್ಲ. ಇದೊಂದು ಪ್ಯಾನ್ ಇಂಡಿಯಾ ಸಿನಿಮಾ. ಪ್ರಚಾರಕ್ಕೆ ಹೆಚ್ಚಿನ ಕಾಲಾವಕಾಶ ಬೇಕು. ಈಗ ದೊರಕಿರುವ ಸಮಯ ಸಾಕಾಗುವುದಿಲ್ಲ. ಶೀಘ್ರದಲ್ಲೇ ಹೊಸ ದಿನಾಂಕವನ್ನು ಘೋಷಿಸುತ್ತೇವೆ’ ಎಂದಿದ್ದಾರೆ.

ಮತ್ತೆರಡು ಸಿನಿಮಾಗೆ ಶಿವರಾಜ್‌ಕುಮಾರ್ ಸಹಿ

ಶಿವರಾಜ್‌ಕುಮಾರ್

ನಟ ಶಿವರಾಜ್‌ಕುಮಾರ್ ನಟನೆಯ 123ನೇ ಸಿನಿಮಾ ‘ಬೈರಾಗಿ’ ಬಿಡುಗಡೆಗೆ ಸಿದ್ಧವಾಗುತ್ತಿದ್ದರೆ, ಅವರ ನಟನೆಯ 124ನೇ ಚಿತ್ರ ‘ನೀ ಸಿಗೋವರೆಗೂ’ ಚಿತ್ರದ ಒಂದು ಹಂತದ ಚಿತ್ರೀಕರಣ ಪೂರ್ಣಗೊಂಡಿದೆ. ಶಿವರಾಜ್‌ಕುಮಾರ್ ಅವರ 125ನೇ ಚಿತ್ರ ‘ವೇದ’ದ ಚಿತ್ರೀಕರಣವೂ ಭರದಿಂದ ಸಾಗಿದೆ. ಈ ನಡುವೆ ಮತ್ತೆರಡು ಚಿತ್ರಗಳನ್ನು ಶಿವರಾಜ್‌ಕುಮಾರ್ ಒಪ್ಪಿದ್ದಾರೆ.

ಇತ್ತೀಚೆಗಷ್ಟೇ ಬಿಂದ್ಯಾ ಮೂವೀಸ್‌ನ ನೂತನ ಪ್ರೊಜೆಕ್ಟ್, ಆರ್. ಜಯರಾಂ(ಆರ್. ಜೈ) ನಿರ್ದೇಶನದ ಸಿನಿಮಾಗೆ ಶಿವರಾಜ್‌ಕುಮಾರ್ ಹಸಿರು ನಿಶಾನೆ ನೀಡಿದ್ದಾರೆ. ‘ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, 1970ರ ಕಾಲಘಟ್ಟದಲ್ಲಿ ನಡೆಯುವ ರೆಟ್ರೊ ಶೈಲಿಯ ಕಥೆಯನ್ನು ಹೊಂದಿದೆ. ಶೀಘ್ರದಲ್ಲೇ ಮೋಷನ್ ಪೋಸ್ಟರ್ ಬಿಡುಗಡೆ ಹಾಗೂ ಅದ್ದೂರಿ ಮುಹೂರ್ತ ಸಮಾರಂಭ ನಡೆಯಲಿದೆ’ ಎಂದು ನಿರ್ದೇಶಕ ಆರ್.ಜೈ ತಿಳಿಸಿದ್ದಾರೆ.

ಇದರ ಬೆನ್ನಲ್ಲೇ ಸಂದೇಶ್ ಪ್ರೊಡಕ್ಷನ್ಸ್‌ನ ನೂತನ ಚಿತ್ರಕ್ಕೂ ಶಿವರಾಜ್‌ಕುಮಾರ್ ಕಾಲ್‌ಶೀಟ್ ನೀಡಿದ್ದಾರೆ. ಸಂದೇಶ್ ನಾಗರಾಜ್ ಅರ್ಪಿಸುವ ಈ ಚಿತ್ರವನ್ನು ಸಂದೇಶ್ ಎನ್. ನಿರ್ಮಿಸುತ್ತಿದ್ದಾರೆ. ಶಿವರಾಜ್‌ಕುಮಾರ್ ನಟಿಸಿದ್ದ ‘ಸಮರ’ ಚಿತ್ರದ ಮುಖಾಂತರ ನಿರ್ದೇಶಕರಾಗಿದ್ದ ಚಿ. ಗುರುದತ್ ಅವರೇ ಈ ಚಿತ್ರವನ್ನೂ ನಿರ್ದೇಶಿಸುತ್ತಿದ್ದಾರೆ. ‘ಚಿತ್ರದ ತಾರಾಬಳಗ ಹಾಗೂ ತಾಂತ್ರಿಕವರ್ಗದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸದ್ಯದಲ್ಲೇ ನೀಡಲಾಗುವುದು’ ಎಂದು ನಿರ್ಮಾಪಕ ಸಂದೇಶ್ ನಾಗರಾಜ್ ತಿಳಿಸಿದ್ದಾರೆ. ❖

ಸುಭಾಷಿತ

ಸದ್ಗುಣಕ್ಕಿಂತ ದೊಡ್ಡ ಸಂಪತ್ತು ಇಲ್ಲ ಮತ್ತು ಅದನ್ನು ಮರೆತುಬಿಡುವುದಕ್ಕಿಂತ ದೊಡ್ಡ ನಷ್ಟ ಬೇರೊಂದಿಲ್ಲ.

–ತಿರುವಳ್ಳುವರ್

ಮುಂಗಡಪತ್ರದಲ್ಲಿ ನದಿಜೋಡಣೆ ಹುಸಿಜೀವ ಪಡೆದ ಹಳೇ ಯೋಜನೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇದೀಗ ಮಂಡಿಸಿದ ಬಜೆಟ್‌ನಲ್ಲಿ ನೀರಾವರಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ, ನಿಜ. ಅದರ ಭಾಗವಾಗಿ ನದಿ ಜೋಡಣೆಯನ್ನೂ ಪ್ರಸ್ತಾಪಿಸಿದ್ದಾರೆ. ನದಿ ಜೋಡಣೆ ಮಾಡಿದರೆ ಅದರಿಂದ ನೆರೆ-ಬರಗಳು ನೀಗಲಿವೆ; ಜಲಸಾರಿಗೆ, ಮೀನುಗಾರಿಕೆ, ಪ್ರವಾಸೋದ್ಯಮ ವಿಜೃಂಭಿಸಲಿವೆ ಎಂಬೆಲ್ಲ ಕಲ್ಪನೆಗಳಿವೆ ಹೌದು. ಆದರೆ ಅದಕ್ಕೆ ಬೇಕಾದ ಭಾರಿ ಹೂಡಿಕೆ, ಮುಳುಗಡೆ- ಮರುವಸತಿ ಸಮಸ್ಯೆ, ಪರಿಸರ ಸಮಸ್ಯೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನದಿನೀರಿನ ಹಂಚಿಕೆಯ ಕುರಿತ ಅನಂತ ವಿವಾದಗಳು ಈ ಯೋಜನೆಗಳ ಜಾರಿಗೆ ಅಡ್ಡಿಯಾಗಿವೆ. ದಕ್ಷಿಣ ಭಾರತದಲ್ಲಿ ನದಿಜೋಡಣೆಯ ಐದು ಪ್ರಸ್ತಾವಗಳು ಮೊನ್ನೆ ಮಂಡನೆಯಾಗಿದ್ದೇ ತಡ, ಕರ್ನಾಟಕ ಮತ್ತು ತೆಲಂಗಾಣ ಮುಖ್ಯಮಂತ್ರಿಗಳು ಆಗಲೇ ಅಪಸ್ವರ ಎತ್ತಿದ್ದಾರೆ. ಈ ಯಾವುವೂ ಹೊಸ ಯೋಜನೆಗಳೇನಲ್ಲ. ಮುಂಬೈಗೆ ನೀರೊದಗಿಸಬೇಕಿದ್ದ ದಮನ್‌ಗಂಗಾ- ಪಿಂಜಾಲ್ ಜೋಡಣೆಗೆ ಗುಜರಾತ್ ಇಪ್ಪತ್ತು ವರ್ಷಗಳ ಹಿಂದೆಯೇ ಆಕ್ಷೇಪ ಎತ್ತಿದೆ. ಬ್ರಿಟಿಷ್ ಎಂಜಿನಿಯರ್ ಸರ್ ಆರ್ಥರ್ ಕಾಟನ್ 1860ರಲ್ಲೇ ರೂಪಿಸಿದ್ದ ನದಿಜೋಡಣೆಯ ಕನಸಿಗೆ ಕಾಲಕಾಲಕ್ಕೆ ಹೊಸ ರೆಕ್ಕೆಪುಕ್ಕಗಳು ಮೊಳೆಯುತ್ತ ಉದುರುತ್ತಲೇ ಇವೆ. ನೀರಾವರಿ ತಜ್ಞ ಕೆ.ಎಲ್. ರಾವ್ ಅವರ ಗಂಗಾ-ಕಾವೇರಿ ಜೋಡಣೆ, ಆಮೇಲೆ ಕ್ಯಾಪ್ಟನ್ ದಸ್ತೂರ ಅವರ ‘ಗಾರ್ಲಾಂಡ್’ ಯೋಜನೆ, ನಂತರ 1980ರಲ್ಲಿ ಬಂದ ರಾಷ್ಟ್ರೀಯ ಸಮದರ್ಶಿ ಯೋಜನೆ ಎಲ್ಲವೂ ಭಾರತದ ಭೂಪಟದ ಮೇಲೆ ಗೆರೆಗಳಾದುವೇ ವಿನಾ ಒಂದೂ ಜಾರಿಗೆ ಬರಲಿಲ್ಲ.

ನಮಗೆ ಬೇಕಾಗಿರುವುದು ಜನಜೋಡಣೆಯ ಸಾಮಾಜಿಕ ಎಂಜಿನಿಯರಿಂಗ್ ಕೌಶಲವೇ ವಿನಾ ನದಿಜೋಡಣೆಯ ಬೃಹತ್ ಎಂಜಿನಿಯರಿಂಗ್ ಅಲ್ಲ

ಅಟಲ್ ಬಿಹಾರಿ ವಾಜಪೇಯಿಯವರ ಭವ್ಯ ಕನಸಿನ ಮೊದಲ ನದಿ ಜೋಡಣೆ ಎಂಬ ಹೆಗ್ಗಳಿಕೆಯಿಂದ 2002ರಲ್ಲೇ ಆರಂಭಗೊಂಡಿದ್ದ ಕೆನ್-ಬೆಟ್ವಾ ನದಿಗಳ ಜೋಡಣೆಯನ್ನು ಈಗ ನೋಡಿದರೆ ಅದು ಹೇಗಿರಬಾರದು ಎಂಬುದಕ್ಕೆ ಮಾದರಿಯಾದಂತಿದೆ. ಮಧ್ಯಪ್ರದೇಶದಲ್ಲಿ ಉಗಮವಾಗಿ ಯಮುನಾ ನದಿಗೆ ಸೇರುವ ಈ ಎರಡು ಕಿರುನದಿಗಳಲ್ಲಿ ಕೆನ್ ನದಿಯ ಹೆಚ್ಚುವರಿ ನೀರನ್ನು 222 ಕಿ.ಮೀ. ಕಾಲುವೆಯ ಮೂಲಕ ಬೆಟ್ವಾಕ್ಕೆ ಸೇರಿಸಿ ಉತ್ತರ ಪ್ರದೇಶಕ್ಕೆ ನೀರು ಹರಿಸಲೆಂದು ಪನ್ನಾ ಹುಲಿಧಾಮದ ಮೂಲಕವೇ ಎಂಜಿನಿಯರ್‌ಗಳು ಗೆರೆ ಎಳೆದರು. ನೀರಿನ ಲಭ್ಯತೆಯನ್ನೂ ಫಲಾನುಭವಿ ಕ್ಷೇತ್ರವನ್ನೂ ಉತ್ಪ್ರೇಕ್ಷೆ ಮಾಡಿ ತೋರಿಸಿದರು. ಇಂಥ ಅವೈಜ್ಞಾನಿಕ ಸಮೀಕ್ಷೆಯನ್ನು ಆಧರಿಸಿದ ನದಿಜೋಡಣೆ ಕೂಡದೆಂದು ಸುಪ್ರೀಂ ಕೋರ್ಟ್ ನೇಮಕ ಮಾಡಿದ ತಜ್ಞರ ಸಮಿತಿಯೇ ಶಿಫಾರಸು ಮಾಡಿದೆ. ಇಪ್ಪತ್ತು ಲಕ್ಷ ಮರಗಳನ್ನು ಮುಳುಗಿಸಲು ಹಸಿರು ಪೀಠ ಅನುಮತಿಯನ್ನೂ ಕೊಟ್ಟಿಲ್ಲ. ರಾಷ್ಟ್ರೀಯ ವನ್ಯಜೀವಿ ಮಂಡಳಿ ನೀಡಿದ ಹಸಿರು ನಿಶಾನೆಯೂ ಅಸಿಂಧುವೆಂದು ಸುಪ್ರೀಂ ಕೋರ್ಟ್‌ನಲ್ಲಿ ಬೇರೊಂದು ಪ್ರಕರಣ ದಾಖಲಾಗಿದೆ. ಇಂಥ ಸ್ಥಿತಿಯಲ್ಲಿ ಈ ಯೋಜನೆಗೆ ಸದ್ಯಕ್ಕೆ ಹಣ ಹೂಡಲು ಸಾಧ್ಯವೇ ಇಲ್ಲ ಎಂಬುದು ಗೊತ್ತಿದ್ದೂ ಸರ್ಕಾರ ಅದಕ್ಕೆಂದು ₹ 44 ಸಾವಿರ ಕೋಟಿಗಳ ಬೃಹತ್ ಹೂಡಿಕೆಯ ಕನಸನ್ನು ಝಳಪಿಸಿ, ಕಳೆದ ವರ್ಷದ ಪರಿಷ್ಕೃತ ಅಂದಾಜು ಮೊತ್ತ ₹ 4,300 ಕೋಟಿ ಜತೆ ಈ ವರ್ಷ ₹ 1,400 ಕೋಟಿ ತೆಗೆದಿಟ್ಟಿದ್ದೇವೆಂದು ಹೇಳಿರುವುದು, ಉತ್ತರಪ್ರದೇಶದ ಮತದಾರರ ಓಲೈಕೆಗಷ್ಟೇ ವಿನಾ ಮತ್ತೇನಿಲ್ಲ.

ನಮ್ಮ ದೇಶ ಪ್ರತಿವರ್ಷವೂ ಎದುರಿಸುತ್ತಿರುವ ಮಹಾಪೂರ-ಬರಗಾಲಗಳನ್ನು ನಿಭಾಯಿಸಲೆಂದೇ ಬೃಹತ್ ಎಂಜಿನಿಯರಿಂಗ್ ಯೋಜನೆಗಳು ರೂಪುಗೊಳ್ಳುತ್ತಿವೆ. ಭಾರಿ ಹೂಡಿಕೆ ಮತ್ತು ಭಾರಿ ಸಮಯವನ್ನು ಬೇಡುವ ಇಂಥ ದೊಡ್ಡ ಯೋಜನೆಗಳು ಪರಿಸರದ ಮೇಲೆ ಭಾರಿ ದುಷ್ಪರಿಣಾಮವನ್ನೂ ಬೀರುತ್ತವೆ. ಇದುವರೆಗೆ ನದಿಗಳಿಗೆ ಕಟ್ಟಲಾದ ಎಲ್ಲ ದೊಡ್ಡ ಅಣೆಕಟ್ಟೆಗಳೂ ಅತಿ ಹೂಳಿನಿಂದಾಗಿ ಇನ್ನು 50-100 ವರ್ಷಗಳಲ್ಲಿ ಬೆತ್ತಲೆ ಮೈದಾನಗಳಾಗಲಿವೆ. ಅಲ್ಲಿ ಹೊಸದನ್ನು ನಿರ್ಮಿಸುವ ಹಾಗಿಲ್ಲ; ಹಳತನ್ನು ವಿಸರ್ಜಿಸುವ ಹಾಗೂ ಇಲ್ಲ. ಮುಂದಿನ ಪೀಳಿಗೆಗೆ ಅಂಥ ದುರಂತಗಳನ್ನು ಬಿಟ್ಟು ಹೋಗುವ ಬದಲು, ಬದಲೀ ಸುಸ್ಥಿರ ವ್ಯವಸ್ಥೆಗೆ ಆದ್ಯತೆ ನೀಡಬೇಕಾಗಿದೆ. ಮಳೆ ಬೀಳುವಲ್ಲೇ ನೀರನ್ನು ಹಿಡಿದಿಡುವ ಚಿಕ್ಕ ಚಿಕ್ಕ ಕೆರೆಕಟ್ಟೆಗಳನ್ನು, ಬಾಂದಾರಗಳನ್ನು ನಿರ್ಮಿಸಿ ಕಾಲಕಾಲಕ್ಕೆ ಹೂಳೆತ್ತಿ ಅವನ್ನು ಬಳಸುತ್ತಿದ್ದರೆ ನೀರಿನ ಬರ ನೀಗಬಹುದು, ಮಹಾಪೂರದ ಸಮಸ್ಯೆಯೂ ಇರುವುದಿಲ್ಲ. ನಿರಾಶ್ರಿತರ ಸಮಸ್ಯೆ ಇಲ್ಲ. ವನ್ಯಜೀವಿಗಳಿಗೆ ತೊಂದರೆಯಿಲ್ಲ. ಅಂಥ ಲಕ್ಷೋಪಲಕ್ಷ ಕಿರುಯೋಜನೆಗಳು ಪಂಚಾಯತ್ ಮಟ್ಟದಲ್ಲಿ ಜಾರಿಗೆ ಬಂದರೆ ಅವು ಪ್ರವಾಹವನ್ನು ತಡೆದು, ಬರದ ಬವಣೆಯನ್ನು ನೀಗಿಸಿ, ಸ್ಥಳೀಯರಿಗೆ ಉದ್ಯೋಗವನ್ನೂ ನೀಡುತ್ತವೆ. ಹಸಿರುಕ್ಕಿಸುತ್ತವೆ. ಇಂಥ ಸುಸ್ಥಿರ ಮಾದರಿಗಳನ್ನು ರಾಜಸ್ಥಾನದಲ್ಲಿ ರಾಜೇಂದ್ರ ಸಿಂಗ್, ರಾಳೇಗಣಸಿದ್ಧಿಯಲ್ಲಿ ಅಣ್ಣಾ ಹಜಾರೆ, ಕಾಕಡ್‌ಧಾರಾದಲ್ಲಿ ಅಮೀರ್ ಖಾನ್ ರೂಪಿಸಿ ತೋರಿಸಿದ್ದಾರೆ. ಇಲ್ಲಿ ಬೇಕಾಗಿರುವುದು ಜನಜೋಡಣೆಯ ಸಾಮಾಜಿಕ ಎಂಜಿನಿಯರಿಂಗ್ ಕೌಶಲವೇ ಹೊರತು ಗುತ್ತಿಗೆದಾರರ ಬಕ್ಕಣ ತುಂಬಿಸುವ ನದಿಜೋಡಣೆಯ ಬೃಹತ್ ಎಂಜಿನಿಯರಿಂಗ್ ಅಲ್ಲ. ಆದರೂ ಅದೇ ಹಳೇ ಮಾದರಿಗೆ ಹಣವನ್ನು ಮೀಸಲಿಟ್ಟರೆ ಅದು ಕೋರ್ಟಿನ ಕಟ್ಟೆಯಲ್ಲಿರುವ ವಕೀಲರ ಬಾಯಲ್ಲಿ ನೀರೂರಿಸೀತೇ ವಿನಾ ಬಾಯಾರಿದವರ ಕಣ್ಣೀರನ್ನು ಖಂಡಿತ ಒರೆಸಲಾರದು.

ದಿನದ ಟ್ವೀಟ್

ಅದಲ್ಲವೇ ಉತ್ತಮ ನಡೆ?

ಅಟಲ್ ಬಿಹಾರಿ ವಾಜಪೇಯಿ ಅವರಂತಹ ಯುವಸಂಸದರು, ಜೆಪಿ ಮತ್ತು ಲೋಹಿಯಾ ಅವರಂತಹ ದಿಗ್ಗಜರು ನೆಹರೂ ಅವರ ಮೇಲೆ ಕಾಲಕಾಲಕ್ಕೆ ವಾಗ್ದಾಳಿ ನಡೆಸುತ್ತಿದ್ದರು. ನೆಹರೂ ಅವರು ಯಾವಾಗಲೂ ಸಂಸತ್ತಿನಲ್ಲಿ ಹಾಜರಿದ್ದು ಟೀಕೆಗಳನ್ನು ಆಲಿಸುತ್ತಿದ್ದರು. ಅದನ್ನೇ ಪ್ರಜಾಸತ್ತಾತ್ಮಕ ಸಂಸದೀಯ ನಡೆ ಎನ್ನುವುದು. ರಾಹುಲ್ ಗಾಂಧಿ ಅವರು ಬುಧವಾರ ಸಂಸತ್ತಿನಲ್ಲಿ ಮಾತನಾಡುವಾಗ ಪ್ರಧಾನಿ ಮೋದಿ ಹಾಜರಿದ್ದರೇ?

ಅಶುತೋಷ್ ವಾರ್ಷ್ನಿ, ಪ್ರಾಧ್ಯಾಪಕ

ಕಿಡಿನುಡಿ

ಸಂವಿಧಾನ ಎಂಬುದು ಸಿಹಿನೀರಿನ ಸಮುದ್ರ ಇದ್ದಂತೆ. ಅಲ್ಲಿ ಜೀವರಾಶಿಗಳು ಬದುಕಲು ಬೇಕಾದ ಎಲ್ಲ ಅವಕಾಶಗಳನ್ನು ಸೃಷ್ಟಿಸಲಾಗಿದೆ. ಇಂತಹ ಸಮುದ್ರದ ಸಹಾಯದಿಂದ ಎಲ್ಲರನ್ನೂ ಬದುಕಿಸಬೇಕಾದ ಜವಾಬ್ದಾರಿ ಹೊತ್ತಿರುವ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರಂತಹ ಜನಪ್ರತಿನಿಧಿಗಳು, ಅಂತಹ ಸಮುದ್ರವನ್ನೇ ಬದಲಿಸಬೇಕು ಎನ್ನುವುದು ಮೂರ್ಖತನದ ಸಂಕೇತವಾಗಿದೆ.

ಡಾ. ಎಚ್.ಸಿ.ಮಹದೇವಪ್ಪ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 4-2-1997

• ಬಿಡದಿ ಬಳಿ ಪೊಲೀಸರ ಗುಂಡಿಗೆ ಇಬ್ಬರು ಬಲಿ

ಬೆಂಗಳೂರು, ಫೆ. 3– ಮೈಸೂರು–ಬೆಂಗಳೂರು ರಸ್ತೆಯಲ್ಲಿ ಇಲ್ಲಿಂದ 26 ಕಿ.ಮೀ. ದೂರದ ಬಿಡದಿ ಬಳಿ ಹೆಜ್ಜಾಲದಲ್ಲಿ ಇಂದು ಬೆಳಿಗ್ಗೆ ರಸ್ತೆತಡೆ ನಡೆಸಿ ಕಲ್ಲು ತೂರಾಟ, ಅಗ್ನಿಸ್ಪರ್ಶ ಮತ್ತು ಹಿಂಸಾಚಾರಕ್ಕಿಳಿದ ಉದ್ರಿಕ್ತ ಗುಂಪನ್ನು ಚದುರಿಸಲು ಪೊಲೀಸರು ಗೋಲಿಬಾರ್ ಮಾಡಿದಾಗ ಮಹಿಳೆಯೊಬ್ಬರು ಸೇರಿ ಇಬ್ಬರು ಮೃತಪಟ್ಟರು. ಗುಂಡೇಟಿನಲ್ಲಿ ಗಾಯಗೊಂಡ 6 ಜನರನ್ನು ವಿಕ್ಟೋರಿಯಾ ಮತ್ತು ಎಸ್‌ಡಿಎಸ್ ಸ್ಯಾನಿಟೋರಿಯಂಗೆ ಸೇರಿಸಲಾಗಿದೆ.

ಈ ಮಧ್ಯೆ ಹೆಜ್ಜಾಲ ಮತ್ತು ಆಸುಪಾಸಿನ ಗ್ರಾಮಗಳಲ್ಲಿ 144ನೇ ಕಲಂ ಅನ್ವಯ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ಕಾರ್ಮಿಕರು ಹಾಗೂ ಮಹಿಳೆ, ಮಕ್ಕಳೆನ್ನದೆ ಸುತ್ತಲಿನ ಗ್ರಾಮಸ್ಥರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ ಎಂದು ಪ್ರತಿಭಟಿಸಿ ನಾಳೆ ರಾಮನಗರ ಬಂದ್‌ಗೆ ಕಾಂಗ್ರೆಸ್ ಕರೆ ನೀಡಿದೆ.

ಇಂದು ಘಟನೆ ನಡೆದ ಪ್ರದೇಶ ರಾಮನಗರ ತಾಲ್ಲೂಕಿನ ವ್ಯಾಪ್ತಿಗೆ ಸೇರಿದ್ದು, ಇಲ್ಲಿ ಫೆ. 8ರಂದು ವಿಧಾನಸಭೆಗೆ ಉಪಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಇಂದಿನ ಘಟನೆ ರಾಜಕೀಯ ಪರಿಣಾಮ ಬೀರುವ ಎಲ್ಲ ಸಾಧ್ಯತೆಗಳಿವೆ.

• ಆಲಮಟ್ಟಿ: ಕಾಮಗಾರಿ ಸ್ಥಗಿತಕ್ಕೆ ಆದೇಶಿಸಲು ಕೋರ್ಟ್ ನಿರಾಕರಣೆ

ನವದೆಹಲಿ, ಫೆ. 3 (ಯುಎನ್‌ಐ)– ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟುತ್ತಿರುವ ಆಲಮಟ್ಟಿ ಅಣೆಕಟ್ಟು ಕಾಮಗಾರಿಯನ್ನು ಸ್ಥಗಿತಗೊಳಿಸುವಂತೆ ಕರ್ನಾಟಕ ಸರ್ಕಾರಕ್ಕೆ ಆದೇಶ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 4-2-1972

• ಸಂಸ್ಥಾ ಕಾಂಗ್ರೆಸ್ಸಿಗೆ ಹೊಸ ಹುಮ್ಮಸ್ಸು

ಬೆಂಗಳೂರು, ಫೆ. 3– ಮುಂಬರುವ ವಿಧಾನಸಭೆ ಚುನಾವಣೆಗೆ ಆಡಳಿತ ಕಾಂಗ್ರೆಸ್ಸಿನ ಸ್ಪರ್ಧಿಗಳ ಪಟ್ಟಿ ಪ್ರಕಟವಾದ ನಂತರ ಸಂಸ್ಥಾ ಕಾಂಗ್ರೆಸ್ ವಲಯದಲ್ಲಿ ಉತ್ಸಾಹ ಪುಟಗೊಂಡಿದ್ದು, ಕ್ಷೇತ್ರಗಳ ಪುನರ್ ಸಮೀಕ್ಷೆ ಕಾರ್ಯವನ್ನು ಕೈಗೊಂಡಿದೆ.

ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಯ ದೃಷ್ಟಿಯಲ್ಲಿ ಮತ್ತೊಮ್ಮೆ ಪರಿಸ್ಥಿತಿ ಪರಿಶೀಲಿಸಿ ಅಭ್ಯರ್ಥಿಗಳ ಬಗ್ಗೆ ಶಿಫಾರಸು ಮಾಡಬೇಕೆಂದು ಜಿಲ್ಲಾ ಸಮಿತಿ ಅಧ್ಯಕ್ಷರುಗಳಿಗೆ ಸೂಚನೆ ನೀಡಲಾಗಿದೆ.

• ಪಾಕ್‌ಗೆ ಅಮೆರಿಕದ ಶಸ್ತ್ರಾಸ್ತ್ರ ಸರಬರಾಜು ಪುನರಾರಂಭ ಸಂಭವ

ವಾಷಿಂಗ್ಟನ್, ಫೆ. 3– ನಿಕ್ಸನ್ ಆಡಳಿತವು ಪಾಕಿಸ್ತಾನಕ್ಕೆ ಮಿಲಿಟರಿ ನೆರವು ಪುನರಾರಂಭಿಸಬಹುದು. ಬುಧವಾರ ನಿರಾಶ್ರಿತರ ಸಮಸ್ಯೆ ಕುರಿತ ಅಮೆರಿಕ ಸೆನೆಟ್ ಉಪ ಸಮಿತಿ ಸಭೆಯಲ್ಲಿ ನಡೆದ ಚರ್ಚೆಯಿಂದ ಈ ಅಭಿಪ್ರಾಯ ಮೂಡಿದೆ.

ಇಂತಹ ಸ್ಥಾವರಗಳ ನಿರ್ಮಾಣ ಯೋಜನೆಯ ಹಿನ್ನಡೆಗೆ ಕಾರಣ ಹಲವು

ಸಾಗರದಲ್ಲಿ ವಾಯುವಿದ್ಯುತ್ ಸ್ಥಾವರ

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಸದ್ಯದಲ್ಲಿ ನಮ್ಮ ದೇಶದ ಒಟ್ಟು ವಿದ್ಯುತ್ತಿನ ಬೇಡಿಕೆಯ ಶೇ38ರಷ್ಟು ಭಾಗ, ಅಂದರೆ 136 ಗಿಗಾವಾಟ್, ನವೀಕರಿಸಬಹುದಾದ ಶಕ್ತಿಯ ಮೂಲಗಳಿಂದ ಬರುತ್ತಿದೆ. ಇದನ್ನು 2030ರ ವೇಳೆಗೆ ಶೇ 50ಕ್ಕೆ ಏರಿಸುವ ವಿಶ್ವಾಸವನ್ನು ಭಾರತದ ಪ್ರಧಾನಿ ಕಳೆದ ನವೆಂಬರ್‌ನಲ್ಲಿ ವಾಯುಗುಣ ಬದಲಾವಣೆಗೆ ಸಂಬಂಧಿಸಿದ ಗ್ಲಾಸ್ಗೊ ಶೃಂಗಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಗರದಲ್ಲಿ ವಾಯುವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ಯೋಜನೆಗೆ ಅತಿ ಹೆಚ್ಚಿನ ಮಹತ್ವ ಬಂದಿದೆ.

ಭೂಮಿಯ ಮೇಲಿನ ಗಾಳಿಗಿರಣಿಗಳ ಜೊತೆಗೇ ಸಾಗರದಲ್ಲಿ ವಾಯುವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವ ಯೋಚನೆ ಪ್ರಾರಂಭವಾದದ್ದು 2010ರ ದಶಕದಲ್ಲಿ. ಆಧುನಿಕ ಗಾಳಿಗಿರಣಿ ಟರ್ಬೈನುಗಳು ಸಾಂಪ್ರದಾಯಿಕ ಟರ್ಬೈನ್‌ಗಳಿಗಿಂತ ಹತ್ತು ಪಟ್ಟು ಹೆಚ್ಚು ವಿದ್ಯುತ್ ಉತ್ಪಾದಿಸಲು ಪ್ರಾರಂಭವಾದಾಗ ಸಹಜವಾಗಿಯೇ ಗಮನ ಅತ್ತ ಹರಿಯಿತು. ಒಂದೆರಡು ಗಾಳಿಗಿರಣಿಗಳನ್ನು ಸ್ಥಾಪಿಸುತ್ತಿದ್ದ ಪ್ರವೃತ್ತಿ ಮರೆಯಾಗಿ ನೂರಾರು ಗಾಳಿಯಂತ್ರಗಳ ವಾಯುಶಕ್ತಿ ಫಾರ್ಮ್‌ಗಳಿಗೆ ಆದ್ಯತೆ ದೊರೆಯಿತು. ಈ ರೀತಿಯ ವಾಯುಶಕ್ತಿ ಫಾರ್ಮ್‌ಗಳಿಗೆ ನೂರಾರು ಚ.ಕಿ.ಮೀ. ಪ್ರದೇಶಗಳಷ್ಟು ವಿಶಾಲವಾದ, ಅಡೆತಡೆಗಳಿಲ್ಲದ ಬಯಲು ಪ್ರದೇಶ ಬೇಕು. ವಿವಿಧ ಉದ್ದೇಶಗಳಿಗೆ ಭೂಮಿಯ ಮೇಲಿನ ಒತ್ತಡ ಹೆಚ್ಚುತ್ತಿದ್ದ ಸನ್ನಿವೇಶದಲ್ಲಿ ಅಂತಹ ವಿಶಾಲವಾದ ಪ್ರದೇಶಗಳು ದುರ್ಲಭವಾಗಲು ಪ್ರಾರಂಭವಾದಾಗ, ಭಾರತವೂ ಸೇರಿ ಅನೇಕ ದೇಶಗಳ ಗಮನ ವೇಗವಾದ ಗಾಳಿ, ಅಡೆತಡೆಗಳಿಲ್ಲದ ಮುಕ್ತವಾದ ಪ್ರದೇಶವನ್ನು ಒದಗಿಸುವ ಸಾಗರಗಳತ್ತ ಹರಿಯಿತು. ಸಾಗರದಲ್ಲಿ ಗಾಳಿಯ ವೇಗ ಹೆಚ್ಚು. ಗಾಳಿಯ ವೇಗ ಹೆಚ್ಚಿದಷ್ಟೂ ಉತ್ಪಾದಿಸುವ ವಿದ್ಯುತ್ತಿನ ಪ್ರಮಾಣವೂ ಏರುತ್ತದೆ. ನೆಲದ ಮೇಲಿನ ಗಾಳಿಯ ವೇಗಕ್ಕೆ ಹೋಲಿಸಿದರೆ ಸಾಗರದ ಮೇಲಿನ ಗಾಳಿಯ ವೇಗ ಹೆಚ್ಚು ಸ್ಥಿರ. ಹೀಗಾಗಿ ವಿದ್ಯುತ್ ಉತ್ಪಾದನೆಯಲ್ಲಿ ಏರುಪೇರುಗಳು ಬಹಳ ಕಡಿಮೆ.

ಭಾರತ ಸರ್ಕಾರ 2015ರ ಅಕ್ಟೋಬರ್‌ನಲ್ಲಿ ‘ನ್ಯಾಷನಲ್ ಆಫ್ ಶೋರ್ ವಿಂಡ್ ಎನರ್ಜಿ ನೀತಿ’ಯನ್ನು ಪ್ರಕಟಿಸಿತು. ಈ ನೀತಿಯಂತೆ, ದೇಶದ 7,600 ಕಿ.ಮೀ. ಉದ್ದದ ಕರಾವಳಿಯಿಂದ ಸಾಗರದ ವಿವಿಧ ದೂರಗಳ ಪ್ರದೇಶದಲ್ಲಿ ಗಾಳಿಗಿರಣಿಗಳನ್ನು ಸ್ಥಾಪಿಸಿ, 2022ರ ವೇಳೆಗೆ 5 ಗಿಗಾವಾಟ್ ಮತ್ತು 2030ರ ವೇಳೆಗೆ 30 ಗಿಗಾವಾಟ್ ವಿದ್ಯುತ್ತನ್ನು ಉತ್ಪಾದಿಸುವ ಗುರಿಯನ್ನು ನಿಗದಿಪಡಿಸಿತು.

ಕೇಂದ್ರ ಸರ್ಕಾರದ ಹೊಸ ಮತ್ತು ನವೀಕರಿಸಬಹುದಾದ ಶಕ್ತಿ ಸಚಿವಾಲಯದ ಅಂಗಸಂಸ್ಥೆಯಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವಿಂಡ್ ಎನರ್ಜಿ, ಗುಜರಾತ್ ಮತ್ತು ತಮಿಳುನಾಡು ರಾಜ್ಯಗಳ ಕರಾವಳಿಯ ಆಚೆ ಒಟ್ಟು 70 ಗಿಗಾವಾಟ್ ಉತ್ಪಾದನಾ ಸಾಮರ್ಥ್ಯದ ಪ್ರದೇಶಗಳನ್ನು ಗುರುತಿಸಿತು. ಅಂತರರಾಷ್ಟ್ರೀಯ ಸ್ಪರ್ಧಾತ್ಮಕ ಹರಾಜಿನ ಮೂಲಕ, ಕರಾವಳಿಯಿಂದ 200 ಕಿ.ಮೀ.ಗಳ ಒಳಗೆ 100ರಿಂದ 500 ಚ.ಕಿ.ಮೀ. ವಿಸ್ತೀರ್ಣದ ಬ್ಲಾಕುಗಳನ್ನು ಖಾಸಗಿ ವಿದ್ಯುತ್ ಉತ್ಪಾದನಾ ಸಂಸ್ಥೆಗಳಿಗೆ 35 ವರ್ಷಗಳ ಅವಧಿಗೆ ಗುತ್ತಿಗೆಯ ಮೇಲೆ ನೀಡುವ ಪ್ರಸ್ತಾಪ ಈ ನೀತಿಯಲ್ಲಿದೆ.

ಇಂತಹ ಗುತ್ತಿಗೆಯನ್ನು ಪಡೆದ ಸಂಸ್ಥೆಗಳು ಮೊದಲ 5 ವರ್ಷಗಳ ಕಾಲ ಸಾಗರತಳದ ಭೂವೈಜ್ಞಾನಿಕ, ಭೂತಾಂತ್ರಿಕ ಸರ್ವೆಗಳನ್ನು ನಡೆಸಿ, ಮೂಲ ಸೌಕರ್ಯಗಳನ್ನು ನಿರ್ಮಿಸಿಕೊಳ್ಳಬಹುದು. ಸಾಗರದಲ್ಲಿನ ವಾಯುವಿದ್ಯುತ್ ಕೇಂದ್ರಗಳಿಂದ ವಿದ್ಯುತ್ತನ್ನು ಸಾಗಿಸಲು ಸಾಗರ ತಳದಲ್ಲಿ ಕೇಬಲ್‌ಗಳನ್ನು ಎಳೆಯಬಹುದು. ಆದರೆ ಸಾಗರತಳದಲ್ಲಿ ಯಾವುದೇ ರೀತಿಯ ಗಣಿಗಾರಿಕೆಗೆ, ಇತರ ಸಂಪನ್ಮೂಲಗಳ ಬಳಕೆಗೆ ಅವಕಾಶವಿಲ್ಲ. ಅಲ್ಲಿನ ಜೀವಿಪ್ರಭೇದಗಳಿಗೆ ಯಾವುದೇ ರೀತಿಯ ಹಾನಿಯಾಗುವಂತಿಲ್ಲ. ಈ ಕೆಲಸಗಳು ಮುಗಿದ ನಂತರ ಮುಂದಿನ 30 ವರ್ಷಗಳವರೆಗೆ ವಿದ್ಯುತ್ ಉತ್ಪಾದಿಸಬಹುದು.

2018ರ ಏಪ್ರಿಲ್‌ನಲ್ಲಿ ಭಾರತ ಸರ್ಕಾರ ಈ ಕ್ಷೇತ್ರದಲ್ಲಿ ಆಸಕ್ತಿಯಿರುವ ರಾಷ್ಟ್ರೀಯ, ಅಂತರರಾಷ್ಟ್ರೀಯ ಕಂಪನಿಗಳಿಂದ ಆಸಕ್ತಿ ಪ್ರಕಟಣೆಯ ಅರ್ಜಿಗಳನ್ನು ಆಹ್ವಾನಿಸಿತು. ಈ ಆಹ್ವಾನಕ್ಕೆ 35 ಕಂಪನಿಗಳು ಪ್ರತಿಕ್ರಿಯಿಸಿದರೂ ಅಲ್ಲಿಂದ ಮುಂದೆ ಯಾವ ಮಹತ್ವದ ಬೆಳವಣಿಗೆಗಳೂ ಆಗಿಲ್ಲ. ಕಳೆದ ಆರು ವರ್ಷಗಳಲ್ಲಿ ಒಂದೇ ಒಂದು ವಾಯುವಿದ್ಯುತ್ ಸ್ಥಾವರವೂ ಸಾಗರದಲ್ಲಿ ನಿರ್ಮಾಣವಾಗಿಲ್ಲ. ಈ ಪರಿಸ್ಥಿತಿಗೆ ಕಾರಣಗಳು ಹಲವಾರು.

ಭೂಮಿಯ ಮೇಲಿನ ಪ್ರತಿಯೊಂದು ಗಾಳಿಯಂತ್ರ 2 ಮೆಗಾವಾಟ್ ವಿದ್ಯುತ್ ಉತ್ಪಾದಿಸಿದರೆ, ಸಾಗರದಲ್ಲಿನ ಗಾಳಿಯಂತ್ರ 6 ಮೆಗಾವಾಟ್ ಉತ್ಪಾದಿಸುತ್ತದೆ. ಆದ್ದರಿಂದ ಸಾಗರದ ಗಾಳಿಯಂತ್ರ, ಟರ್ಬೈನ್‌ಗಳು, ತಿರುಗುವ ಅಲಗುಗಳು ದೊಡ್ಡವು. ಇಂತಹ ಬೃಹದಾಕಾರದ ಸ್ತಂಭಗಳು, ಟರ್ಬೈನುಗಳನ್ನು ಸಾಗರತಳದ ನೆಲದ ಮೇಲೆ ಕೂಡಿಸಬೇಕು. 60 ಮೀಟರ್‌ಗಳಿಗಿಂತ ಹೆಚ್ಚಿನ ಆಳದಲ್ಲಿ ಇದು ಸಾಧ್ಯವಿಲ್ಲ. ಹೀಗಾಗಿ ಆಳ ಕಡಿಮೆಯಾಗಿದ್ದು, ಏಕಪ್ರಕಾರವಾಗಿ ಬೀಸುವ ಗಾಳಿಯಿರುವ, ಸಾಗರ ತೀರದಿಂದ ಬಹಳ ದೂರವಿರದ ತಾಣಗಳಲ್ಲಿ ಗಾಳಿಯಂತ್ರಗಳನ್ನು ಸ್ಥಾಪಿಸಬೇಕು. ಅಲ್ಲಿಂದ ಕೇಬಲ್‌ಗಳ ಮೂಲಕ ತೀರಕ್ಕೆ ತಂದು ಸರಬರಾಜಿನ ಗ್ರಿಡ್‌ಗೆ ಸೇರಿಸಬೇಕು. ಇವುಗಳೊಡನೆ ಸಾಗರದಲ್ಲಿ ವಾಯುಶಕ್ತಿ ಫಾರ್ಮ್‌ಗಳು ಆರ್ದ್ರತೆ, ಲವಣಯುಕ್ತ ನೀರು ಮತ್ತು ಬೃಹದಾಕಾರದ ಅಲೆಗಳ ಹೊಡೆತದ ಸಮಸ್ಯೆಯನ್ನು ಎದುರಿಸಬೇಕು. ಯೋಜನೆಯ ಒಟ್ಟು ವೆಚ್ಚದ ಮೂರನೆಯ ಒಂದು ಭಾಗ ಟರ್ಬೈನ್‌ಗೆ ತಗುಲಿದರೆ, ಉಳಿದ ಭಾಗವು ರಚನೆಯ ನಿರ್ಮಾಣ, ದುರಸ್ತಿ, ನಿರ್ವಹಣೆ, ವಿದ್ಯುತ್ ಸಾಗಣೆ ಮುಂತಾದವುಗಳಿಗೆ ಬೇಕು.

ಸಾಗರ ತೀರದಿಂದ ಸ್ಥಾವರದ ದೂರ ಹೆಚ್ಚಿದಷ್ಟೂ ಎಲ್ಲ ವೆಚ್ಚಗಳೂ ಏರುತ್ತವೆ. ಶಕ್ತಿ ಉತ್ಪಾದನೆಗೆ ಸಂಬಂಧಿಸಿದ ಲೋಕಸಭೆಯ 17ನೆಯ ಕಾಯಂ ಸಮಿತಿಯು ಲೋಕಸಭೆಗೆ ನೀಡಿರುವ ಮಾಹಿತಿಯಂತೆ, ಸಾಗರದ ವಾಯುವಿದ್ಯುತ್, ಭೂಮಿಯ ಮೇಲಿನ ವಾಯುವಿದ್ಯುತ್‌ಗಿಂತ ಮೂರುಪಾಲು ದುಬಾರಿಯಾಗಲಿದೆ. ಸಾಗರದಿಂದ ಕೇಬಲ್‌ಗಳ ಮೂಲಕ ಬಂದ ವಿದ್ಯುತ್ತನ್ನು ಕರಾವಳಿಯಲ್ಲಿ ವಿದ್ಯುತ್ ವಿತರಣಾ ಸಂಸ್ಥೆಗಳು ಕೊಂಡು ಬಳಕೆದಾರರಿಗೆ ವಿತರಿಸಬೇಕು. ಆದರೆ ನಮ್ಮ ದೇಶದ ಎಲ್ಲ ವಿದ್ಯುತ್ ವಿತರಣಾ ಸಂಸ್ಥೆಗಳು ಸದಾಕಾಲ ನಷ್ಟದಲ್ಲಿ ಇರುವಂತಹವು. ಸರ್ಕಾರದಿಂದ ವಿಶೇಷ ನೆರವು ದೊರೆತ ವಿನಾ ಅವುಗಳಿಂದ ಈ ಕೆಲಸ ಸಾಧ್ಯವಿಲ್ಲ.

ಸಾಗರದಲ್ಲಿ ವಾಯುವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಆಸಕ್ತಿ ವ್ಯಕ್ತಪಡಿಸಿರುವ ಸಂಸ್ಥೆಗಳಿಗೆ ಈ ಎಲ್ಲ ಸಮಸ್ಯೆಗಳ ಪರಿಚಯವಿದೆ. ಅವು ಸರ್ಕಾರದ ಸ್ಪಷ್ಟನೆ, ಭರವಸೆಗಳಿಗೆ ಕಾಯುತ್ತಿವೆ. ಉದಾಹರಣೆಗೆ, ಸಾಗರದಲ್ಲಿ ಸ್ಥಾಪಿಸಬೇಕಾದ ಬೃಹತ್ ಟರ್ಬೈನ್‌ಗಳನ್ನು ಪ್ರಾರಂಭದಲ್ಲಿ ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿದೆ. ಆದರೆ ವಿಪರೀತ ಕರಭಾರದಿಂದ ಇದು ಲಾಭದಾಯಕವಲ್ಲ. ಬೃಹದಾಕಾರದ ಟರ್ಬೈನ್‌ಗಳು ಹಾಗೂ ಅಲಗುಗಳನ್ನು ಸಾಗಿಸಲು ನಮ್ಮ ರಸ್ತೆಗಳನ್ನು ಅಗಲಗೊಳಿಸಬೇಕು. ಬಿಡಿಭಾಗಗಳನ್ನು ತಂದು ಕರಾವಳಿಯ ಸಮೀಪವೇ ಕಾರ್ಯಾಗಾರಗಳನ್ನು ನಿರ್ಮಿಸಿ, ಜೋಡಿಸಿ ಅಲ್ಲಿಂದ ಸಾಗರದೊಳಕ್ಕೆ ಸಾಗಿಸಬೇಕು.

ಕಳೆದ ಆರು ವರ್ಷಗಳ ಅವಧಿಯಲ್ಲಿ ನೀತಿ-ನಿಲುವುಗಳ ಪ್ರಕಟಣೆಯನ್ನು ಬಿಟ್ಟರೆ ಈ ಕ್ಷೇತ್ರದಲ್ಲಿ ಹೆಚ್ಚಿನ ಕೆಲಸಗಳಾಗಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ಗುಜರಾತ್‌ನ ತೀರದಿಂದ 25 ಕಿ.ಮೀ.ಗಳ ದೂರದ ಖಾಂಭಾತ್ ಖಾರಿಯಲ್ಲಿ ನಮ್ಮ ದೇಶದ ಮೊದಲ ಒಂದು ಗಿಗಾವಾಟ್ ಸಾಮರ್ಥ್ಯದ ಸಾಗರದ ವಾಯುವಿದ್ಯುತ್ ಸ್ಥಾವರ ಡೆನ್ಮಾರ್ಕ್‌ನ ಸಹಭಾಗಿತ್ವದಲ್ಲಿ ಉತ್ಪಾದನೆ ಪ್ರಾರಂಭಿಸಲಿದೆಯೆಂದು ಸಚಿವಾಲಯದ ಮೂಲಗಳು ತಿಳಿಸಿವೆ. ಆದರೆ ಉಳಿದ ಯಾವ ಸ್ಥಾವರವೂ 2030ರ ಮೊದಲಿಗೆ ಉತ್ಪಾದನೆ ಪ್ರಾರಂಭಿಸುವ ನಿರೀಕ್ಷೆಯಿಲ್ಲವೆಂಬುದು ಪರಿಣತರ ಅಭಿಪ್ರಾಯ.

ಬೀಸುವ ಗಾಳಿ ಮತ್ತು ಸಾಗರದ ಭೂಭೌಗೋಳಿಕ ಸ್ಥಿತಿಯ ಬಗೆಗಿನ ಮಾಹಿತಿ ಸಂಗ್ರಹ, ನೂರಾರು ಬಿಡಿಭಾಗಗಳ ಅಡೆತಡೆಯಿಲ್ಲದ ಸರಬರಾಜು, ಸಾಗರದಲ್ಲಿ ಉತ್ಪಾದಿಸಿದ ವಿದ್ಯುತ್ತನ್ನು ಕರಾವಳಿಗೆ ಸಾಗಿಸುವ ವ್ಯವಸ್ಥೆ, ಬಂದರುಗಳಲ್ಲಿ ಮೂಲ ಸೌಕರ್ಯ ನಿರ್ಮಾಣ, ಟರ್ಬೈನ್‌ಗಳ ವಿನ್ಯಾಸ ಮತ್ತು ತಂತ್ರಜ್ಞಾನದಲ್ಲಿ ಅಗತ್ಯ ಬದಲಾವಣೆಗಳು, ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಧನಸಹಾಯ ಮತ್ತು ಕರ ವಿನಾಯಿತಿ ಮುಂತಾದ ಕೆಲಸಗಳು ಅತ್ಯಂತ ತ್ವರಿತಗತಿಯಲ್ಲಿ ನಡೆಯಬೇಕಾದ ಅಗತ್ಯವಿದೆ.

ಈ ಎಲ್ಲ ಪ್ರಯತ್ನಗಳು ಸಮರೋಪಾದಿಯಲ್ಲಿ ನಡೆದಾಗ ಮಾತ್ರ, 2030ರ 30 ಗಿಗಾವಾಟ್‌ಗಳ ಗುರಿಯನ್ನು ಮುಟ್ಟುವುದು ಬಹುತೇಕ ಅಸಾಧ್ಯವಾದರೂ 2050ರ ಹೊತ್ತಿಗೆ ಸಾಗರದ ವಾಯುವಿದ್ಯುತ್ ಸ್ಥಾವರಗಳಿಂದ 140 ಗಿಗಾವಾಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸುವುದು ಸಾಧ್ಯವಾಗಬಹುದು.

ಚುರುಮುರಿ

ಒಂಬತ್ತು ತುಂಬಿತಾ?

• ಚಂದ್ರಕಾಂತ ವಡ್ಡು

‘ಹಲೋ... ಹ...ಲೊ... ಅಲ್ಲೊ... ಹಾಲೋ...’ ಹೆಂಡತಿ ದನಿ ಏರಿಳಿಸಿ, ಅಕ್ಷರಕ್ಕೆ ಒತ್ತುನೀಡಿ, ಅಂತರ ಕೊಟ್ಟು, ದೀರ್ಘ ಮಾಡಿ ವಿಧವಿಧವಾಗಿ ಪ್ರಯತ್ನಿಸಿದರೂ ದೂರವಾಣಿಯ ಆ ಬದಿಯಿಂದ ಪ್ರತಿಕ್ರಿಯೆ ಸಿಗಲಿಲ್ಲ. ಕೊನೆಗೆ ಎರಡೂ ಕಡೆಯವರು ಸ್ಪೀಕರ್ ಆನ್ ಮಾಡಿ ‘ಎಲ್ಲರ ಕನ್ನಡ’ದಲ್ಲಿ ಸಂಭಾಷಣೆ ಮುಂದುವರಿಸಿದರು.

‘ದೊಡಮ್ಮಾ... ನಾನು ಜಯನಗರದಿಂದ... ಚೆನಾಗಿದೀರಾ...?’

‘ಹ್ಞೂಂ... ಕಣವ್ವ, ನಾವೆಲ್ಲಾ ಆರಾಮಿದ್ದೇವೆ...’

‘ಛಳಿ ಭಾಳ ಐತೆ, ನಿಮಗೆ ಲೈಟಾಗಿ ಕೆಮ್ಮಿರಬೇಕಲ್ಲಾ...?’

‘ಲೈಟಾಗಿಲ್ಲ... ಟೈಟಾಗಿಲ್ಲ... ಕೆಮ್ಮೇ ಇಲ್ಲ’.

‘ಮೈಕೈ ನೋವು, ನೆಗಡಿ, ಗಂಟಲು ಕೆರೆತ...?’

‘ಅವ್ಯಾವೂ ಇಲ್ಲ, ಗುಂಡಕಲ್ಲಿನಂಗೆ ಇದೀನಿ ನೋಡು’.

‘ಮನೆಯಲ್ಲಿ ಯಾರಿಗೂ ಇಲ್ಲವೇ?!’

‘ಇಲ್ಲ, ಎಲ್ಲರೂ ಆರಾಮಿದ್ದೇವೆ’.

‘ಅಯ್ಯೋ! ಈಗ ಸಾವಿಲ್ಲದವರ ಮನೆಯ ಸಾಸಿವೆ ಸಿಗಬಹುದು, ಓಮೈಕ್ರಾನ್ ಇಲ್ಲದವರ ಮನೆ ಸಿಗಲಾರದು. ನಿಮ್ಮ ಮನೆಗೆ ಯಾಕೆ ಬಂದಿಲ್ಲಾ ಅಂತ? ಯಾವುದಕ್ಕೂ ಒಮ್ಮೆ ನಿಮ್ಮ ಡಾಕ್ಟರಿಗೆ ತೋರಿಸಿಬಿಡಿ’.

‘ಮೊನ್ನೆ ಆಸ್ಪತ್ರೆಗೆ ಹೋಗಿದ್ದೆ ಕಣವ್ವ, ಬೂಸ್ಟರ್ ಡೋಸ್ ಹಾಕಿಸ್ಕೊಳ್ಳೋಣ ಅಂತ. ಆ ತಿಕ್ಕಲು ಕಾಂಪೌಂಡರ್ ಏಳು ತಿಂಗಳಿಗೆ ಹುಟ್ಟಿದವರಂಗೆ ಆಡ್ತಾನೆ. ನಿಮಗೆ ಇನ್ನೂ ಒಂಬತ್ತು ತಿಂಗಳು ಆಗಿಲ್ಲ ಅಂತಾನೆ. ಈ ವಯಸ್ಸಲ್ಲಿ ನಾನೇನು ಹೆರಿಗೆಗೆ ಹೋಗಿದ್ನಾ ಒಂಬತ್ತು ತುಂಬಿದ ಮೇಲೆ ಬಾ ಅನ್ನಾಕೆ?’

ಮಾತು ಮುಗಿಸಿದ ಹೆಂಡತಿ ತಿಂಗಳೇಶನಿಗೆ ತಗಲಿಕೊಂಡಳು: ‘ಅದೇನ್ರೀ... ನಿಮ್ಮ ಸಿಎಮ್ಮು ಆರು ತಿಂಗಳಿಗೇ ‘ಸರ್ಕಾರದ ಸಾಧನೆ’ ಪುಸ್ತಕ ಬಿಡುಗಡೆ ಮಾಡ್ತಾರೆ, ಲಸಿಕೆಗೆ ಮಾತ್ರ ಒಂಬತ್ತು ತಿಂಗಳು ಕಾಯ್ಬೇಕಾ?’

‘ಅವರು ಸಿಎಮ್, ಅಂದ್ರೆ ಕಾಮನ್ ಮ್ಯಾನ್. ಆದ್ದರಿಂದ ಅವರೂ ಒಂಬತ್ತು ತುಂಬುವವರೆಗೆ ಕಾಯಬೇಕಿತ್ತು. ಆರು ತಿಂಗಳಿಗೇ ‘ಸಾಧನೆ’ ಡೆಲಿವರಿ ಮಾಡಿದ್ದು ತಪ್ಪು!’

ಚರ್ಚೆ

ಬೇಕು ಪ್ರಾಕೃತಕ್ಕೊಂದು ವಿ.ವಿ.

ಕನ್ನಡದ ಸತ್ವವನ್ನು, ಕಾವ್ಯಶಕ್ತಿಯನ್ನು ಬಗೆಬಗೆಯಾಗಿ ಸಮೃದ್ಧಗೊಳಿಸಿದ ಪ್ರಾಕೃತದ ಉಪಕಾರ ಸ್ಮರಣೆ ಕನ್ನಡಿಗರ ಆದ್ಯ ಕರ್ತವ್ಯ

• ಹಂಪ ನಾಗರಾಜಯ್ಯ

ಸಂಸ್ಕೃತ ವಿಶ್ವವಿದ್ಯಾಲಯ ವಿಸ್ತರಣೆಗೆ ಸರ್ಕಾರ ಇತ್ತೀಚೆಗೆ ₹ 320 ಕೋಟಿ ಮೀಸಲಿಟ್ಟ ಸಂಬಂಧವಾಗಿ ವಾಗ್ವಾದ ನಡೆದಿದೆ. ಇಲ್ಲಿ ಅವಶ್ಯವಾಗಿ ಪರಿಗಣಿಸಬೇಕಾದ ಇನ್ನೊಂದು ಸಂಗತಿಯಿದೆ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಪುನರುತ್ಥಾನ ಪ್ರಕ್ರಿಯೆಯಲ್ಲಿ ಸಂಸ್ಕೃತದಷ್ಟೇ ಮಹತ್ವದ ಪಾತ್ರ ವಹಿಸಿದ್ದು ಪ್ರಾಕೃತ ಎಂಬುದನ್ನು ಮರೆಯಬಾರದು.

ಒನಕೆ ನಾಡು, ಓವನಿಗೆ, ಚತ್ತಾಣ, ಪಗರಣ, ಬೆದಂಡೆಯೆಂಬ ದೇಸಿ ಸಾಹಿತ್ಯ ಪ್ರಕಾರಗಳಿಂದ ಸ್ವತಂತ್ರ ಜನಭಾಷೆಯಾಗಿದ್ದ ಕನ್ನಡ, ಸರ್ವಾಂಗೀಣ ಪುಷ್ಟಿಯಿಂದ ತನ್ನ ಅಭಿವ್ಯಕ್ತಿ ಸಾಧ್ಯತೆಯನ್ನು ವಿಸ್ತರಿಸಲು ಹವಣಿಸಿತ್ತು. ಅದಕ್ಕೆ ನಾನಾ ಜ್ಞಾನಶಾಖೆಗಳ ಸಾರವನ್ನು ಲೀಲಾಜಾಲವಾಗಿ ಸಮರ್ಥವಾಗಿ ಸಂವಹನಿಸಲು ಹೊಸ ಮಾದರಿಗಳು ಬೇಕಿದ್ದವು. ಸಂಸ್ಕೃತ–ಪ್ರಾಕೃತಗಳು ಆ ಅಗತ್ಯವನ್ನು ಪೂರೈಸಿದವು.

ಪ್ರಾಕೃತವೆಂಬುದು ಹಲವು ಜನಭಾಷೆಗಳನ್ನು ಒಳಗೊಂಡಿರುವ ಸಮಷ್ಟಿಶಬ್ದ. ಅಪಭ್ರಂಶ, ಅರ್ಧಮಾಗಧಿ, ಪಾಳಿ, ಪೈಶಾಚಿ, ಮಹಾರಾಷ್ಟ್ರೀ, ಶೌರಸೇನೀ ಮೊದಲಾದ ಜನಭಾಷೆಗಳ ಗುಂಪಿಗೆ ಪ್ರಾಕೃತವೆಂದು ಕರೆಯುತ್ತಾರೆ. ಬಲ್ಲಿದರ ಭಾಷೆ ಸಂಸ್ಕೃತ. ಜನಸಾಮಾನ್ಯರ ಭಾಷೆ ಪ್ರಾಕೃತ. ಬುದ್ಧ ಮತ್ತು ಮಹಾವೀರರು ತಮ್ಮ ವಿಚಾರಗಳು ಜನಸಾಮಾನ್ಯರಿಗೆ ತಿಳಿಯಬೇಕೆಂಬ ಕಕ್ಕುಲಾತಿಯಿಂದ ಜನರಾಡುವ ಪಾಳಿ–ಪ್ರಾಕೃತ ಭಾಷೆಗಳಲ್ಲಿ ಬೋಧಿಸಿದರು. ಆದ್ದರಿಂದ ಪ್ರಾಕೃತ ಭಾಷೆಗಳು ಸರ್ವಮಾನ್ಯವಾದವು. ಮಹಾಕವಿಗಳು ಪುರಸ್ಕರಿಸಿದರು. ಕತೆ, ಕಾವ್ಯಗಳೂ ಪ್ರಬುದ್ಧ ಶಾಸ್ತ್ರ ಕೃತಿಗಳೂ ವರಸೆಯಾಗಿ ರಚಿತವಾದವು.

ಸಂಸ್ಕೃತ ಮತ್ತು ಪ್ರಾಕೃತ ಭಾಷಾ ಸಾಹಿತ್ಯವನ್ನು ಮಹಾಕವಿಗಳು, ನಾಟಕಕಾರರು ಸಮಾನವಾಗಿ ಗೌರವಿಸಿ ಬಳಸಿದರು. ಸಂಸ್ಕೃತ ನಾಟಕಗಳಲ್ಲಿ ಸಂಸ್ಕೃತಕ್ಕಿಂತ ಪ್ರಾಕೃತವೇ ಪ್ರಧಾನವಾಗಿತ್ತು. ರಾಜನನ್ನು ಬಿಟ್ಟರೆ ಉಳಿದೆಲ್ಲ ಪಾತ್ರಗಳು, ರಾಣಿಯರು ಸಹ ಪ್ರಾಕೃತದಲ್ಲಿ ಮಾತನಾಡಬೇಕಿತ್ತು. ಭಾಸ, ಕಾಳಿದಾಸರ ಎಲ್ಲ ನಾಟಕಗಳಲ್ಲಿ ಪ್ರಾಕೃತದ್ದೇ ದರಬಾರು.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪ್ರಾಕೃತ ವಹಿಸಿದ ಪಾತ್ರ ದೊಡ್ಡದು. ಕನ್ನಡದಲ್ಲಿ ಗ್ರಂಥ ರಚನೆ ಆರಂಭವಾದದ್ದೇ ಪ್ರಾಕೃತ ಕೃತಿಗಳಿಗೆ ಬರೆದ ವ್ಯಾಖ್ಯಾನಗಳ ಮೂಲಕ. ಆನಂತರ ಶಾಸ್ತ್ರಗ್ರಂಥಗಳ ಅನುವಾದಕ್ಕೆ ತೊಡಗಿದರು. ತರುವಾಯ ಪ್ರಾಕೃತ ಕತೆ, ಕಾವ್ಯಗಳ ಸ್ಫೂರ್ತಿಯಿಂದ ಅಲ್ಲಿನ ಮಾದರಿಗಳಿಗೆ ಮುಗಿಬಿದ್ದರು. ಕನ್ನಡದ ಮುಂಗೋಳಿ ಎನಿಸಿದ ವಡ್ಡಾರಾಧನೆ ಪ್ರಾಕೃತದ ಕೊಡುಗೆ. ಅಲ್ಲಿಂದ ಪ್ರಾಕೃತದ ಪ್ರಭಾವ ಪ್ರವಾಹವಾಯಿತು. ಕನ್ನಡ ಕಾವ್ಯ ಪ್ರಪಂಚದ ತುಂಬಾ ಪ್ರಾಕೃತದ ಹೆಜ್ಜೆಗಳೂಡಿದವು. ಕನ್ನಡಕ್ಕೆ ಮೊಲೆಯೂಡಿ ಕಸುವು ಹೆಚ್ಚಿಸಿದುದನ್ನು ಅರಿಯಲು ಸಾಹಿತ್ಯ ಪ್ರಕಾರಗಳ ಪಕ್ಷಿನೋಟ ಸಾಕು.

ಹಳಗನ್ನಡದಲ್ಲಿ ತೂಗಿ ತೊನೆಯುವ ಕಾವ್ಯ ಪ್ರಕಾರ ‘ಚಂಪೂ’. ಇದು ಕನ್ನಡಕ್ಕೆ ಪ್ರಾಕೃತ ನೀಡಿದ ಮೊದಲ ವರ. ಸಂಘದಾಸಗಣಿ ವಾಚಕನ ವಸುದೇವ ಹಿಂಡಿ, ಉದ್ಯೋತನ ಸೂರಿಯ ಕುವಲಯಮಾಲ ಕಾವ್ಯಗಳ ದಟ್ಟ ಪ್ರಭಾವದಿಂದ ಚಂಪೂ ರೂಪ ಕನ್ನಡದಲ್ಲಿ ಪಲ್ಲವಿಸಿತು. ಶತಮಾನದಿಂದ ಶತಮಾನಕ್ಕೆ ದಾಂಗುಡಿಯಿಡುತ್ತಾ ಚಂಪೂ ರೂಪ ಮಹಾರಾಜನಾಗಿ ವಿಜೃಂಭಿಸಿತು. ಪಂಪ, ಪೊನ್ನ, ರನ್ನ, ಜನ್ನ, ರುದ್ರಭಟ್ಟ, ಹರಿಹರ ಕವಿಗಳಿಂದ ಚಂಪೂ ಶಿಖರಾರೋಹಣ ಮಾಡಿತು. ಕಂದಪದ್ಯಗಳಿಲ್ಲದ ಚಂಪೂ ಕಾವ್ಯಗಳಿಲ್ಲ. ‘ಕಂದ’ ಛಂದಸ್ಸು ಪ್ರಾಕೃತವು ಕನ್ನಡಕ್ಕೆ ಕೊಟ್ಟಿರುವ ಎರಡನೆಯ ಬಳುವಳಿ.

‘ಪ್ರಾಸ’ ಕನ್ನಡ ಪದ್ಯಗಳ ಜೀವಾಳ. ಪ್ರಾಸಗಳಲ್ಲಿ ಆದಿಪ್ರಾಸ ಪ್ರಾಣಾನಿಲ. ಅಂತ್ಯಪ್ರಾಸವೂ ಸಾಕಷ್ಟಿದೆ. ಕೆಲವೊಮ್ಮೆ ಆದ್ಯಂತಪ್ರಾಸ ಬಳಕೆಯಾಗಿದೆ. ರಗಳೆ ಕಾವ್ಯಗಳಲ್ಲಿ ಇದು ಕಂಡುಬಂದಿದೆ. ಈ ಆದಿಪ್ರಾಸ, ಅಂತ್ಯಪ್ರಾಸ ಮತ್ತು ಆದ್ಯಂತ ಪ್ರಾಸಗಳು ಪ್ರಾಕೃತದ ಮೂರನೆಯ ದೇಣಿಗೆ.

ಹರಿಹರ ಕವಿ ‘ರಗಳೆ’ ಛಂದಸ್ಸಿನ ಕಾವ್ಯಗಳ ಬಾದಷಹ. ಉತ್ಸಾಹ ರಗಳೆ, ಮಂದಾನಿಲ ರಗಳೆ, ಲಲಿತ ರಗಳೆ ಜನಪ್ರಿಯ ಪ್ರಕಾರಗಳು. ಈ ಮೂರೂ ಪ್ರಕಾರಗಳ ರಗಳೆ ಛಂದಸ್ಸನ್ನು ಕನ್ನಡಕ್ಕೆ ಧಾರೆ ಎರೆದದ್ದು ಪ್ರಾಕೃತ. ಇದು ನಾಲ್ಕನೆಯ ಉಪಕಾರ. ನಡುಗನ್ನಡ ಸಾಹಿತ್ಯದಲ್ಲಿ ‘ಸಾಂಗತ್ಯ’ ಕಾವ್ಯಗಳದ್ದೇ ದರಬಾರು. ರತ್ನಾಕರ ವರ್ಣಿ ಹತ್ತು ಸಾವಿರ ಪದ್ಯಗಳ ‘ಭರತೇಶ ವೈಭವ’ ಮಹಾಕಾವ್ಯ ಬರೆದದ್ದು ಸಾಂಗತ್ಯ ಛಂದಸ್ಸಿನಲ್ಲಿ. ಕನ್ನಡಕ್ಕೆ ಈ ಸಾಂಗತ್ಯ ಮಟ್ಟು ಬಂದದ್ದು ಪ್ರಾಕೃತದಿಂದ. ಐದನೆಯ ಕೊಡುಗೆ ಇದು.



‘ಚರಿತೆ’ಯೆಂಬ ಕಾವ್ಯ ಪ್ರಕಾರ ಕನ್ನಡದಲ್ಲಿ ರೂಢಿಗೆ ಬಂದದ್ದು ಪ್ರಾಕೃತದಿಂದ. ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ ಮತ್ತು ಯಶೋಧರ ಚರಿತೆ ಕಾವ್ಯಗಳು ನೆನಪಾಗುತ್ತವೆ. ಚಿದಾನಂದ ಮಲ್ಲಿಕಾರ್ಜುನನ ಸೂಕ್ತಿ ಸುಧಾರ್ಣವ ಮೊದಲಾದ ಕಾವ್ಯ ಸಂಕಲನಗಳು ಪ್ರಾಕೃತದ ಗಾಥಾಸಪ್ತಶತಿಯಂಥ ಸಂಕಲನ ಮಾದರಿಯಿಂದ ರಚಿತವಾದವು.

ಇವೆಲ್ಲ ಬಳುವಳಿಗಿಂತ ಬಹುದೊಡ್ಡ ಕೊಡುಗೆ ಎಂದರೆ ಕನ್ನಡ ನುಡಿಭಂಡಾರವನ್ನು ಶ್ರೀಮಂತಗೊಳಿಸಿದ್ದು. ಸಂಸ್ಕೃತದಿಂದ ಬಂದಿದೆ ಎಂದು ಭಾವಿಸಿರುವ ಸಾವಿರಾರು ಶಬ್ದಗಳು ಮತ್ತು ತದ್ಭವ ರೂಪಗಳು ಪ್ರಾಕೃತದ ಮೂಲಕ ಬಂದಿವೆ. ಹೀಗೆ ಬಗೆಬಗೆಯಾಗಿ ಕನ್ನಡದ ಸತ್ವವನ್ನು, ಕಾವ್ಯಶಕ್ತಿಯನ್ನು ಸಮೃದ್ಧಗೊಳಿಸಿದ ಪ್ರಾಕೃತದ ಉಪಕಾರ ಸ್ಮರಣೆ ಕನ್ನಡಿಗರ ಆದ್ಯ ಕರ್ತವ್ಯ.

ಭಾರತದಲ್ಲಿ ಹದಿನೆಂಟು ಸಂಸ್ಕೃತ ವಿಶ್ವವಿದ್ಯಾಲಯಗಳಿವೆ. ಆದರೆ ಪ್ರಾಕೃತ ವಿಶ್ವವಿದ್ಯಾಲಯ ಒಂದೂ ಇಲ್ಲ. ಕರ್ನಾಟಕ ಸರ್ಕಾರ ದೇಶದಲ್ಲಿ ಮೊತ್ತ ಮೊದಲನೆಯ ಪ್ರಾಕೃತ ವಿಶ್ವವಿದ್ಯಾಲಯ ಸ್ಥಾಪಿಸುವ ಕೀರ್ತಿಗೆ ಪಾತ್ರವಾಗುವುದು ಕೃತಜ್ಞತೆಯ ದ್ಯೋತಕವೂ ಆಗುತ್ತದೆ.

ವಾಚಕರ ವಾಣಿ

ಟೋಯಿಂಗ್ ಸಿಬ್ಬಂದಿಯ ಸಾಮರ್ಥ್ಯ ಪರಿಗಣಿಸಿ!

ವಾಹನ ಸವಾರರನ್ನು ಗೋಳುಹೊಯ್ದುಕೊಂಡ ಟೋಯಿಂಗ್ ಪದ್ಧತಿಯನ್ನು ಮರುಪರಿಶೀಲಿಸಲು ಕೊನೆಗೂ ಸರ್ಕಾರ ಮುಂದಾಗಿದೆ. ಇದಕ್ಕಾಗಿ ಸ್ವತಃ ಮುಖ್ಯಮಂತ್ರಿಯವರೇ ಬರಬೇಕಾಯಿತು ಎಂಬುದು ಈ ಪದ್ಧತಿಯ ಕರಾಳತೆಯನ್ನು ಬಿಂಬಿಸುತ್ತದೆ. ಈ ಹಂತದಲ್ಲಿ ಟೋಯಿಂಗ್ ಪದ್ಧತಿಯನ್ನು ನಿಲ್ಲಿಸುವ ಬದಲು ಈ ವಾಹನಗಳು ಹಾಗೂ ಸಿಬ್ಬಂದಿಯನ್ನು ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಪತ್ತೆಹಚ್ಚಲು ನೇಮಿಸುವುದು ಒಳಿತು!

ಇದಕ್ಕೆ ಹಲವು ಕಾರಣಗಳಿವೆ. ಮೊದಲನೆಯದಾಗಿ, ಅಪರಾಧ ನಡೆದ (ವಾಹನವನ್ನು ಪಾರ್ಕ್ ಮಾಡಿದ) ಕೂಡಲೇ ಕ್ಷಣಾರ್ಧದಲ್ಲಿ ಈ ತಂಡ ಹಾಜರಾಗುತ್ತದೆ. ಹೊಯ್ಸಳ ತಂಡಕ್ಕೂ ಈ ಸಾಮರ್ಥ್ಯವಿಲ್ಲ! ಎರಡನೆಯದಾಗಿ, ಯಾವುದೇ ಮುಲಾಜಿಲ್ಲದೆ, ತನಿಖೆಯ ಗೋಜಿಲ್ಲದೆ, ಯಾರ ಮರ್ಜಿಗೂ ಕಾಯದೆ, ಕೋರ್ಟ್- ಕೇಸ್‌ಗಳ ಹಂಗಿಲ್ಲದೆ ಅಪರಾಧಿಗಳ (ವಾಹನ ಸವಾರರ) ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಮೂರನೆಯದಾಗಿ, ಯಾವುದೇ ಕಾರಣಕ್ಕೂ ಅಪರಾಧಿಗಳು ತಪ್ಪಿಸಿಕೊಂಡು ಹೋಗದಂತೆ ನಿಗಾ ವಹಿಸಿ, ಅವರೇ ಖುದ್ದಾಗಿ ಠಾಣೆಯನ್ನು ಹುಡುಕಿಕೊಂಡು ಬರುವಂತೆ ಮಾಡುತ್ತದೆ. ನಾಲ್ಕನೆಯದಾಗಿ, ಈ ತಂಡದಲ್ಲಿ ನುರಿತ, ಸದೃಢ, ಆಜಾನುಬಾಹು ಸಿಬ್ಬಂದಿಯಿದ್ದಾರೆ. ಇವರು ಕೆ.ಜಿ.ಗಟ್ಟಲೆ ತೂಗುವ ವಾಹನಗಳನ್ನು ಹೂವಿನಂತೆ ಎತ್ತಿ ‘ಟೈಗರ್’ಗಳಿಗೆ ತುಂಬಿಸುತ್ತಾರೆ. ಇವರ ದೈಹಿಕ ಸಾಮರ್ಥ್ಯವನ್ನು ಪೊಲೀಸ್ ಇಲಾಖೆ ಕಡೆಗಣಿಸಿದೆ ಎಂದೇ ಹೇಳಬೇಕು! ಹೀಗಾಗಿ, ತಕ್ಷಣಕ್ಕೆ ಜಾರಿಗೆ ಬರುವಂತೆ ಟೋಯಿಂಗ್ ವಾಹನದ ಸಿಬ್ಬಂದಿಯನ್ನು ಇಲಾಖೆಯ ಅಪರಾಧ ವಿಭಾಗಕ್ಕೆ ಸರ್ಕಾರ ನೇಮಿಸಿಕೊಳ್ಳಬೇಕು!

ಸುಘೋಷ ಸ. ನಿಗಳೆ, ಬೆಂಗಳೂರು

ಲಿಪಿ ಸುಧಾರಣೆಯ ಚರ್ಚೆ ಗೌರವಿಸಿ

ಕನ್ನಡದಲ್ಲಿ ಲಿಪಿ ಸುಧಾರಣೆಯ ಬಗ್ಗೆ ಚರ್ಚೆ ನಡೆಯುತ್ತಿರುವುದು ಸರಿಯಷ್ಟೆ. ಕನ್ನಡದ ಸಹಜ ಲಯದಲ್ಲಿ ಅಂತೆಯೇ ತಮಿಳು, ತೆಲುಗು, ಮಲಯಾಳಂ ಮೊದಲಾದ ದ್ರಾವಿಡ ಭಾಷೆಗಳಲ್ಲಿ ಮಹಾಪ್ರಾಣ ಅಕ್ಷರಗಳು ಇಲ್ಲ. ಕಾಲ್ಡವೆರ್‌ರಿಂದ ಹಿಡಿದು ಶಂಕರ ಬಟ್ ಅವರವರೆಗೆ ಎಲ್ಲಾ ಭಾಷಾ ವಿಜ್ಞಾನಿಗಳು ಸಹ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಅವರು ಮಾಡಿರುವ ತಪ್ಪೆಂದರೆ, ಶಂಕರ ಬಟ್ ಅವರನ್ನು ಹೊರತುಪಡಿಸಿ ಉಳಿದವರು ತಮ್ಮ ಬರಹಗಳಲ್ಲಿ ಅವುಗಳನ್ನು ಬಳಸಿರುವುದು.

ಆಡುಭಾಷೆಗೂ ಬರಹದ ಭಾಷೆಗೂ ವ್ಯತ್ಯಾಸವಾಗುತ್ತದೆ ಎಂಬುದು ನಿಜ. ಆದರೆ ವ್ಯತ್ಯಾಸ ತುಂಬಾ ದೂರ ಹೋಗಬಾರದು. ಸತ್ಯ ಏನೆಂದರೆ, ಕನ್ನಡದ ಈಗಿನ ಬರಹದ ಭಾಷೆ ಆಡುಭಾಷೆಗೆ ತುಂಬಾ ದೂರ ಇದೆ. ಹಾಗಂತ ಮಹಾಪ್ರಾಣ ಅಕ್ಷರಗಳನ್ನು ಅಂತೆಯೇ ಷ ಋ ಅಕ್ಷರಗಳನ್ನು ಏಕಾಏಕಿ ಬಿಟ್ಟು ಬರೆಯಲು ಸಾಧ್ಯವಿಲ್ಲ. ಬದಲಾಗಿ ಎರಡು ರೂಪಗಳನ್ನು ಮೊದಲಿಗೆ ಒಪ್ಪಿಕೊಳ್ಳಬೇಕಿದೆ. ಉದಾಹರಣೆಗೆ, ಅಭಿಮಾನ- ಅಬಿಮಾನ, ಲಾಭ- ಲಾಬ ಹೀಗೆ. ಈಗಾಗಲೇ ಕಥೆ- ಕತೆ, ಘಂಟೆ- ಗಂಟೆ ಈ ಎರಡು ರೂಪಗಳನ್ನು ಒಪ್ಪಿಕೊಂಡಿದ್ದೇವೆ. ಮಹಾಪ್ರಾಣ ಅಕ್ಷರಗಳನ್ನು ಬಿಟ್ಟು ಬರೆದಾಕ್ಷಣ ಸಂಸ್ಕೃತ ಪದಗಳನ್ನು ತ್ಯಜಿಸಿದ್ದೇವೆ ಎಂದರ್ಥವಲ್ಲ. ಬದಲಾಗಿ ಕನ್ನಡದ ಜಾಯಮಾನಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರ್ಥ. ಬ್ರಿಟಿಷರು ಬೆಂಗಳೂರು (Bengaluru) ಎಂಬ ಪದವನ್ನು Banglore ಎಂದು, ಶಿವಮೊಗ್ಗ (Shivamogga) ಎಂಬ ಪದವನ್ನು Shimoga ಎಂದೇ ಹೇಳುತ್ತಿದ್ದರು ಹಾಗೆಯೇ ಬರೆಯುತ್ತಿದ್ದರು. ಹೀಗೆ ಅವರ ಆಡಳಿತ ಕಾಲದಲ್ಲಿ ಬದಲಾದ ಪದಗಳನ್ನು ನಾವು ಆ ಹಿನ್ನೆಲೆಯಲ್ಲಿಯೇ ನೋಡಬೇಕು. ಭಾಷೆಯ ನಿಜವಾದ ರೂಪವನ್ನು ಜನರು ಆಡುವ ಮಾತಿನಲ್ಲಿ ಮಾತ್ರ ನೋಡಬಹುದು. ಇದು ಎಷ್ಟು ಸಹಜ ಎಂದರೆ, ಹೊಸದಾಗಿ ಮಕ್ಕಳಿಗೆ ಕಲಿಸುವಾಗ ಸುಧಾರಿತ ಲಿಪಿಯಲ್ಲಿ ಕಲಿಸಿದರೆ ಮೀನು ನೀರಿನಲ್ಲಿ ಈಜಿದಷ್ಟು ಸುಲಭವಾಗುತ್ತದೆ.

ಗಿರೀಶ್ ಮತ್ತೇರ, ಹನುಮಂತ ದೇವರ ಕಣಿವೆ, ಹೊಳಲ್ಕೆರೆ

ಪದ್ಮ(ಪತ್ರ)!

ಅನೇಕರಿಗೆ
ಪದ್ಮ ಪ್ರಶಸ್ತಿಗಳು,
ಅವುಗಳ ಆಸೆಯಿಲ್ಲದವರಿಗೆ
ಕೊಡಬೇಕು ‘ಪದ್ಮಪತ್ರ’
ಪ್ರಶಸ್ತಿ!
ತಾವರೆ ಎಲೆ ನೀರೊಳಗಿದ್ದೂ
ನೀರಂಟದಂತಿರುತ್ತದೆ
(‘ಪದ್ಮಪತ್ರಮಿವಾಂಭಸಾ’
ಎಂಬುದು ಗೀತೋಕ್ತಿ).

ಸಿ.ಪಿ.ಕೆ., ಮೈಸೂರು

ಸಮುದಾಯ ಬಾನುಲಿಗೆ ಸಿಗಲಿ ಉತ್ತೇಜನ

ಕೇಂದ್ರ ಸರ್ಕಾರ ಎರಡು ದಶಕಗಳಿಂದೀಚೆಗೆ ಖಾಸಗಿ ವ್ಯವಸ್ಥೆಯಲ್ಲಿ ಸಮುದಾಯ ಬಾನುಲಿಗಳನ್ನು ಆರಂಭಿಸಿ ನಡೆಸಿಕೊಂಡು ಹೋಗುವುದಕ್ಕೆ ಹೆಚ್ಚಿನ ಗಮನ ನೀಡುತ್ತಿದೆ. ಈ ಬಾನುಲಿಗಳು ಬಂದಂತೆ ಮತ್ತು ಖಾಸಗಿ ಟಿ.ವಿ. ಚಾನೆಲ್‌ಗಳು ಹೆಚ್ಚು ಹೆಚ್ಚು ಆರಂಭವಾಗುತ್ತಿದ್ದಂತೆ ಕೇಂದ್ರ ಸರ್ಕಾರ ಹೊಸದಾಗಿ ತನ್ನ ಡಿ.ಡಿ ಟಿ.ವಿ. ಚಾನೆಲ್ಲುಗಳನ್ನು ಮತ್ತು ಆಕಾಶವಾಣಿ ಕೇಂದ್ರಗಳನ್ನು ತೆರೆಯುತ್ತಿಲ್ಲ. ಪ್ರಸಾರ ಮಾಧ್ಯಮದ ಈ ಉಸಾಬರಿಯನ್ನೆಲ್ಲ ಖಾಸಗಿಯವರಿಗೆ ನೀಡಿ ಕೈತೊಳೆದುಕೊಳ್ಳುವ ನೀತಿಯನ್ನು ಅನುಸರಿಸುತ್ತಾ ಬಂದಿದೆ.

ಕರ್ನಾಟಕದಲ್ಲಿರುವ 22 ಸೇರಿದಂತೆ ದೇಶದಲ್ಲಿ ಈಗ 316 ಸಮುದಾಯ ಬಾನುಲಿಗಳಿವೆ. ಇವುಗಳ ಪ್ರಸಾರ ವ್ಯಾಪ್ತಿ ಕಡಿಮೆ ಆದರೂ, ಆಯಾ ಪ್ರದೇಶದ ಸಮುದಾಯದಲ್ಲಿ ಹಲವು ವಿಷಯಗಳಲ್ಲಿ ಅರಿವು ಉಂಟು ಮಾಡುವ ಕಾರ್ಯವನ್ನು ಯಶಸ್ವಿಯಾಗಿ ಮಾಡಿಕೊಂಡು ಬರುತ್ತಿವೆ. ಶಿಕ್ಷಣ, ಕೃಷಿ, ಆರೋಗ್ಯ, ಮಹಿಳೆ, ಮಕ್ಕಳು ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಹೆಚ್ಚು ಗಮನ ನೀಡುತ್ತಿವೆ. ಜೊತೆಗೆ ಸರ್ಕಾರದ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ಆದರೆ ಸರ್ಕಾರ ಮತ್ತು ಸಂಬಂಧಿಸಿದ ಅಧಿಕಾರಿಗಳೇ ಈ ಸಮೂಹ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಿಲ್ಲ. ಈ ಸಮುದಾಯ ಬಾನುಲಿಗಳನ್ನು ಶಿಕ್ಷಣ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ಕೃಷಿ ವಿಜ್ಞಾನ ಕೇಂದ್ರಗಳು ನಡೆಸುತ್ತಿವೆ.

ಉತ್ಸಾಹದಿಂದ ಆರಂಭವಾದ ಈ ಬಾನುಲಿಗಳು ಈಗ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿವೆ. ಇವುಗಳನ್ನು ಸಬಲೀಕರಣಗೊಳಿಸಲು ಸರ್ಕಾರ ಮುಂದಾಗಬೇಕು. ಅಂದರೆ ಆಕಾಶವಾಣಿಗೆ ನೀಡುವಂತೆಯೇ ಜಾಹೀರಾತು ಮತ್ತು ಪ್ರತೀ ಇಲಾಖೆಯಿಂದ ಪ್ರಾಯೋಜಿತ ಕಾರ್ಯಕ್ರಮಗಳನ್ನು ನೀಡಿ ಇವುಗಳನ್ನು ಬೆಳೆಸಿ ಉಳಿಸಬೇಕಿದೆ. ರಾಜ್ಯ ಸರ್ಕಾರ ತನ್ನ ಬಜೆಟ್ ತಯಾರಿಕೆಯ ಸಿದ್ಧತೆ ಮಾಡುತ್ತಿರುವ ಈ ದಿನಗಳಲ್ಲಿ, ರಾಜ್ಯದಲ್ಲಿರುವ ಸಮುದಾಯ ಬಾನುಲಿಗಳನ್ನು ಮತ್ತಷ್ಟು ಬಲಿಷ್ಠಗೊಳಿಸಿ ಸರ್ಕಾರದ ಕಾರ್ಯಕ್ರಮಗಳು ಜನರಿಗೆ ತಲುಪುವ ರೀತಿಯಲ್ಲಿ ಅವುಗಳನ್ನು ಬಳಸಿಕೊಳ್ಳಲು ಯೋಜನೆ ರೂಪಿಸಬೇಕು.

ಎಸ್.ಗಣೇಶನ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಫೆ. 4 ರಿಂದ 20

ಶಾರ್ಟ್ ಟ್ರ್ಯಾಕ್ ಸ್ಪೀಡ್ ಸ್ಕೇಟಿಂಗ್

ಫ್ರೀಸ್ಟೈಲ್ ಸ್ಕೀಯಿಂಗ್

ಕೋವಿಡ್, ಅಂತರರಾಷ್ಟ್ರೀಯ ಒತ್ತಡಗಳನ್ನು ಮೀರಿ ನಿಲ್ಲುವ ಛಲದಲ್ಲಿ ಚೀನಾ

ಚಳಿಗಾಲದ ಒಲಿಂಪಿಕ್ಸ್‌ಗೆ ವಿವಾದದ ಬಿಸಿ

ಭಾರತ 15 ಬಾರಿ ಭಾಗಿ

ಭಾರತವು ಈವರೆಗೆ 15 ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಮಾತ್ರ ಭಾಗಿಯಾಗಿದೆ. ಆದರೆ ಈವರೆಗೂ ಯಾವುದೇ ಪದಕ ಗಳಿಸಲು ಸಾಧ್ಯವಾಗಿಲ್ಲ. ಭಾರತದಲ್ಲಿ ಚಳಿಗಾಲದ ಕ್ರೀಡೆಗಳು (ಹಿಮದಲ್ಲಿ ಆಡುವ ಕ್ರೀಡೆಗಳು) ಕಡಿಮೆ. ಇಂತಹ ಕ್ರೀಡೆಗಳನ್ನು ನಡೆಸಲು ಅಗತ್ಯವಿರುವಂತಹ ಪ್ರದೇಶವೂ ದೊಡ್ಡ ವ್ಯಾಪ್ತಿಯಲ್ಲಿ ಲಭ್ಯವಿಲ್ಲ. ಅಗತ್ಯ ತರಬೇತಿಯು ದೊರೆಯುವುದಿಲ್ಲ. ಹೀಗಾಗಿ ಭಾರತೀಯ ಅಥ್ಲೀಟ್‌ಗಳು ಈ ಕ್ರೀಡಾಕೂಟದಲ್ಲಿ ಭಾಗಿಯಾಗುವುದೇ ಕಡಿಮೆ.

ಶತಮಾನದ ಇತಿಹಾಸ

- ಚಳಿಗಾಲದ ಒಲಿಂಪಿಕ್ಸ್‌ಗೆ ಒಂದು ಶತಮಾನದ ಇತಿಹಾಸವಿದೆ. 1908ರಲ್ಲಿ ಮತ್ತು 1920ರಲ್ಲಿ ಯೂರೋಪ್‌ನಲ್ಲಿ ಚಳಿಗಾಲದ ಕ್ರೀಡಾಕೂಟ, ಬೇಸಿಗೆಯ ಕ್ರೀಡಾಕೂಟಗಳನ್ನು ಆಯೋಜಿಸಲಾಗಿತ್ತು. ಐರೋಪ್ಯ ದೇಶಗಳು ಈ ಕ್ರೀಡಾಕೂಟದಲ್ಲಿ ಭಾಗಿಯಾಗಿದ್ದವು. ಆದರೆ ಈ ಕ್ರೀಡಾಕೂಟಕ್ಕೆ ಚಳಿಗಾಲದ ಒಲಿಂಪಿಕ್ಸ್‌ನ ಮಾನ್ಯತೆ ದೊರೆತಿದ್ದು, 1925ರಲ್ಲಿ. 1924ರಲ್ಲಿ ನಡೆದ ಕ್ರೀಡಾಕೂಟವನ್ನು ಒಲಿಂಪಿಕ್ಸ್ ಎಂದು ಮಾನ್ಯತೆ ನೀಡಿ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯು 1925ರಲ್ಲಿ ಆದೇಶ ಹೊರಡಿಸಿತ್ತು
- ಮೊದಲ ಚಳಿಗಾಲದ ಒಲಿಂಪಿಕ್ಸ್ 1924ರಲ್ಲಿ ಫ್ರಾನ್ಸ್‌ನ ಷಾಮೋನಿಕ್ಸ್‌ನಲ್ಲಿ ನಡೆದಿತ್ತು. 16 ದೇಶಗಳ 250 ಕ್ರೀಡಾಪಟುಗಳು ಭಾಗಿಯಾಗಿದ್ದರು. 16 ವಿವಿಧ ಕ್ರೀಡೆಗಳಿಗೆ ಇದರಲ್ಲಿ ಅವಕಾಶ ನೀಡಲಾಗಿತ್ತು. ಆದರೆ ಮಹಿಳೆಯರು ಫಿಗರ್ ಸ್ಕೇಟಿಂಗ್‌ನಲ್ಲಿ ಮಾತ್ರ ಭಾಗಿಯಾಗ ಬಹುದಿತ್ತು
- 1936ರವರೆಗೆ ನಿರಂತರವಾಗಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಚಳಿಗಾಲದ ಒಲಿಂಪಿಕ್ಸ್ ಅನ್ನು ನಡೆಸಿಕೊಂಡು ಬರಲಾಗಿತ್ತು. ಆದರೆ ನಂತರ 12 ವರ್ಷ, ಅಂದರೆ 1948ರವರೆಗೆ ಈ ಕ್ರೀಡಾಕೂಟ ನಡೆಸಿರಲಿಲ್ಲ. ನಂತರ ಪ್ರತಿ ನಾಲ್ಕು ವರ್ಷಗಳಿಗೆ ಒಮ್ಮೆ ಚಳಿಗಾಲದ ಒಲಿಂಪಿಕ್ಸ್ ಅನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ
- 2014ರ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ 88 ದೇಶಗಳ 2,800 ಅಥ್ಲೀಟ್‌ಗಳು ಭಾಗಿಯಾಗಿದ್ದರು. ಇದು ಈವರೆಗಿನ ಗರಿಷ್ಠ ಸಂಖ್ಯೆ. ಈ ಕ್ರೀಡಾಕೂಟಲ್ಲಿ 98 ಕ್ರೀಡೆಗಳಿಗೆ ಅವಕಾಶ ನೀಡಲಾಗಿತ್ತು. ಇಷ್ಟೊಂದು ಕ್ರೀಡೆಗಳಿಗೆ ಅವಕಾಶ ನೀಡಿದ್ದೂ ಇದೇ ಮೊದಲು

• ಗಿರೀಶ ದೊಡ್ಡಮನಿ

ಚೀನಾದಲ್ಲಿ ಈಗ ಚಳಿಗಾಲ. ಆದರೆ ಒಂದು ಕಡೆ ಕೊರೊನಾ ಹಾವಳಿ ಮತ್ತೊಂದು ಕಡೆ ಅಂತರರಾಷ್ಟ್ರೀಯ ಕ್ರೀಡಾ ಸಂಘಟನೆಗಳ ಅಸಮಾಧಾನದ ಬಿರುಬಿಸಿಯನ್ನೂ ಆ ದೇಶ ಎದುರಿಸುತ್ತಿದೆ. ಅದಕ್ಕೆ ಕಾರಣ ಚಳಿಗಾಲದ ಒಲಿಂಪಿಕ್ಸ್.

ಶುಕ್ರವಾರದಿಂದ ಬೀಜಿಂಗ್‌ನ ಮಂಜಿನ ರಾಶಿಯಲ್ಲಿ ಈ ಕೂಟ ಆರಂಭವಾಗಲಿದೆ. 91 ದೇಶಗಳು ಭಾಗವಹಿಸಲಿವೆ. ಆದರೆ ಎರಡು ವರ್ಷಗಳ ಹಿಂದೆ ಜಗತ್ತಿಗೆ ಕಂಟಕವೊಡ್ಡಿದ ಕೊರೊನಾ ವೈರಸ್ ಮೊದಲ ಬಾರಿಗೆ ಪತ್ತೆಯಾಗಿದ್ದು ಚೀನಾದ ವುಹಾನ್‌ನಲ್ಲಿ. ಅದರ ನಂತರ ವಿಶ್ವದ ಬಹಳಷ್ಟು ದೇಶಗಳ ಸಾಮಾಜಿಕ, ಆರ್ಥಿಕ ಮತ್ತು ಆರೋಗ್ಯ ವ್ಯವಸ್ಥೆಯನ್ನು ಈ ಕೊರೊನಾ ಸೋಂಕು ಬುಡಮೇಲು ಮಾಡಿತ್ತು. ಆಗಿನಿಂದಲೂ ಚೀನಾ ವಿಶ್ವದ ಕೆಂಗಣ್ಣಿಗೆ ಗುರಿಯಾಗಿದೆ. ಅಲ್ಲದೇ ಟೆನಿಸ್ ತಾರೆ ಪೆಂಗ್ ಶುಯಿ ನಾಪತ್ತೆ ಪ್ರಕರಣದಿಂದಲೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಚೀನಾ ಟೀಕೆಗಳಿಗೆ ಗುರಿಯಾಗಿತ್ತು. ತನ್ನ ಪ್ರಜೆಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳನ್ನು ನಿರಾಕರಿಸುವ ಚೀನಾ ಒಲಿಂಪಿಕ್ ಕೂಟವನ್ನು ಕೈಬಿಡಬೇಕೆಂಬ ಆಗ್ರಹ ಕೇಳಿಬಂದಿತ್ತು. ಅದಕ್ಕಾಗಿ ಹಲವು ದೇಶಗಳು ಆಡಳಿತಾತ್ಮಕ ಬಹಿಷ್ಕಾರವನ್ನೂ ಘೋಷಿಸಿದವು.

ಆದರೆ ಇದಾವುದನ್ನೂ ಲೆಕ್ಕಿಸದ ಚೀನಾ ಚಳಿಗಾಲದ ಒಲಿಂಪಿಕ್ಸ್ ಆಯೋಜನೆಯನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿದೆ. ತನ್ನ ದೇಶದಲ್ಲಿ ದಿನನಿತ್ಯ ಹೆಚ್ಚಿನ ಪ್ರಮಾಣದಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿದ್ದರೂ ಕೂಟವನ್ನು ಸುರಕ್ಷಿತ ಮತ್ತು ಯಶಸ್ವಿಯಾಗಿ ನಡೆಸುವ ವಿಶ್ವಾಸ ವ್ಯಕ್ತಪಡಿಸಿದೆ.

ಲುಗ್

ಏನಿದು ಚಳಿಗಾಲದ ಒಲಿಂಪಿಕ್ಸ್?

ಬೇಸಿಗೆ ಒಲಿಂಪಿಕ್ಸ್‌ನಿಂದ ಪ್ರೇರಣೆಗೊಂಡು ಆರಂಭವಾದ ಅಂತರರಾಷ್ಟ್ರೀಯ ಕ್ರೀಡಾಕೂಟ ಚಳಿಗಾಲದ ಒಲಿಂಪಿಕ್ಸ್. 1901ರಲ್ಲಿ ನಾರ್ಡಿಕ್ ಗೇಮ್ಸ್‌ಗಳೇ ಚಳಿಗಾಲದ ಒಲಿಂಪಿಕ್ಸ್ ಆರಂಭವಾಗಲು ಕಾರಣವಾದವು. ಸ್ವೀಡನ್‌ನ ಕ್ರೀಡೆಯ ಪಿತಾಮಹ ವಿಕ್ಟರ್ ಬಾಲ್ಕ್ ಅವರು ನಾರ್ಡಿಕ್ ಗೇಮ್ಸ್‌ಗಳನ್ನು ಆರಂಭಿಸಲು ಕಾರಣರಾದ ಪ್ರಮುಖ ವ್ಯಕ್ತಿ. ಅವರು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆಯ (ಐಒಸಿ) ಸದಸ್ಯ ಮತ್ತು ಆಧುನಿಕ ಒಲಿಂಪಿಕ್ಸ್‌ನ ಪಿತಾಮಹ ಪಿಯರ್ ಡಿ ಕೊಬರ್ತಿ ಅವರ ಸ್ನೇಹಿತ ಕೂಡ ಆಗಿದ್ದರು. 1908ರ ಬೇಸಿಗೆ ಒಲಿಂಪಿಕ್ಸ್‌ನಲ್ಲಿ ಫಿಗರ್ ಸ್ಕೇಟಿಂಗ್ ಸೇರ್ಪಡೆಗೆ ಅವರು ಅವಿರತವಾಗಿ ಶ್ರಮಿಸಿದ್ದರು.

ನಾರ್ಡಿಕ್ ಗೇಮ್ಸ್‌ನಲ್ಲಿ ಹಿಮಚ್ಛಾದಿತ ಪ್ರದೇಶಗಳಲ್ಲಿ ಆಡುವ ಕ್ರೀಡೆಗಳನ್ನು ಆರಂಭಿಸಲಾಯಿತು. 1924ರಲ್ಲಿ ಫ್ರಾನ್ಸ್‌ನ ಶಮೊನಿ ಮೌಂಟ್ ಬ್ಲ್ಯಾಂಕ್‌ನಲ್ಲಿ ಮೊದಲ ಚಳಿಗಾಲದ ಒಲಿಂಪಿಕ್ಸ್ ನಡೆಯಿತು. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಕೂಟ ಆಯೋಜಿಸಲಾಗುತ್ತದೆ. ಎರಡನೇ ಮಹಾಯುದ್ಧದ ಕಾರಣಕ್ಕಾಗಿ 1940 ಮತ್ತು 1944ರಲ್ಲಿ ಕೂಟಗಳು ರದ್ದಾಗಿದ್ದವು. 1992ರವರೆಗೂ ಬೇಸಿಗೆ ಮತ್ತು ಚಳಿಗಾಲದ ಒಲಿಂಪಿಕ್ಸ್ ಕೂಟಗಳು ಒಂದೇ ವರ್ಷದಲ್ಲಿ ನಡೆಯುತ್ತಿದ್ದವು. ಆದರೆ, ಟೆಲಿವಿಜನ್ ಪ್ರವರ್ಧಮಾನಕ್ಕೆ ಬಂದಂತೆ ವಾಣಿಜ್ಯ ಲೆಕ್ಕಾಚಾರಗಳು ಆರಂಭವಾದವು. ಪ್ರಾಯೋಜಕತ್ವದ ಆದಾಯ ಗಳಿಕೆಯ ದಾರಿಗಳು ಹೆಚ್ಚಿದವು. ಇದರಿಂದಾಗಿ ಎರಡೂ ಒಲಿಂಪಿಕ್ಸ್‌ಗಳ ನಡುವೆ ಎರಡು ವರ್ಷಗಳ ಅಂತರ ಇಡಲಾಯಿತು.

ಗಾಲ್ವನ್ ಗಾಯಾಳುವಿಗೆ ಒಲಿಂಪಿಕ್ಸ್ ಜ್ಯೋತಿ

ಚಳಿಗಾಲದ ಒಲಿಂಪಿಕ್ಸ್‌ನ ಜ್ಯೋತಿ ಕೂಡ ವಿವಾದದ ಕೇಂದ್ರವಾಗಿದೆ. ಬುಧವಾರ ಇಲ್ಲಿ ನಡೆದ ಒಲಿಂಪಿಕ್ ಜ್ಯೋತಿ ರ‍್ಯಾಲಿಯಲ್ಲಿ, ಚೀನಾದ ಜ್ಯೋತಿಯನ್ನು ಚೀನಾ ಸೇನೆಯ ಸೈನಿಕ ಕಿ ಫಬಾ ಹೊತ್ತಿದ್ದರು. ಕಿ ಫಬಾ ಅವರು 2020ರಲ್ಲಿ ಗಾಲ್ವನ್ ಕಣಿವೆಯಲ್ಲಿ ಭಾರತೀಯ ಸೈನಿಕರ ಜತೆ ಸಂಘರ್ಷ ನಡೆಸಿದ ಚೀನಾ ಸೇನಾ ತುಕಡಿಯ ಕಮಾಂಡರ್ ಆಗಿದ್ದರು. ಆ ಘರ್ಷಣೆಯಲ್ಲಿ ಭಾರತದ 20 ಸೈನಿಕರು ಮೃತಪಟ್ಟಿದ್ದರು.

ಕಿ ಫಬಾ ಅವರು ಜ್ಯೋತಿ ಹೊರುವ ಬಗ್ಗೆ ಚೀನಾದ ಸರ್ಕಾರಿ ಸ್ವಾಮ್ಯದ ಪತ್ರಿಕೆ ಗ್ಲೋಬಲ್ ಟೈಮ್ಸ್ ಟ್ವೀಟ್ ಮಾಡಿತ್ತು. 'ಗಾಲ್ವನ್ ಕಣಿವೆಯಲ್ಲಿ ಭಾರತದ ಜತೆ ಸಂಘರ್ಷ ನಡೆಸಿದ್ದ ಪಿಎಲ್‌ಎ ತುಕಡಿಯ ಕಮಾಂಡರ್ ಕಿ ಫಬಾ ಅವರು ಚಳಿಗಾಲದ ಒಲಿಂಪಿಕ್ ಜ್ಯೋತಿಯನ್ನು ಹೊರಲಿದ್ದಾರೆ' ಎಂದು ಗ್ಲೋಬಲ್ ಟೈಮ್ಸ್ ಟ್ವೀಟ್ ಮಾಡಿತ್ತು.

ಭಾರತದ ಜತೆ ಸಂಘರ್ಷ ನಡೆಸಿದ ಸೈನಿಕನಿಗೆ ಒಲಿಂಪಿಕ್ ಜ್ಯೋತಿ ಹೊರಲು ಅವಕಾಶ ನೀಡಿದ್ದು ಮತ್ತು ಆ ವಿವರಗಳನ್ನು ಬಹಿರಂಗ ಮಾಡಿದ್ದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಭಾರತೀಯರು ಚೀನಾದ ಈ ನಡೆಯನ್ನು ಖಂಡಿಸಿದ್ದಾರೆ. ಅಮೆರಿಕದ ಸೆನೆಟ್‌ನ ವಿದೇಶಿ ಸಂಬಂಧಗಳ ಸಮಿತಿಯ ಸದಸ್ಯರು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಭಾರತದ ಸೈನಿಕರ ಮೇಲೆ ದಾಳಿ ನಡೆಸಿದ ಪಿಎಲ್‌ಎ ಸೈನಿಕನಿಗೆ ಒಲಿಂಪಿಕ್ ಜ್ಯೋತಿ ನೀಡಿರುವುದು ನಾಚಿಕೇಗೇಡು' ಎಂದು ಈ ಸಮಿತಿಯ ಸದಸ್ಯ ಜಿಮ್ ರಿಷ್ ಟ್ವೀಟ್ ಮಾಡಿದ್ದಾರೆ.

ಉದ್ಘಾಟನೆ, ಸಮಾರೋಪಕ್ಕೆ ಭಾರತ ಬಹಿಷ್ಕಾರ: ಚಳಿಗಾಲದ ಒಲಿಂಪಿಕ್ಸ್‌ನ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭವನ್ನು ಭಾರತ ಬಹಿಷ್ಕರಿಸಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತಿಳಿಸಿದೆ.

ಕಿ ಫಬಾ ಅವರಿಗೆ ಒಲಿಂಪಿಕ್ಸ್ ಜ್ಯೋತಿ ಹೊರಲು ಅವಕಾಶ ಕೊಟ್ಟಿದ್ದು ಇದಕ್ಕೆ ಕಾರಣ.

ಚೀನಾ ನಡೆಯನ್ನು ಖಂಡಿಸಿರುವ ಭಾರತದ ರಾಯಭಾರ ಕಚೇರಿಯು, ಕ್ರೀಡೆಯನ್ನು ರಾಜಕೀಯಗೊಳಿಸುತ್ತಿರುವುದು ವಿಷಾದನೀಯ ಎಂದು ಹೇಳಿದೆ. ಚಳಿಗಾಲದ ಒಲಿಂಪಿಕ್ಸ್‌ನ ಉದ್ಘಾಟನಾ ಹಾಗೂ ಸಮಾರೋಪ ಸಮಾರಂಭದಲ್ಲಿ ಭಾಗವಹಿಸದಿರಲು ನಿರ್ಧರಿಸಿದೆ.

ವಿಭಿನ್ನ ಆಟಗಳ ಸೊಬಗು

ಬೇಸಿಗೆ ಒಲಿಂಪಿಕ್ಸ್‌ಗಿಂತಲೂ ವಿಭಿನ್ನವಾದ ಕ್ರೀಡೆಗಳ ಸೊಬಗು ಇಲ್ಲಿ ಬಿಚ್ಚಿಕೊಳ್ಳುತ್ತದೆ. ಹಿಮಬಂಡೆಗಳು, ಕೊರಕಲು ಮತ್ತು ನುಣುಪಾದ ಹಿಮಹಾಸಿನ ಮೇಲೆ ಬಹುತೇಕ ಕ್ರೀಡೆಗಳು ನಡೆಯುತ್ತವೆ.

ಫಿಗರ್ ಸ್ಕೇಟಿಂಗ್

ಅಲ್ಪೈನ್ ಸ್ಕೀಯಿಂಗ್, ಬಯಥ್ಲಾನ್, ಬಾಬಸ್ಲೀಗ್, ಕ್ರಾಸ್ ಕಂಟ್ರಿ ಸ್ಕೀಯಿಂಗ್, ಕರ್ಲಿಂಗ್, ಫಿಗರ್ ಸ್ಕೇಟಿಂಗ್, ಫ್ರೀಸ್ಟೈಲ್ ಸ್ಕೇಟಿಂಗ್, ಐಸ್ ಹಾಕಿ, ಲುಗ್, ನಾರ್ಡಿಕ್ ಕಂಬೈನ್ಡ್, ಶಾರ್ಟ್ ಟ್ರ್ಯಾಕ್ ಸ್ಪೀಡ್ ಸ್ಕೇಟಿಂಗ್, ಸ್ಕೆಲಟನ್, ಸ್ಕೈ ಜಂಪಿಂಗ್, ಸ್ನೋಬೋರ್ಡಿಂಗ್, ಸ್ಪೀಡ್ ಸ್ಕೇಟಿಂಗ್ ಕ್ರೀಡೆಗಳು ಇಲ್ಲಿ ನಡೆಯುತ್ತವೆ.

ಬೇರೆ ಒಲಿಂಪಿಕ್ಸ್‌ಗಳ ಪದಕ ಪಟ್ಟಿಯಲ್ಲಿ ಸದಾ ಮೆರೆದಾಡುವ ಅಮೆರಿಕ ಮತ್ತು ಚೀನಾಗೆ ಇಲ್ಲಿ ಅಗ್ರಸ್ಥಾನವಿಲ್ಲ. ಇದುವರೆಗೆ ಒಟ್ಟು 368 ಪದಕಗಳನ್ನು ಗೆದ್ದಿರುವ ನಾರ್ವೆ ಮೊದಲ ಸ್ಥಾನದಲ್ಲಿದೆ. ಅಮೆರಿಕ (305), ಜರ್ಮನಿ (240) ರಷ್ಯಾ (194) ನಂತರದ ಸ್ಥಾನಗಳಲ್ಲಿವೆ. ಚೀನಾ (62) 17ನೇ ಸ್ಥಾನದಲ್ಲಿದೆ.

ಇಲ್ಲೂ ಇದೆ ರಾಜಕೀಯ

ಈ ಹಿಂದೆ ಒಲಿಂಪಿಕ್ಸ್‌ನಲ್ಲಿ ಅಮೆರಿಕ ಮತ್ತು ರಷ್ಯಾದ ಶೀತಲ ಸಮರ ಮತ್ತು ರಾಜಕೀಯದಾಟಗಳನ್ನು ಜಗತ್ತು ಕಂಡಿದೆ. ಅದೇ ರೀತಿ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಇಂತಹ ರಾಜಕೀಯ ಪ್ರಕರಣಗಳು ನಡೆದಿವೆ. ಈ ಬಾರಿಯೂ ಚೀನಾ ಅಂತಹ ಸನ್ನಿವೇಶಗಳನ್ನು ಎದುರಿಸುತ್ತಿದೆ. 2015ರಲ್ಲಿ ಐಒಸಿ ಬಿಡ್‌ನಲ್ಲಿ ಚೀನಾ ಚಳಿಗಾಲದ ಒಲಿಂಪಿಕ್ಸ್ ಆಯೋಜನೆ ಹಕ್ಕುಗಳನ್ನು ಗೆದ್ದುಕೊಂಡಿತ್ತು. 2008ರಲ್ಲಿ ಬೇಸಿಗೆ ಒಲಿಂಪಿಕ್ ಕೂಟವನ್ನು ಯಶಸ್ವಿಯಾಗಿ ನಡೆಸಿದ್ದ ಚೀನಾ ಈಗ ಅದೇ ನಗರದಲ್ಲಿ ಈ ಕೂಟವನ್ನು ನಡೆಸುತ್ತಿದೆ.

ಚೀನಾದಲ್ಲಿ ಈಗಾಗಲೇ ಕೆಲವು ಪ್ರಮುಖ ನಗರಗಳಲ್ಲಿ ಕೋವಿಡ್ ತಾರಕಕ್ಕೇರಿದೆ. ಲಾಕ್‌ಡೌನ್ ವಿಧಿಸಲಾಗಿದೆ. ಕಟ್ಟುನಿಟ್ಟಾದ ಬಯೋಬಬಲ್ ನಿಯಮವನ್ನೂ ಜಾರಿ ಮಾಡಲಾಗಿದೆ. ಇಷ್ಟೆಲ್ಲ ಪ್ರತಿಕೂಲ ಸಂಗತಿಗಳ ನಡುವೆಯೂ ಕೂಟವು ಯಶಸ್ವಿಯಾಗುವುದೇ ಎಂಬ ಕುತೂಹಲ ಮೂಡಿದೆ. ಜಗತ್ತಿನಲ್ಲಿ ಶಾಂತಿ, ಸಹೋದರತ್ವದ ಸಂದೇಶ ನೀಡುವ ಒಲಿಂಪಿಕ್ ರಾಜಕೀಯದಾಟದ ರಣಕಣವಾಗುವ ಆತಂಕವೂ ಕ್ರೀಡಾಪ್ರೇಮಿಗಳಲ್ಲಿದೆ.

ಆಧಾರ: ಗ್ಲೋಬಲ್ ಟೈಮ್ಸ್, ಬ್ರಿಟಾನಿಕಾ.ಕಾಂ, ಬಿಬಿಸಿ, ಪಿಟಿಐ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 36

ಉಪಚಾರದಿಂದ ಶಿವಪದ ಲಭ್ಯ

ಪ್ರಯಾಗದ ಋಷಿಮುನಿಗಳಿಗೆ ಶಿವಲಿಂಗ ಪ್ರತಿಷ್ಠಾಪಿಸುವುದು ಹೇಗೆಂಬುದನ್ನು ಸೂತಮುನಿ ತಿಳಿಸುವಾಗ ಪರಮಶಿವಪದ ಪಡೆಯುವ ಬಗೆ ಯನ್ನೂ ತಿಳಿಸುತ್ತಾನೆ. 'ಶಿವಲಿಂಗಪೀಠವು ಪಾರ್ವತೀ ಸ್ವರೂಪವಾದರೆ, ಪೀಠದ ಮೇಲಿನ ಶಿವಲಿಂಗವು ಜ್ಞಾನಸ್ವರೂಪನಾದ ಈಶ್ವರಸ್ವರೂಪವಾಗಿದೆ' ಎನ್ನುತ್ತಾನೆ. ಶಂಕರನು ಪಾರ್ವತೀದೇವಿಯನ್ನು ತನ್ನ ತೊಡೆಯಲ್ಲಿ ಸದಾ ಕೂರಿಸಿಕೊಂಡಿರುವಂತೆ, ಶಿವಲಿಂಗವೂ ತನ್ನ ಕೆಳಗಿನ ಪೀಠವನ್ನು ಸದಾ ಹೊಂದಿಕೊಂಡೇ ಇರುವುದು. ಅಂದರೆ ಲಿಂಗವು ಪೀಠ ಸಹಿತವಾಗಿಯೇ ಇರಬೇಕು. ಶಿವಧ್ವಜಗಳೊಂದಿಗೆ ಸಾಕ್ಷಾತ್ ಶಿವಲೋಕವನ್ನುಂಟುಮಾಡು ವಂತಹ ಮಹಾಲಿಂಗವನ್ನು ಪ್ರತಿಷ್ಠಾಪಿಸಿ, ಹದಿನಾರು ಉಪಚಾರಗಳಿಂದ ನಿತ್ಯವೂ ಯಥಾಶಕ್ತಿಯಿಂದ ಪೂಜಿಸಬೇಕು. ಹದಿನಾರು ಉಪಚಾರಗಳು ಯಾವುದೆಂದರೆ: ಆವಾಹನ, ಆಸನ, ಅರ್ಘ್ಯ, ಪಾದ್ಯ, ಆಚಮನ, ಸ್ನಾನ, ವಸ್ತ್ರ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ನೀರಾಜನ, ತಾಂಬೂಲ, ನಮಸ್ಕಾರ, ವಿಸರ್ಜನ.

ಇದಲ್ಲದಿದ್ದರೆ ಅರ್ಘ್ಯ ಮೊದಲಾದ ನೈವೇದ್ಯದವರೆಗೆ ವಿಧಿವತ್ತಾಗಿ ಯಥಾಶಕ್ತಿಯಾಗಿ ಮಾಡಿದರೆ ಶಿವಪದವು ಲಭಿಸುವುದು. ಜನಸಾಮಾನ್ಯರು, ಋಷಿಗಳು, ದೇವತೆಗಳು ಪ್ರತಿಷ್ಠಾಪಿಸಿರುವ ಮತ್ತು ತಾನಾಗಿಯೇ ಉದ್ಭವಿಸಿದಂತಹ ಲಿಂಗದಲ್ಲಿ ಸಕಲ ಉಪಚಾರಗಳೊಡನೆ ಪೂಜಾಸಾಮಗ್ರಿಯನ್ನರ್ಪಿಸಿ ಪ್ರದಕ್ಷಿಣ ಮತ್ತು ನಮಸ್ಕಾರಗಳನ್ನು ಮಾಡಿದರೆ ಅಥವಾ ನಿತ್ಯವೂ ನಿಯಮದಿಂದ ಶಿವಲಿಂಗವನ್ನು ದರ್ಶನಮಾಡಿದರೂ ಶಿವಪದ ಲಭಿಸುವುದು. ಮಣ್ಣು, ಹಿಟ್ಟು, ಗೋಮಯ ಮತ್ತು ಪುಷ್ಪಗಳಿಂದ ಅಥವಾ ಕರವೀರ ಗನ್ನೇರಳೆ ಪುಷ್ಪ, ಫಲಗಳು, ಬೆಲ್ಲ, ಬೆಣ್ಣೆ, ಭಸ್ಮ, ಅನ್ನಗಳಿಂದ ತನ್ನಿಷ್ಟದಂತೆ ಶಿವಲಿಂಗವನ್ನು ಮಾಡಿ, ಆಯಾಯ ಲಿಂಗಕ್ಕನುಸಾರವಾಗಿ ಪೂಜೆಯನ್ನು ಮಾಡಬೇಕು.

ಕೆಲವರು ಅಂಗುಷ್ಠ(ಹೆಬ್ಬೆರಳು)ದಲ್ಲೂ ಶಿವಪೂಜೆಯನ್ನು ಮಾಡಬಹುದು. ಲಿಂಗವನ್ನು ಮಾಡಲು ಯಾವ ವಸ್ತುವಿಗೂ ನಿಷೇಧವಿಲ್ಲ. ಎಲ್ಲದರಲ್ಲೂ ಶಿವಪೂಜೆಗೆ ಅನುಸಾರವಾಗಿ ಫಲವನ್ನು ಶಿವನೇ ಕೊಡುವನು. ಶಿವಲಿಂಗವನ್ನಾಗಲೀ ಅದರ ಬೆಲೆಯನ್ನಾಗಲೀ ಶಿವಭಕ್ತನಿಗೆ ಶ್ರದ್ಧೆಯಿಂದ ದಾನಮಾಡಿದರೆ ಶಿವಪದವು ದೊರೆಯುವುದು. ಇದಾಗದಿದ್ದರೆ ನಿತ್ಯವೂ ಓಂಕಾರವನ್ನು ಹತ್ತು ಸಾವಿರ ಬಾರಿ ಜಪಿಸಬೇಕು, ಅಥವಾ ಎರಡು ಸಂಧ್ಯಾಕಾಲಗಳಲ್ಲಿಯೂ ಸಾವಿರ ಬಾರಿ ಜಪಿಸಿದರೂ ಶಿವಪದ ಲಭಿಸುವುದು.

ಜಪಕಾಲದಲ್ಲಿ ಓಂಕಾರವನ್ನು ಉಚ್ಚರಿಸಿದರೆ ಮನಶ್ಶುದ್ಧಿಯಾವುದು. ಸಮಾಧಿಸ್ಥಿತಿಯಲ್ಲಿರುವಾಗ ಮನಸ್ಸಿನಲ್ಲಿಯೇ ಓಂಕಾರವನ್ನು ಪಠಿಸಬೇಕು. ಮಿಕ್ಕ ಕಾಲಗಳಲ್ಲಿ ಇನ್ನೊಬ್ಬರಿಗೆ ಕೇಳಿಸದಂತೆ ಮೆಲ್ಲಗೆ ಉಚ್ಚರಿಸಬೇಕು. ಬಿಂದು ಮತ್ತು ನಾದಗಳೊಡನೆ ಗಟ್ಟಿಯಾಗಿ ಓಂಕಾರವನ್ನು ಉಚ್ಚರಿಸಿದಂತೆಯೇ ಫಲವು ಲಭಿಸುವುದು. ಅಲ್ಲದೆ 'ಓಂ ನಮಃ ಶಿವಾಯ' ಎಂಬ ಪಂಚಾಕ್ಷರಮಂತ್ರವನ್ನು ನಿತ್ಯವೂ ಹತ್ತು ಸಾವಿರ ಬಾರಿ ಜಪಿಸಬೇಕು. ಆದಿಯಲ್ಲಿ ಓಂಕಾರದಿಂದ ಕೂಡಿದ ಪಂಚಾಕ್ಷರಮಂತ್ರವು ಯುಕ್ತವಾದುದು. ಮಂತ್ರವನ್ನು ದೀಕ್ಷಾಪೂರ್ವಕವಾಗಿ ಗುರುಗಳಿಂದ ಉಪದೇಶ ತೆಗೆದುಕೊಳ್ಳಬೇಕು. ಕಲಶಸ್ನಾನ, ಮಂತ್ರದೀಕ್ಷೆ, ಮಾತೃಕಾಸ್ನಾನಗಳನ್ನೂ ಮಾಡಬೇಕು. ಸತ್ಯವಂತನೂ ಪರಿಶುದ್ಧನೂ ಜ್ಞಾನಿಯೂ ಆದಂತಹ ಗುರುವೇ ಉತ್ತಮ ನಾದವ. ಅಂತಹವರನ್ನೇ ಗುರುವಾಗಿ ಮಾಡಿಕೊಳ್ಳಬೇಕು.

ಆಚಾರವಂತರು ಪಂಚಾಕ್ಷರಮಂತ್ರದ 'ನಮಃ' ಪದವನ್ನು ಮೊದಲು ಉಚ್ಚರಿಸಬೇಕು. ಮಿಕ್ಕವರು ಕೊನೆಯಲ್ಲಿ ಉಚ್ಚರಿಸಿ ಜಪಿಸಬೇಕು. ಸ್ತ್ರೀಯರು 'ನಮಃ' ಪದವನ್ನು ಕೊನೆಯಲ್ಲಿ ಉಚ್ಚರಿಸಿ ಪಂಚಾಕ್ಷರ ಮಂತ್ರವನ್ನು ಜಪಿಸಬ ಹುದು ಎಂದು ಕೆಲವರು ಹೇಳಿದರೆ, ಇನ್ನೂ ಕೆಲವರು 'ನಮಃ' ಪದವನ್ನು ಮೊದಲಲ್ಲಿಯೇ ಉಚ್ಚರಿಸಬೇಕೆಂದು ಹೇಳಿದ್ದಾರೆ. ಅಂದರೆ, ಆಚಾರವಂತರು 'ಓಂ ನಮಃ ಶಿವಾಯ' ಅಂತ, ಸಾಮಾನ್ಯರು 'ಓಂ ಶಿವಾಯ ನಮಃ' ಅಂತ ಉಚ್ಚರಿಸಬೇಕು. ಮೊದಲಿಗೆ 'ನಮಃ' ಬರುವ 'ನಮಃ ಶಿವಾಯ' ಎಂಬ ಪಂಚಾಕ್ಷರೀಮಂತ್ರವು ಶ್ರುತಿಪ್ರತಿಪಾದ್ಯವಾದುದು. ಇದು ಎಲ್ಲಕ್ಕಿಂತ ಶ್ರೇಷ್ಠವಾದುದು ಎಂದು ತೈತ್ತರೀಯ ಸಂಹಿತೆ 4-5-8ರಲ್ಲಿ ಹೇಳಲಾಗಿದೆ. ಐದುಕೋಟಿ ಪಂಚಾಕ್ಷರೀಜಪ ಮಾಡಿದರೆ ಸದಾಶಿವನ ಸಮಾನತೆ ಲಭಿಸುವುದು. ಒಂದು, ಎರಡು, ಮೂರು ಕೋಟಿ ಜಪ ಮಾಡಿದರೆ ಬ್ರಹ್ಮ ಮೊದಲಾದ ದೇವರ ಪದವನ್ನು ಪಡೆಯುವರು. ಲಕ್ಷ ಜಪ ಮಾಡಿದರೆ ಶಿವಪದವನ್ನು ಪಡೆವರು. ಹೀಗೆ ಒಂದೊಂದು ಅಕ್ಷರಗಳಿಗೆ ಬೇರೆ ಬೇರೆ ಪದವಿಗಳಿವೆ ಎಂದು ಸೂತಮುನಿ ತಿಳಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಿಳೆಯೊಬ್ಬರು ಹಲವರ ಜೊತೆ ಜಗಳ ಮತ್ತು ಹೊಡೆದಾಟದಲ್ಲಿ ಪಾಲ್ಗೊಂಡಿರುವ ವಿಡಿಯೊವೊಂದು ವೈರಲ್ ಆಗಿದೆ. ಈ ಘಟನೆ ಮಧ್ಯಪ್ರದೇಶದಲ್ಲಿ ಗಣರಾಜ್ಯೋತ್ಸವದಂದು ನಡೆದಿದೆ. ಧ್ವಜಾರೋಹಣ ಮಾಡುವುದನ್ನು ಮತ್ತು ಭಾರತ ಮಾತೆಯ ಚಿತ್ರಕ್ಕೆ ಪೂಜೆ ಸಲ್ಲಿಸುವುದನ್ನು ತಡೆಯಲು ಮುಸ್ಲಿಂ ಮಹಿಳೆಯೊಬ್ಬರು ಪ್ರಯತ್ನಿಸಿರುವ ವಿಡಿಯೊ ಇದು ಎಂದು ಹೇಳಲಾಗಿದೆ. ಭಾರತ ಮಾತೆಯ ಭಾವಚಿತ್ರವನ್ನು ಬೇರೊಬ್ಬರ ಕೈಯಿಂದ ಕಸಿದುಕೊಂಡು ಮಹಿಳೆ ವಿರೋಧ ವ್ಯಕ್ತಪಡಿಸಿದ್ದಾಗಿ ಹೇಳಲಾಗಿದೆ.

ವಿಡಿಯೊದಲ್ಲಿ ಸೆರೆ ಆಗಿರುವ ಮಹಿಳೆ ಮುಸ್ಲಿಂ ಅಲ್ಲ. ಅವರು ಪಂಜಾಬಿ ಹಿಂದೂ ಮತ್ತು ಅವರ ಕೈಯಲ್ಲಿ ಇರುವುದು ಭಾರತ ಮಾತೆಯ ಚಿತ್ರವಲ್ಲ ಎಂದು ಆಲ್ಟ್ ನ್ಯೂಸ್ ವೇದಿಕೆ ವರದಿ ಮಾಡಿದೆ. ಈ ಘಟನೆ ಮಹಾರಾಷ್ಟ್ರದ ಠಾಣೆಯಲ್ಲಿ ಜ.26ರಂದು ನಡೆದಿದೆ. ಮಹಿಳೆಯ ಬಳಿಯಿದ್ದ ಚಿತ್ರವನ್ನು ಕೊಡುವಂತೆ ಅಲ್ಲಿದ್ದ ವ್ಯಕ್ತಿಯೊಬ್ಬರು ಕೇಳಿದಾಗ, ಇದು ಮಾತಾ ರಾಣಿಯ ಚಿತ್ರ ಪುರುಷರ ಕೈಗೆ ಕೊಡಲಾಗುವುದಿಲ್ಲ ಎಂದು ಮಹಿಳೆ ಹೇಳಿದ್ದಾರೆ. ಬಳಿಕ ಇದು ಗುಂಪು ಸಂಘರ್ಷಕ್ಕೆ ಕಾರಣವಾಗಿದೆ. ಈ ಘಟನೆಗೆ ಕೋಮು ಬಣ್ಣ ಬಳಿಯುತ್ತಿರುವುದು ಆತಂಕಕಾರಿ ಆಗಿದೆ ಎಂದು ಅಲ್ಲಿಯ ಪೊಲೀಸರು ಹೇಳಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಅನಂತಸತ್ವದ ಊಟೆ

ಶಕ್ತಿಮೀರ್ದ ಪರೀಕ್ಷೆಗಳನು ವಿಧಿ ನಿಯಮಿಸಿರೆ |
ಯುಕ್ತಿಮೀರ್ದ ಪ್ರಶ್ನೆಗಳನು ಕೇಳುತಿರೆ ||
ಚಿತ್ತವನು ತಿರುಗಿಸೊಳಗಡೆ; ನೋಡು, ನೋಡಲ್ಲಿ |
ಸತ್ತ್ವದಚ್ಛಿನ್ನಝುರಿ – ಮಂಕುತಿಮ್ಮ || 556 ||

ಪದ-ಅರ್ಥ: ಶಕ್ತಿಮೀರ್ದ = ಶಕ್ತಿಯನ್ನು ಮೀರಿದ, ಯುಕ್ತಿಮೀರ್ದ = ಯುಕ್ತಿಯನ್ನು + ಮೀರಿದ, ತಿರುಗಿಸೊಳಗಡೆ = ತಿರುಗಿಸು + ಒಳಗಡೆ, ಸತ್ತ್ವದಚ್ಛಿನ್ನಝುರಿ = ಸತ್ವದ(ಆತ್ಮಸತ್ವದ) + ಅಚ್ಛಿನ್ನ(ಅವಿಚ್ಛಿನ್ನವಾದ) + ಝುರಿ(ನೀರಿನ ಒರತೆ).

ವಾಚ್ಯಾರ್ಥ: ವಿಧಿ ನಿನ್ನ ಶಕ್ತಿಯನ್ನು ಮೀರಿದ ಪರೀಕ್ಷೆಗಳನ್ನು ಒಡ್ಡಿದಾಗ, ನಿನ್ನ ಯುಕ್ತಿಯ ಮಿತಿಗಳನ್ನು ಮೀರಿದ ಪ್ರಶ್ನೆಗಳನ್ನು ಕೇಳಿದಾಗ, ಚಿತ್ತವನ್ನು ಒಳಗಡೆ ತಿರುಗಿಸು. ಅಲ್ಲಿ ನೋಡು ಆತ್ಮಸತ್ವದ ನಿರಂತರವಾದ ಊಟೆ ಇದೆ.

ವಿವರಣೆ: ಬದುಕಿನಲ್ಲಿ ಕೆಲವೊಮ್ಮೆ ಪರೀಕ್ಷೆಯ ಕ್ಷಣಗಳು ಬರುತ್ತವೆ. ಅವು ನಮ್ಮನ್ನು ಅರೆದು ಶಕ್ತಿ ಪರೀಕ್ಷೆ ಮಾಡುತ್ತವೆ. ನಮ್ಮ ಶಕ್ತಿಯ ಮಿತಿಗಳನ್ನು ಮೀರುತ್ತವೆ. ಆಗ ವ್ಯಕ್ತಿಗೆ ತಡೆದುಕೊಳ್ಳುವುದು ಅಸಾಧ್ಯವಾಗುತ್ತದೆ. ಅದೇ ರೀತಿ ವಿಧಿ ನಮ್ಮ ಯುಕ್ತಿಗಳನ್ನು ಮೀರಿದ ಪ್ರಶ್ನೆಗಳನ್ನು ಕೇಳಿದಾಗ ಉತ್ತರರಹಿತರಾಗುತ್ತೇವೆ. ಆಗ ದಿಕ್ಕು ತೋರದಂತಾಗುತ್ತದೆ. ಆ ಸ್ಥಿತಿಯಲ್ಲಿ ತೆಗೆದುಕೊಂಡ ತೀರ್ಮಾನಗಳು ಬಹುಪಾಲು ತಪ್ಪಾಗುವ ಸಾಧ್ಯತೆ ಇರುತ್ತದೆ. ಆಗ ಏನು ಮಾಡಬೇಕು?

ಮೂರು ದಶಕಗಳಿಗೂ ಮಿಗಿಲಾಗಿ, ಯಾವ ಅಪೇಕ್ಷೆಯೂ ಇಲ್ಲದೆ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ ಗಾಂಧೀಜಿಯವರಿಗೆ ಶಕ್ತಿ ಮೀರಿದ ಪರೀಕ್ಷೆಗಳು, ಯುಕ್ತಿಯನ್ನು ಮೀರಿದ ಪ್ರಶ್ನೆಗಳು ಬಂದವು. ಅವರ ಕನಸಿನ ಭಾರತ ಎರಡು ತುಂಡಾಗಿತ್ತು. ಶತಮಾನಗಳ ಕಾಲ ನೆರೆಹೊರೆಯವರಾಗಿ ಬದುಕಿದವರು ದಾಯಾದಿಗಳಂತೆ ಕಾದಾಡಿ ರಕ್ತಪಿಪಾಸುಗಳಾಗಿದ್ದರು. ಕಲಕತ್ತೆಯಲ್ಲಿ ಮಾರಣ ಹೋಮ ನಡೆದಿತ್ತು. ಅವರು ನೆನೆಸಿದಂತೆ ಅಖಂಡ ಭಾರತ ದೊರೆತಿರಲಿಲ್ಲ. ಅವರ ಚಿಂತನೆಯ ಆದರ್ಶವಾದ ಹಿಂದೂ-ಮುಸ್ಲಿಂ ಐಕ್ಯಮತ್ಯ ಕೂಡ ಬಿರುಕು ಬಿಟ್ಟಿತ್ತು. ಆಗ ಗಾಂಧೀಜಿ ಮಾಡಿದ್ದು, ತನ್ನ ಅಂತ:ಸಾಕ್ಷಿಯನ್ನು ಕೇಳಿದ್ದು. ಹೊರಗಡೆಗೆ ಬರೀ ಪ್ರಶ್ನೆಗಳು, ಉತ್ತರಗಳಿಲ್ಲ. ದ್ವೇಷದ ಜ್ವಾಲೆ ಉರಿಯುತ್ತಿತ್ತು. ಆಗ ಗಾಂಧೀ ಹೇಳುತ್ತಾರೆ, "ದ್ವೇಷವನ್ನು ಅಡಗಿಸಲು ಖಡ್ಗವನ್ನು ಬಳಸುವುದು ಸರಿಯಲ್ಲ. ಹಾಗಾದರೆ ನಾನು ಇನ್ನಾವ ಆಯುಧವನ್ನು ಬಳಸಲಿ? ನನ್ನ ಬಳಿ ಇರುವುದು ಕೇವಲ ಅಹಿಂಸೆಯ ಆಯುಧ. ಅದು ಉಪವಾಸ. ನನ್ನ ಬಳಿ ದಿನವಹಿ ಹಿಂದೂ ಮತ್ತು ಮುಸ್ಲಿಂ ಸ್ನೇಹಿತರು ಬಂದು ಮುಂದಿನ ಕರ್ತವ್ಯವೇನು ಎಂದು ಕೇಳುತ್ತಿದ್ದಾರೆ. ಮೂರು-ನಾಲ್ಕು ದಿನಗಳಿಂದ ನಾನು ದಾರಿಯನ್ನು ಮನಸ್ಸಿನಲ್ಲಿಯೇ ಹುಡುಕುತ್ತಿದ್ದೆ. ಕಡೆಗೆ ನನಗೆ ಪರಿಹಾರ ದೊರೆತದ್ದು ನನ್ನ ಅಂತ:ಸಾಕ್ಷಿಯಲ್ಲಿಯೇ. ಇಬ್ಬರ ಮನಸ್ಸುಗಳೂ ಹೊಂದುವವರೆಗೆ ಉಪವಾಸಮಾಡುತ್ತೇನೆ. ಶುದ್ಧವಾದ ಮನುಷ್ಯ ತನ್ನ ಜೀವಕ್ಕಿಂತ ಹೆಚ್ಚಿನದೇನನ್ನು ತ್ಯಾಗ ಮಾಡಬಲ್ಲ?" ಅವರಿಗೆ ಪರಿಹಾರ ಕಂಡದ್ದು ವೈಸರಾಯ್ ಅವರಲ್ಲಿ ಅಲ್ಲ, ನೆಹರೂ, ಪಟೇಲ್‌ರಲ್ಲಲ್ಲ. ಎಲ್ಲವನ್ನೂ ತೊರೆದು ಅಂತರ್ಯಾದಲ್ಲಿ ಆತ್ಮಸತ್ವವನ್ನು ಕಂಡಾಗ, ಎಲ್ಲವನ್ನೂ ಅತೀತವಾಗಿ ನೋಡುವ ಶಕ್ತಿ ಬರುತ್ತದೆ.

ನಾರದನೂ ಸುಖವನ್ನು ಬಯಸಿದ್ದ. ಜಗತ್ತೆಲ್ಲವನ್ನೂ ಸುತ್ತಿದವ, ಏನೆಲ್ಲ ಕಂಡವ. ಅವನಿಗೆ ಆನಂದದ ಅನುಭೂತಿ ಆಗಿರಲಿಲ್ಲ. ಆಗ ಸನತ್ಕುಮಾರ ಹೇಳುತ್ತಾನೆ, "ನಾಲ್ಪೇ ಸುಖಮಸ್ತಿ ಯೋ ವೈ ಭೂಮಾ ತತ್ ಸುಖಂ". ಹೊರಗಿರುವುದೆಲ್ಲವೂ ಸಣ್ಣದು. ಅದರಲ್ಲಿ ಸುಖವಿಲ್ಲ. ಒಳಗೆ ಅನಂತದಲ್ಲಿ ಸುಖವಿದೆ. 'ಭೂಮಾ' ಎಂದರೆ ಅನಂತವಾದದ್ದು. ನಮ್ಮ ಆತ್ಮದಲ್ಲಿ 'ಭೂಮಾ' ಇದೆ. ಅಲ್ಲಿ ಮೋಹವಿಲ್ಲ, ದ್ವಂದ್ವವಿಲ್ಲ. ಹೊರಗಿನ ದ್ವಂದ್ವಗಳಿಗೆ, ಪ್ರಶ್ನೆಗಳಿಗೆ ಭೂಮಾದಲ್ಲಿ ಉತ್ತರ. ಯಾಕೆಂದರೆ ಅಲ್ಲಿ ಮೋಹದ ಜಾಲವಿಲ್ಲ. ಮೋಹ ಬಿಗಿದಷ್ಟು ಪರೀಕ್ಷೆಗಳು, ಪ್ರಶ್ನೆಗಳು ಕಷ್ಟವಾಗುತ್ತವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಫೆಬ್ರುವರಿ 4, 2022

ಶ್ರೀಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮಕರ ಮಾಸದ 21 ನೇ ದಿನ
ತಿಥಿ: (ಮಾಘ ಶುಕ್ಲ) ಚತುರ್ಥಿ ಗಂ. 27-48 **ನಕ್ಷತ್ರ:** ಪೂರ್ವಾಭಾದ್ರಾ ಗಂ. 15-58 **ಯೋಗ:** ಶಿವ ಗಂ. 19-09, **ಕರಣ:** ವಣಿಜ ಗಂ. 16-07.
ರಾಹುಕಾಲ: ಬೆಳಿಗ್ಗೆ 10:30–12:00
ಸೂರ್ಯೋದಯ: 07-00 **ಸೂರ್ಯಾಸ್ತ:** 06-29 **ಮುಸ್ಲಿಂ ದಿನಾಂಕ:** 02 ರಜಬ್
ದಿನ ವಿಶೇಷ: ತಿಲ ಚತುರ್ಥಿ, ಕುಂದ ಚತುರ್ಥಿ, ವರದ ಚತುರ್ಥಿ, ಗಣೇಶ ಪೂಜೆ (ಬಂಗಾಳ)
ಅದೃಷ್ಟ ಸಂಖ್ಯೆ: 3, 11

ಮೇಷ: ಈ ದಿನ ಧನಾಗಮನ ಹೆಚ್ಚಿದ್ದರೂ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ. ಕೌಟುಂಬಿಕವಾದ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿ ಹೊಂದಿಯಾವು.

ವೃಷಭ: ಪಾರಂಪರಿಕ ವೃತ್ತಿಯನ್ನು ಮುಂದುವರಿಸುವವರಿಗೆ ಶುಭಫಲ ಪ್ರಾಪ್ತಿಯಾಗುವುದು. ರಾಜಕೀಯ ವಿದ್ಯಮಾನಗಳಿಂದಾಗಿ ಓಡಾಟ ಅಧಿಕಗೊಳ್ಳುವುದು.

ಮಿಥುನ: ಕಾರ್ಯದೊತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದು ಅನಿವಾರ್ಯವಾಗಲಿದೆ. ಯಾವುದೇ ಹೊಸ ಉದ್ಯೋಗ ಒಪ್ಪಿಕೊಳ್ಳುವಾಗ ತಾಳ್ಮೆಯಿಂದ ಮತ್ತು ಜಾಣತನದಿಂದ ಒಪ್ಪಿಕೊಳ್ಳಿ.

ಕರ್ಕಾಟಕ: ಕೆಲಸ ಕಾರ್ಯಗಳಲ್ಲಿ ಅತಿ ಹೆಚ್ಚಿನ ಉತ್ಸಾಹವನ್ನು ಕಾಣುವಿರಿ. ಉದ್ಯೋಗದಲ್ಲಿ ಯಾವುದೇ ರೀತಿಯ ಒತ್ತಡಗಳಿಗೆ ಸಿಲುಕ ಬೇಡಿ. ಗುಣಾತ್ಮಕ ಕಾರ್ಯಗಳಿಗೆ ಮಹತ್ವ ನೀಡಬಹುದು.

ಸಿಂಹ: ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣಿತಿ ಪಡೆದುಕೊಳ್ಳುವಿರಿ. ಸಾಮಾಜಿಕ ಕ್ಷೇತ್ರದಲ್ಲಿ ಮನ್ನಣೆ ಹೆಚ್ಚಲಿದೆ. ದೈವಾನುಗ್ರಹದಿಂದ ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿಯೂ ಇಷ್ಟಾರ್ಥ ಸಿದ್ಧಿಸುವುದು.

ಕನ್ಯಾ: ಕಾರ್ಯ ಪ್ರಗತಿಯಲ್ಲಿ ಆಗಾಗ ತೋರಿ ಬರುತ್ತಿದ್ದ ಅಡ್ಡಿ ಆತಂಕಗಳು ದೂರಾಗಲಿವೆ. ನಿಮ್ಮ ಇಷ್ಟದ ಪ್ರಕಾರವೇ ನಿಮ್ಮ ಎಲ್ಲಾ ಕಾರ್ಯಗಳೂ ನಡೆಯುವ ಕಾಲ ಈ ದಿನವಾಗಿದೆ.

ತುಲಾ: ಮೇಲಾಧಿಕಾರಿಯ ಮೃದು ವರ್ತನೆಯಿಂದ ನಿಮಗೆ ಸರ್ಕಾರದ ಕೆಲಸ ಕಾರ್ಯಗಳಲ್ಲಿ ತೃಪ್ತಿಯುಂಟಾಗುವುದು. ಇಂಟೀರಿಯರ್ ಡೆಕೊರೇಟರ್ಸ್‌ಗಳಿಗೆ ಅಧಿಕ ವರಮಾನ ಇರುವುದು.

ವೃಶ್ಚಿಕ: ಪಾಲುದಾರಿಕೆ ಮತ್ತು ಸಹಭಾಗಿತ್ವದ ವ್ಯವಹಾರಗಳಿಂದ ಉತ್ತಮ ವರಮಾನ ಪಡೆದುಕೊಳ್ಳುವಿರಿ. ಸಂಸಾರದಲ್ಲಿ ನೆಮ್ಮದಿಯ ಜೀವನವಿರುವುದು.

ಧನು: ವ್ಯವಹಾರದ ವಿಷಯಗಳಿಂದಾಗಿ ಬಿಡುವಿಲ್ಲದ ಕೆಲಸಗಳು. ಬರವಣಿಗೆಗಳಿಂದ ವರಮಾನ ಹೆಚ್ಚಲಿದೆ. ಭೂ ವ್ಯವಹಾರಗಳು ಲಾಭದಾಯಕವೆನಿಸುವುದು. ಸಂಘ ಸಂಸ್ಥೆಗಳಲ್ಲಿ ಸ್ಥಾನ ಮಾನಗಳು ದೊರೆಯಲಿದೆ.

ಮಕರ: ಆಪ್ತರ ಮನೆಯಲ್ಲಿನ ನಡೆಯುವ ಸಮಾರಂಭಗಳಿಗಾಗಿ ನಿಮ್ಮ ಜವಾಬ್ದಾರಿ, ಓಡಾಟ ಹೆಚ್ಚಲಿದೆ. ವ್ಯವಹಾರದಲ್ಲಿ ಉತ್ತಮ ಲಾಭವಿರುವುದು. ರೇಷ್ಮೇ ಬೆಳೆಗಾರರಿಗೆ ಉತ್ತಮ ಆದಾಯ ಪ್ರಾಪ್ತಿಯಾಗಲಿದೆ.

ಕುಂಭ: ಸ್ವಂತ ಉದ್ಯೋಗಸ್ಥರಿಗೆ ಬಿಡುವಿಲ್ಲದೆ ಕೆಲಸಗಳು ಪೂರ್ತಿಗೊಳಿಸಬೇಕಾದ ಸಂದರ್ಭ ಎದುರಾಗುವುದು. ಸಿದ್ಧ ಉಡುಪುಗಳ ರಫ್ತು ವ್ಯಾಪಾರದಿಂದ ಹೇರಳ ಲಾಭ ಸಿಗುತ್ತದೆ.

ಮೀನ: ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡಬೇಡಿ. ಮನೆಯಲ್ಲಿ ಹಣಕಾಸಿನ ವಿಷಯದಲ್ಲಿ ಚರ್ಚೆ ನಡೆಸುವಿರಿ. ವ್ಯವಹಾರದಲ್ಲಿನ ಹೊಸ ವಿಷಯಗಳನ್ನು ತಿಳಿದುಕೊಂಡು ಹೆಚ್ಚು ಆದಾಯವನ್ನು ಹೊಂದುವಿರಿ.

ಪದಬಂಧ 4859

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮನದೊಳಗೇ ನಾಶ ಮಾಡುವುದು! (3)
6.ಹಲ್ಲುಗಳನ್ನು ತೊಳೆಯುವುದು (5)
7.ನೀರಿನಲ್ಲಿ ಹುಟ್ಟುವುದು (3)
10.ಈತ ಮಂದಿಗೆಲ್ಲಾ ಬೇಕಾದವನು (5)
15.ದುಃಖ ಈ ವಿಧವಾಗಿ ಬಂದಿದೆ (3)
16.ವಾದವನ್ನು ಮಂಡಿಸುವ ಕ್ರಮ (5)
17.ಜೇನು ತುಪ್ಪ ಇಲ್ಲಿದೆ (3)

ಮೇಲಿಂದ ಕೆಳಕ್ಕೆ
1.ಬಟ್ಟೆಗಳನ್ನು ಮಡಿ ಮಾಡುವವನು (4)
2.ಭೀಷ್ಮನ ಇನ್ನೊಂದು ಹೆಸರು (3)
3.ದಂಪತಿಗಳು ಹಬ್ಬಿಸಿದ ಗಾಳಿ ಸುದ್ದಿ! (3)
4.ಈತ ಬುದ್ಧಿವಂತ (3)
5.ಸಸ್ಯಗಳಿಂದ ತೆಗೆದ ಜಿಡ್ಡು (4)
8.ನಾದಿನಿ ಹಾಕಿರುವ ಅಡಿಪಾಯ (3)
9.ಗುಣಿಯೊಳಗಿರುವ ಥಾಲು (3)
11.ಆಹಾರವನ್ನು ಸೇವಿಸದಿರುವುದು (4)
12.ಕೊಬ್ಬಿದ ಆನೆ (4)
13.ಹೆಪ್ಪಾದ ಹಾಲು (3)
14.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
15.ರೀತಿ ಅಥವಾ ನಿಬಂಧನೆ (3)



4858ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುವಾದ 3.ಹಸುಗೂಸು 5.ರಮಿಸು 7.ಮಾನ 8.ನೆಪ 11.ಗರ 13.ಮಾಯ 14.ಕಡಿತ 16.ಕರ್ಮಾಂತರ 17.ಮನೋಹರ
ಮೇಲಿಂದ ಕೆಳಕ್ಕೆ: 1.ಅರಮನೆ 2.ದರ 3.ಹಸು 4.ಸುದಿನ 6.ಮೆದುಳು 7.ಮಾವಟಿಗ 9.ಪರಿಚಯ 10.ತಕ್ಕಡಿ 12.ಭಾನುವಾರ 13.ಮಾದಕ 14.ಕರ 15.ತಮ

ಸುಡೊಕು 5245

9		7					5	
			4		9	8		7
5		8					6	
		6	5			7		9
7				6	1		4	
	5		8			3		6
			3			4		2
	9							
6		4		9	5	1		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5244 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಪ್ರಶ್ನೆಗಳು • ವಿದ್ಯಾರ್ಥಿಗಳಿಗೆ ಅನುಕೂಲ

ದ್ವಿತೀಯ ಪಿಯು ಪ್ರಶ್ನೆಪತ್ರಿಕೆ: 'ಆಯ್ಕೆ'ಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣ ಪ್ರಸಕ್ತ ಶೈಕ್ಷಣಿಕ (2021–22) ಸಾಲಿನಲ್ಲಿ ದ್ವಿತೀಯ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯಲ್ಲಿ ಕನ್ನಡ ಭಾಷಾ ವಿಷಯ ಸೇರಿದಂತೆ, ಐಚ್ಛಿಕ (ಕೋರ್) ವಿಷಯಗಳ ಪ್ರಶ್ನೆಪತ್ರಿಕೆಗಳಲ್ಲಿ ಹೆಚ್ಚುವರಿ ಪ್ರಶ್ನೆಗಳನ್ನು ನೀಡುವ ಮೂಲಕ 'ಹೆಚ್ಚಿನ ಆಯ್ಕೆ'ಗೆ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಗೊತ್ತಿರುವ ಪ್ರಶ್ನೆಗಳಿಗೆ ಸರಿ ಉತ್ತರ ಬರೆದು ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಲು ಅನುಕೂಲ ಆಗಲಿದೆ.

ಈ ಸಾಲಿನಲ್ಲಿ ಭಾಷಾ ವಿಷಯಗಳಲ್ಲಿ ಶೇ 30ರಷ್ಟು ಪಠ್ಯಕ್ರಮವನ್ನು ಕಡಿತಗೊಳಿಸಲಾಗಿದೆ. ಆದರೆ, ಐಚ್ಛಿಕ ವಿಷಯಗಳ ಪಠ್ಯಕ್ರಮದಲ್ಲಿ ಯಾವುದೇ ಕಡಿತ ಮಾಡಿಲ್ಲ. ಅದರ ಬದಲು ಹೆಚ್ಚುವರಿ ಪ್ರಶ್ನೆಗಳನ್ನು ನೀಡಿ, ಹೆಚ್ಚಿನ ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆ. ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯನ್ನು ಏಪ್ರಿಲ್ 16ರಿಂದ ಮೇ 4ರವರೆಗೆ ನಡೆಸಲು ತಾತ್ಕಾಲಿಕ ವೇಳಾಪಟ್ಟಿಯನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಇದೇ ವೇಳಾಪಟ್ಟಿಯಂತೆ ಪರೀಕ್ಷೆ ನಡೆಯುವುದು ಬಹುತೇಕ ಖಚಿತ. ಇದೀಗ, 2021–22ನೇ ಸಾಲಿನ ವಾರ್ಷಿಕ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಕೋವಿಡ್ ಆತಂಕ, ಆಫ್‌ಲೈನ್– ಆನ್‌ಲೈನ್ ತರಗತಿಯ ಗೊಂದಲ, ಪಠ್ಯಕ್ರಮ ಬೋಧನೆ ಪೂರ್ಣಗೊಂಡಿಲ್ಲ ಎಂಬ ದೂರು, ವಿದ್ಯಾರ್ಥಿಗಳ ಹಾಜರಾತಿ ಸಮಸ್ಯೆ ಮುಂತಾದ ಕಾರಣಗಳಿಗೆ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯಲ್ಲಿ ಸಮಸ್ಯೆ ಆಗಬಾರದು ಎಂಬ ಕಾರಣಕ್ಕೆ ಪ್ರಶ್ನೆಗಳ ಹೆಚ್ಚಿನ ಆಯ್ಕೆಗೆ ಅವಕಾಶ ನೀಡಲಾಗಿದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಉದಾಹರಣೆಗೆ, ಇತಿಹಾಸ ವಿಷಯದಲ್ಲಿ ಒಂದು ಅಂಕದ 10 ಪ್ರಶ್ನೆಗಳಿಗೆ ಉತ್ತರಿಸಬೇಕಿದ್ದು, 15 ಪ್ರಶ್ನೆಗಳನ್ನು ನೀಡಲಾಗಿದೆ. ಎರಡು ಅಂಕದ 10 ಪ್ರಶ್ನೆಗಳಿಗೆ ಉತ್ತರಿಸಬೇಕಿದ್ದು, ಈ ಬಾರಿ 12ರ ಬದಲು 15 ಪ್ರಶ್ನೆಗಳನ್ನು ನೀಡಲಾಗಿದೆ. 5 ಅಂಕಗಳ 6 ಪ್ರಶ್ನೆಗಳನ್ನು ಉತ್ತರಿಸಲು 8 ಪ್ರಶ್ನೆಗಳನ್ನು ನೀಡಲಾಗುತ್ತಿತ್ತು. ಈ ಬಾರಿ 10 ಪ್ರಶ್ನೆಗಳನ್ನು ನೀಡಲಾಗಿದೆ. ಹೀಗೆ ಒಟ್ಟು 37 ಪ್ರಶ್ನೆಗಳ ಬದಲು 47 ಪ್ರಶ್ನೆಗಳನ್ನು ನೀಡಲಾಗಿದೆ. ಕನ್ನಡ ಭಾಷಾ ವಿಷಯದಲ್ಲಿ ಒಟ್ಟು ಪ್ರಶ್ನೆಗಳ ಸಂಖ್ಯೆಯನ್ನು 55ರ ಬದಲು 70ಕ್ಕೆ ಹೆಚ್ಚಿಸಲಾಗಿದೆ. ಅರ್ಥಶಾಸ್ತ್ರ ವಿಷಯದಲ್ಲಿ ಒಟ್ಟು ಪ್ರಶ್ನೆಗಳ ಸಂಖ್ಯೆಯನ್ನು 51ರಿಂದ 63ಕ್ಕೆ ಹೆಚ್ಚಿಸಲಾಗಿದೆ. ನಿಗದಿಪಡಿಸಿದ್ದಕ್ಕಿಂತ ಹೆಚ್ಚು ಪ್ರಶ್ನೆಗಳಿಗೆ ಉತ್ತರಿಸಿದರೂ, ಸರಿ ಉತ್ತರ ಬರೆದ ಪ್ರಶ್ನೆಗಳನ್ನು ಪರಿಗಣಿಸಿ ಅಂಕ ನೀಡಲಾಗುವುದು ಎಂದು ಮೂಲಗಳು ಹೇಳಿವೆ.

'ಗಣಿತದಲ್ಲಿ ಹಿಂದೆ 50 ಪ್ರಶ್ನೆಗಳನ್ನು ಒಳಗೊಂಡ 150 ಅಂಕಗಳ ಪ್ರಶ್ನೆ ಪತ್ರಿಕೆ ಕೊಡಲಾಗುತ್ತಿತ್ತು. ಪ್ರಸ್ತುತ ಮಾದರಿ ಪ್ರಶ್ನೆಪತ್ರಿಕೆಯ ಪ್ರಕಾರ 66 ಪ್ರಶ್ನೆಗಳನ್ನು ಒಳಗೊಂಡ 185 ಅಂಕಗಳ ಪ್ರಶ್ನೆಪತ್ರಿಕೆ ನೀಡಲಾಗುತ್ತದೆ. ಈ ಮೊದಲು ಸಮಾಜಶಾಸ್ತ್ರ ವಿಷಯದಲ್ಲಿ ಒಟ್ಟು 100 ಅಂಕಗಳ ಪರೀಕ್ಷೆಗೆ 42 ಪ್ರಶ್ನೆಗಳನ್ನು ಒಳಗೊಂಡ 154 ಅಂಕಗಳ ಪ್ರಶ್ನೆ ಪತ್ರಿಕೆ ನೀಡಲಾಗುತ್ತಿತ್ತು. ಆದರೆ, ಈ ಬಾರಿ 58 ಪ್ರಶ್ನೆಗಳನ್ನು ಒಳಗೊಂಡ 215 ಅಂಕಗಳ ಪ್ರಶ್ನೆ ಪತ್ರಿಕೆಯನ್ನು ನೀಡಲು ಇಲಾಖೆ ಮುಂದಾಗಿರುವುದು ಮಾದರಿ ಪ್ರಶ್ನೆಪತ್ರಿಕೆಯಿಂದ ಗೊತ್ತಾಗುತ್ತಿದೆ. ಇದು ಒಟ್ಟು ಅಂಕದ ಇಮ್ಮಡಿ ಅಂಕಕ್ಕಿಂತಲೂ ಹೆಚ್ಚಾಗಿದ್ದು, ವಿದ್ಯಾರ್ಥಿಗಳು ಉತ್ತರಿಸಲು ಹೆಚ್ಚು ಅವಕಾಶ ನೀಡಿದಂತಾಗಿದೆ' ಎಂದು ಪದವಿಪೂರ್ವ ಕಾಲೇಜಿನ ಉಪನ್ಯಾಸಕರೊಬ್ಬರು ವಿವರಿಸಿದರು.

ಕೇವಲ 2 ದಿನಗಳ ಅಂತರ: ಪ್ರಥಮ ಪಿಯುಸಿ ಪರೀಕ್ಷೆಯನ್ನು ಮಾರ್ಚ್ 28ರಿಂದ ಏಪ್ರಿಲ್ 13ರವರೆಗೆ ನಡೆಸಲು ಇಲಾಖೆ ತೀರ್ಮಾನಿಸಿದೆ.

'ಮೌಲ್ಯಮಾಪನದಲ್ಲಿ ದೋಷ ಸಾಧ್ಯತೆ'

'ಈ ಬಾರಿ ಹೆಚ್ಚುವರಿ ಆಯ್ಕೆಯ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನೆಪತ್ರಿಕೆಗಳನ್ನು ನೀಡಲು ಉದ್ದೇಶಿಸಿರುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಹೆಚ್ಚಿನ ಪ್ರಶ್ನೆಗಳನ್ನು ಕೇಳಿರುವುದರಿಂದ ಈ ಬಾರಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸಲು ಉಪನ್ಯಾಸಕರಿಗೆ ಹೆಚ್ಚಿನ ಸಮಯ ಬೇಕಾಗುತ್ತದೆ. ಆದ್ದರಿಂದ ಇಲಾಖೆಯು ದಿನಕ್ಕೆ 24 ಉತ್ತರ ಪತ್ರಿಕೆಗಳ ಬದಲು 15 ಪತ್ರಿಕೆಗಳ ಮೌಲ್ಯಮಾಪನ ಮಾಡಲು ಮಾತ್ರ ಅವಕಾಶ ಮಾಡಬೇಕು. ಇಲ್ಲವಾದರೆ ಸಮಯದ ಒತ್ತಡದಿಂದ ಮೌಲ್ಯಮಾಪನದಲ್ಲಿ ದೋಷಗಳಾಗುವ ಸಾಧ್ಯತೆಗಳಿರುತ್ತವೆ' ಎಂದು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಕಾರ್ಯಾಧ್ಯಕ್ಷ ಎಸ್.ಆರ್. ವೆಂಕಟೇಶ್ ಹೇಳಿದರು.

ಭತ್ಯೆಯನ್ನು ಹೆಚ್ಚಿಸಬೇಕು: ಈ ಬಾರಿ ಹೆಚ್ಚುವರಿ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನೆಪತ್ರಿಕೆಗಳನ್ನು ಕೊಡುತ್ತಿರುವುದರಿಂದ ಮತ್ತು ಕಳೆದ ನಾಲ್ಕು ವರ್ಷಗಳಿಂದ ಮೌಲ್ಯಮಾಪನದ ಭತ್ಯೆಯನ್ನು ಹೆಚ್ಚಿಸದಿರುವುದರಿಂದ ಈ ಬಾರಿ ನಿಯಮ ಪ್ರಕಾರ ಶೇ 40ರಷ್ಟು ಭತ್ಯೆಯನ್ನು ಹೆಚ್ಚಿಸಬೇಕು' ಎಂದು ಸಂಘದ ಖಜಾಂಚಿ ಎಂ. ಜಯಣ್ಣ ಒತ್ತಾಯಿಸಿದ್ದಾರೆ.

ಮೇಲ್ಮನೆ ಸದಸ್ಯರಿಗೆ ಏರ್ಪಡಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಸಿದ್ದರಾಮಯ್ಯ ವಿಷಾದ

'ಕಲಾಪಗಳಲ್ಲಿ ಭಾಗವಹಿಸದ ಶಾಸಕರು'

ಪ್ರಜಾವಾಣಿ ವಾರ್ತೆ

ಬೆಂಗಳೂರು : 'ಮೊದಲ ಬಾರಿ ಶಾಸಕರಾದವರು ಒಂದು ಬಾರಿ ವಿಧಾನಸೌಧದ ಮೆಟ್ಟಿಲು ಹತ್ತಿದರೆ ಸಾಕು ಎನ್ನುತ್ತಾರೆ. ಒಮ್ಮೆ ವಿಧಾನಸೌಧ ಪ್ರವೇಶಿಸಿದ ಬಳಿಕ ಮತ್ತೆ ಅತ್ತ ಸುಳಿಯುವುದೂ ಇಲ್ಲ. ವಿಧಾನಮಂಡಲ ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದೂ ಇಲ್ಲ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ

ವಿಧಾನಪರಿಷತ್ ಸದಸ್ಯರಿಗಾಗಿ ಗುರುವಾರ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿ ವಿತ್ತೀಯ ಕಲಾಪ, ಮಸೂದೆಗಳು, ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲಿ ಅಭಿವೃದ್ಧಿಯ ಪಾಲುದಾರಿಕೆ ವಿಷಯದ ಕುರಿತು ಅವರು ಮಾತನಾಡಿದರು.

ಸಾಮಾಜಿಕ ನ್ಯಾಯ ಮತ್ತು ಅಶಕ್ತರ ಕಲ್ಯಾಣಕ್ಕಾಗಿ ಮಸೂದೆಗಳನ್ನು ರೂಪಿಸಬೇಕು ಮತ್ತು ಅದಕ್ಕೆ ಸಂಬಂಧಿಸಿದ ಕಲಾಪಗಳಲ್ಲಿ ಶಾಸಕರು ತಪ್ಪದೇ ಭಾಗವಹಿಸಬೇಕು ಎಂದು ಸಲಹೆ ನೀಡಿದರು.

ಜನ ಸಾಮಾನ್ಯರ ಮೇಲಿನ ತೆರಿಗೆಯ ಭಾರ ಹೆಚ್ಚುತ್ತಿರುವ ಬಗ್ಗೆ ಗಂಭೀರ ಚಿಂತನೆ ಅಗತ್ಯ. ಶ್ರೀಮಂತರು ಮಾತ್ರ ತೆರಿಗೆ ಕೊಡಬೇಕು. ಶ್ರೀಮಂತರಿಂದ ತೆರಿಗೆ ವಸೂಲಿ ಮಾಡಿ ಅದನ್ನು ಬಡವರ ಕಲ್ಯಾಣಕ್ಕೆ ಉಪಯೋಗಿಸಬೇಕು ಎಂದು ಡಾ.ಅಂಬೇಡ್ಕರ್ ಮತ್ತು ಹಲವು ಆರ್ಥಿಕ ತಜ್ಞರು ಪ್ರತಿ ಪಾದಿಸಿದ್ದರು. ಇದು ಕಲ್ಯಾಣ ರಾಷ್ಟ್ರದ ಮೂಲತತ್ವವೂ ಆಗಿತ್ತು ಎಂದು ಸಿದ್ದರಾಮಯ್ಯ ಹೇಳಿದರು.

ಇತ್ತೀಚೆಗೆ ಶ್ರೀಮಂತರ ಮೇಲೆ ವಿಧಿಸುತ್ತಿರುವ ತೆರಿಗೆ ಪ್ರಮಾಣ ಕಡಿಮೆ ಆಗುತ್ತಿದ್ದು, ಬಡವರ ಮೇಲೆ ತೆರಿಗೆ ಹೊರೆ ಹೆಚ್ಚಾಗುತ್ತಿದೆ. ಅಲ್ಲದೆ, ಕಾರ್ಪೊರೇಟ್ ಕಂಪನಿಗಳ ಮೇಲೆ ವಿಧಿಸುತ್ತಿದ್ದ ತೆರಿಗೆ ಪ್ರಮಾಣ ಶೇ 75 ಹಾಗೂ ಸಾಮಾನ್ಯರ ಮೇಲಿನ ತೆರಿಗೆ ಶೇ 25 ಇತ್ತು.ಈಗ ಅದು ಅದಲು ಬದಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರು ಮತ್ತು ವಿಧಾನಪರಿಷತ್ ಸದಸ್ಯರು ತಪ್ಪದೇ ಕಲಾಪಗಳಲ್ಲಿ ಭಾಗವಹಿಸಬೇಕು. ಕಲಾಪದ ಆರಂಭದಿಂದ ಕೊನೆಯ ವರೆಗೂ ಇರಬೇಕು. ಬಜೆಟ್ ವಿಷಯವೂ ಸೇರಿ ಎಲ್ಲ ವಿಷಯಗಳ ಬಗ್ಗೆ ಜ್ಞಾನ ಬೆಳೆಸಿಕೊಂಡರೆ ಆಡಳಿತಕ್ಕೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಧಾನಸಭೆಯ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮಾಜಿ ಸಭಾಪತಿಗಳಾದ ಡಿಎಚ್ ಶಂಕರಮೂರ್ತಿ, ಬಿ.ಎಲ್ ಶಂಕರ್, ಶಾಸಕರಾದ ಕೆ.ಆರ್. ರಮೇಶ್ ಕುಮಾರ್, ವಿಧಾನಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮುಂತಾದವರು ಇದ್ದರು.

ವಿಧಾನಪರಿಷತ್ ಸದಸ್ಯರ ತರಬೇತಿ ಕಾರ್ಯಾಗಾರವನ್ನು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಉದ್ಘಾಟಿಸಿದರು. ವಿಧಾನಪರಿಷತ್ ಕಾರ್ಯದರ್ಶಿ ಮಹಾಲಕ್ಷ್ಮಿ, ಸಭಾಪತಿ ಬಸವರಾಜ ಹೊರಟ್ಟಿ, ವಿರೋಧಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಇದ್ದರು.

'ಅಭಿವೃದ್ಧಿಗೆ ಪಕ್ಷ ಭೇದ ಬೇಡ'

ಶಾಸನ ರಚನೆಯ ವಿಚಾರ ಬಂದಾಗ ಪಕ್ಷ ಭೇದ ಮರೆತು ಅಭಿವೃದ್ಧಿಗೆ ಪೂರಕವಾಗಿ ರಾಜ್ಯದ ಹಿತಾಸಕ್ತಿ ಮುಂದಿಟ್ಟುಕೊಂಡು ಎಲ್ಲ ಶಾಸಕರೂ ಕೆಲಸ ಮಾಡಬೇಕು ಎಂದು ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜನರ ನಿರೀಕ್ಷೆಯನ್ನು ಕಾನೂನಿನ ಚೌಕಟ್ಟಿನೊಳಗೆ, ಹಣಕಾಸಿನ ಇತಿಮಿತಿಯಲ್ಲಿ ಈಡೇರಿಸಬೇಕು. ಇದು ಜನಪ್ರತಿನಿಧಿಗಳ ಆದ್ಯ ಕರ್ತವ್ಯ ಎಂದರು.

ಜನಪ್ರತಿನಿಧಿಗಳಿಗೆ ಜನಸೇವೆ ಮಾಡಲು ಒಂದು ಅವಕಾಶ ಸಿಕ್ಕಿದೆ. ಇದನ್ನು ವಿವೇಚನೆ ಮತ್ತು ಜವಾಬ್ದಾರಿಯಿಂದ ಮಾಡುವ ಮೂಲಕ ಜನರ ನಿರೀಕ್ಷೆಯನ್ನು ಸಾಕಾರಗೊಳಿಸಬೇಕು. ಅಧಿವೇಶನದಲ್ಲಿ ನಡೆಯುವ ಚರ್ಚೆ ವಾದಗಳನ್ನು ಆಲಿಸಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯನಿರ್ವಹಿಸಬೇಕು. ಸದನದ ಘನತೆ ಮತ್ತು ಗೌರವವನ್ನು ಎತ್ತಿ ಹಿಡಿಯುವ ಕೆಲಸ ಆಗಬೇಕು ಎಂದು ಅವರು ಹೇಳಿದರು.

ಎಚ್.ಎನ್.ಆನಂದ್‌ಗೆ ಬಿ.ಎಂ.ಶ್ರೀ ಪ್ರತಿಷ್ಠಾನ ಪ್ರಶಸ್ತಿ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 2022ನೇ ಸಾಲಿನ 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಗೆ ಪತ್ರಕರ್ತ ಎಚ್.ಎನ್. ಆನಂದ್ ಆಯ್ಕೆಯಾಗಿದ್ದಾರೆ.



ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ನೇತೃತ್ವದ ಸಮಿತಿಯು ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಸ್ಮರಣ ಫಲಕವನ್ನು ಒಳಗೊಂಡಿದೆ.

ಪತ್ರಿಕಾರಂಗ ಹಾಗೂ ಮಾಧ್ಯಮ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಎಚ್.ಎನ್. ಆನಂದ್ ಅವರು 'ಪ್ರಜಾವಾಣಿ'ಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. 1970-80ರ ದಶಕದಲ್ಲಿ 'ಸುಧಾ' ವಾರಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದ ಅವರು, ಕನ್ನಡ ನಿಯತಕಾಲಿಕೆಯಲ್ಲಿ 'ಕವರ್ ಸ್ಟೋರಿ' ಪರಿಕಲ್ಪನೆಯನ್ನು ಪರಿಚಯಿಸಿದ್ದರು. ಅಲ್ಲಿ ಅವರು ಬರೆಯುತ್ತಿದ್ದ 'ವಾರೆನೋಟ' ಅಂಕಣ ಮೊನಚಾದ ಹಾಸ್ಯ ಮತ್ತು ವಿಡಂಬನೆಯಿಂದ ಪ್ರಸಿದ್ಧವಾಗಿತ್ತು. ಅದಕ್ಕೂ ಮೊದಲು ವಿವಿಧ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಕಟಣಾ ವಿಭಾಗದಲ್ಲೂ ಕೆಲಕಾಲ ಅವರು ಕಾರ್ಯನಿರ್ವಹಿಸಿದ್ದಾರೆ. ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಬಿ.ಎಂ.ಶ್ರೀ. ಕಲಾಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಿಜಾಬ್ ಧರಿಸಿದವರಿಗೆ 'ಗೇಟ್ ಬಂದ್'

ಒಂದನೇ ಪುಟದಿಂದ

'ನಿರ್ಣಯ ಪಾಲಿಸಿದರೆ ಮಾತ್ರ ಕಾಲೇಜಿನೊಳಗೆ ಪ್ರವೇಶ ನೀಡಲಾಗುವುದು' ಎಂದೂ ಹೇಳಿದ್ದಾರೆ.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ವಿದ್ಯಾರ್ಥಿನಿಯರು, 'ಯಥಾಸ್ಥಿತಿ ಕಾಪಾಡುವಂತೆ ಸರ್ಕಾರ ನೀಡಿರುವ ಆದೇಶ ಉಡುಪಿ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಮಾತ್ರ ಸೀಮಿತವಾಗಿದ್ದು, ಕುಂದಾಪುರ ಜೂನಿಯರ್ ಕಾಲೇಜಿನ ಉಲ್ಲೇಖ ಅದರಲ್ಲಿ ಇಲ್ಲ. ಹಿಜಾಬ್ ಧರಿಸಬಾರದು ಎಂಬ ಆದೇಶದ ಪ್ರತಿ ಇದ್ದರೆ ಕೊಡಿ' ಎಂದು ಪಟ್ಟು ಹಿಡಿದರು.

'ಪ್ರವೇಶಾತಿ ಸಂದರ್ಭ ಹಿಜಾಬ್ ಧರಿಸುವಂತಿಲ್ಲ ಎಂಬ ನಿಯಮ ಹಾಕಿದ್ದರೆ ಬೇರೆ ಕಾಲೇಜಿಗೆ ಸೇರುತ್ತಿದ್ದೆವು. ಪರೀಕ್ಷೆಗೆ ಎರಡು ತಿಂಗಳು ಇರುವಾಗ ಏಕಾಏಕಿ ಹಿಜಾಬ್ ಧರಿಸುವಂತಿಲ್ಲ ಎಂಬ ನಿಯಮ ಜಾರಿಗೊಳಿಸುವುದು ಸರಿಯಲ್ಲ. ನಮಗೆ ಶಿಕ್ಷಣವೂ ಬೇಕು, ಹಿಜಾಬ್ ಧರಿಸಲು ಅವಕಾಶವನ್ನೂ ನೀಡಬೇಕು' ಎಂದು ಆಗ್ರಹಿಸಿದರು.

ಆದರೆ, ವಿದ್ಯಾರ್ಥಿನಿಯರ ಬೇಡಿಕೆಗೆ ಪ್ರಾಂಶುಪಾಲರು ಕಿವಿಗೊಡದೆ, ಕಾಲೇಜು ಗೇಟ್ ಹಾಕಿದರು. ಕಾಲೇಜಿಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮತ್ತೊಂದೆಡೆ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬಂದಿದ್ದಕ್ಕೆ ಪ್ರತಿಯಾಗಿ ಅದೇ ಊರಿನ ವರಾದ ಭಂಡಾರ್‌ಕಾರ್ಸ್ ಕಾಲೇಜಿನ ಕೆಲವು ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಜೈಶ್ರೀರಾಮ್ ಘೋಷಣೆ ಕೂಗಿದರು.

ಕಾಲೇಜು ಗೇಟ್ ಎದುರು ಸೇರಿದ ವಿದ್ಯಾರ್ಥಿಗಳನ್ನು ಕಾಲೇಜು ಆವರಣ ಪ್ರವೇಶಿಸಲು ಸಿಬ್ಬಂದಿ ಅನುಮತಿ ನೀಡಲಿಲ್ಲ. ಕೇಸರಿ ಶಾಲು ತೆಗೆದು ವಿದ್ಯಾರ್ಥಿಗಳು ಕಾಲೇಜು ಪ್ರವೇಶಿಸಿದರು. ಸ್ಥಳದಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ವಿವಿಧೆಡೆ ಪ್ರತಿಕ್ರಿಯೆ: ಹಿಜಾಬ್ ವಿವಾದಕ್ಕೆ ಜಿಲ್ಲೆಯ ವಿವಿಧ ಕಾಲೇಜುಗಳಲ್ಲಿ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಕುಂದಾಪುರ ತಾಲ್ಲೂಕಿನ ಕೋಟೇಶ್ವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲೂ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದಕ್ಕೆ ಪ್ರತಿಯಾಗಿ ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾಲೇಜು ಪ್ರವೇಶಿಸಲು ಮುಂದಾಗಿದ್ದರು. ಈ ಸಂದರ್ಭ ಕಾಲೇಜು ಪ್ರಾಂಶುಪಾಲರು ವಿದ್ಯಾರ್ಥಿಗಳಿಗೆ ಹಾಗೂ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ತಿಳಿಹೇಳಿ ಕಾಲೇಜು ಸಮವಸ್ತ್ರ ಮಾತ್ರ ಧರಿಸಿ ಬರುವಂತೆ ಸೂಚಿಸಿ ಗೊಂದಲವನ್ನು ಪರಿಹರಿಸಿದರು.

ಕುಂದಾಪುರದ ಬಿ.ಬಿ. ಹೆಗಡೆ ಕಾಲೇಜಿನಲ್ಲೂ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಬಂದಿದ್ದರು. ಪ್ರತಿಯಾಗಿ ಕೆಲವು ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದಿದ್ದರು. ಯಾರಿಗೂ ಕಾಲೇಜು ಪ್ರವೇಶಕ್ಕೆ ಅಡ್ಡಿಪಡಿಸಿಲ್ಲ.

ಆಯೋಗಕ್ಕೆ ಶೀಘ್ರ ವರದಿ: 'ಹಿಜಾಬ್ ವಿವಾದ ಸಂಬಂಧ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ಉಡುಪಿ ಜಿಲ್ಲಾಡಳಿತಕ್ಕೆ ನೋಟಿಸ್ ಜಾರಿಮಾಡಿದೆ. ಈ ಹಿನ್ನೆಲೆಯಲ್ಲಿ ಕುಂದಾಪುರ ಉಪ ವಿಭಾಗಾಧಿಕಾರಿ ಕೆ.ರಾಜು ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಾರುತಿ ಅವರನ್ನೊಳಗೊಂಡ ಸಮಿತಿ ರಚಿಸಲಾಗಿದ್ದು, ವರದಿ ನೀಡುವಂತೆ ಸೂಚಿಸಲಾಗಿದೆ. ಸಮಿತಿಯು ಈಗಾಗಲೇ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿದೆ. ಸಮಿತಿ ನೀಡಿದ ವರದಿಯನ್ನು ಆಯೋಗಕ್ಕೆ ಸಲ್ಲಿಸಲಾಗುವುದು' ಎಂದು ಜಿಲ್ಲಾಧಿಕಾರಿ ಎಂ.ಕೂರ್ಮಾರಾವ್ ಹೇಳಿದರು.

ಪ್ರತ್ಯೇಕ ನಿಯಮ ಜಾರಿ ಸಾಧ್ಯವಿಲ್ಲ: ಅಂಗಾರ

'ವಸ್ತ್ರ ಸಂಹಿತೆ ವಿಚಾರವಾಗಿ ಕಾಲೇಜಿಗೊಂದು ನಿಯಮ ಜಾರಿ ಮಾಡಲು ಸಾಧ್ಯವಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್. ಅಂಗಾರ ಹೇಳಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಅವರು, 'ಕುಂದಾಪುರದ ಜೂನಿಯರ್ ಕಾಲೇಜಿನಲ್ಲೂ ಹಿಜಾಬ್ ಸಮಸ್ಯೆ ಸೃಷ್ಟಿಯಾಗಿರುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ಜಿಲ್ಲಾಡಳಿತದೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು. ಸರ್ಕಾರಿ ಕಾಲೇಜುಗಳಲ್ಲಿ ವಸ್ತ್ರ ಹಾಗೂ ಸಮವಸ್ತ್ರ ಸಂಹಿತೆ ಜಾರಿ ಸಂಬಂಧ ಸರ್ಕಾರವು ಸಮಿತಿ ರಚಿಸುತ್ತಿದ್ದು, ಸಮಿತಿಯ ವರದಿ ಆಧರಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಿದೆ' ಎಂದರು.

'ಐದೇ ನಿಮಿಷದಲ್ಲಿ ವಿವಾದ ಬಗೆಹರಿಸುತ್ತೇನೆ'

ಉಡುಪಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಸೃಷ್ಟಿಯಾಗಿರುವ ಹಿಜಾಬ್ ವಿವಾದದಲ್ಲಿ ಇಲ್ಲಿಯವರೆಗೂ ಕಾಲೇಜು ಆಡಳಿತ ಮಂಡಳಿಯ ಭಾಗವಾಗಿ ನಿರ್ಧಾರ ತೆಗೆದುಕೊಳ್ಳಲಾಗುತ್ತಿತ್ತು. ಕೆಲವು ಸಂಘಟನೆಗಳು ವಿವಾದವನ್ನು ಸವಾಲಾಗಿ ಸ್ವೀಕರಿಸಿರುವುದರಿಂದ, ಹಿಂದೂ ಸಂಘಟನೆಯ ಮುಖಂಡನಾಗಿ ಮುಂದೆ ದಿಟ್ಟ ಉತ್ತರ ನೀಡಲಾಗುವುದು. ಸಂಘಟನಾತ್ಮಕವಾಗಿ ಹೋರಾಟ ಮಾಡಿದರೆ ಹಿಜಾಬ್ ವಿವಾದವನ್ನು ಕೇವಲ ಐದು ನಿಮಿಷದಲ್ಲಿ ಬಗೆಹರಿಸಬಹುದು ಎಂದು ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

'ವಸ್ತ್ರಸಂಹಿತೆ ಪಾಲಿಸಲು ಸೂಚನೆ'

'ಕಾಲೇಜಿನ ವಸ್ತ್ರಸಂಹಿತೆಯನ್ನು ಪಾಲಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಲಾಗಿದೆ. ಗುರುವಾರ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ತರಗತಿ ಪ್ರವೇಶಕ್ಕೆ ಅನುಮತಿ ನೀಡಲಾಗಿಲ್ಲ. ವಿಶ್ರಾಂತಿ ಕೊಠಡಿಯಲ್ಲಿ ಕುಳಿತು ಕಾಲೇಜು ಅವಧಿ ಮುಗಿದ ಬಳಿಕ ಮನೆಗೆ ತೆರಳಿದರು' ಎಂದು ಭಂಡಾರ್‌ಕಾರ್ಸ್ ಕಾಲೇಜು ಪ್ರಾಂಶುಪಾಲ ಡಾ.ಎನ್. ಪಿ.ನಾರಾಯಣ ಶೆಟ್ಟಿ ತಿಳಿಸಿದರು.

ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಒಂದನೇ ಪುಟದಿಂದ

ಈ ಸಂಬಂಧ ವಿದ್ಯಾರ್ಥಿನಿಯರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ವಕೀಲರು, 'ಈ ಅರ್ಜಿಗಳಿಗೆ ಸಂಬಂಧಿಸಿದಂತೆ ಅಡ್ವೊಕೇಟ್ ಜನರಲ್ ವಾದ ಮಂಡಿಸಬೇಕಾಗಿದೆ. ಆದ್ದರಿಂದ, ಕಾಲಾವಕಾಶ ಬೇಕು' ಎಂದು ಮನವಿ ಮಾಡಿದರು.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಂದು ಅರ್ಜಿ ದಾಖಲಾಗಿದ್ದು, ಎರಡನ್ನೂ ಒಟ್ಟಿಗೇ ಇದೇ 8ರಂದು ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ತಿಳಿಸಿದೆ.

'ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ಕಾಲೇಜಿಗೆ ಬರಲು ನಿರ್ಬಂಧ ವಿಧಿಸಿರುವುದು ಅಸಾಂವಿಧಾನಿಕ. ಈ ಕುರಿತ ಆದೇಶವನ್ನು ರದ್ದುಪಡಿಸಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಒಂದೇ ವರ್ಷದಲ್ಲಿ 78,381 ಮಂದಿಗೆ ಕ್ಯಾನ್ಸರ್

ಒಂದನೇ ಪುಟದಿಂದ

ಮಕ್ಕಳಲ್ಲೂ ಹೆಚ್ಚಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ದಾಖಲಾತಿ ಪ್ರಕಾರ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಕ್ಯಾನ್ಸರ್ ಪ್ರಕರಣಗಳೂ ಹೆಚ್ಚಳವಾಗುತ್ತಿವೆ. 14 ವರ್ಷದೊಳಗಿನವರಲ್ಲಿ ಲ್ಯುಕೇಮಿಯಾ ಮತ್ತು ಲಿಂಫೋಮಾ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಒಟ್ಟಾರೆ ಪ್ರಕರಣಗಳಲ್ಲಿ ಶೇ 7.9 ರಷ್ಟು ಈ ಮಾದರಿಯ ಕ್ಯಾನ್ಸರ್ ಪತ್ತೆಯಾಗುತ್ತಿವೆ. ರಾಜ್ಯದಲ್ಲಿ ಸರಾಸರಿ ಒಂದು ಲಕ್ಷ ಪುರುಷರಲ್ಲಿ 46 ಮಂದಿ ಹಾಗೂ ಮಹಿಳೆಯರಲ್ಲಿ 23 ಮಂದಿ ತಂಬಾಕು ಸಂಬಂಧಿತ ಕ್ಯಾನ್ಸರ್‌ಗೆ ಒಳಪಡುತ್ತಿದ್ದಾರೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಹಾಗೂ ಬೆಂಗಳೂರಿನ ರಾಷ್ಟ್ರೀಯ ರೋಗ ಮಾಹಿತಿಶಾಸ್ತ್ರ ಮತ್ತು ಸಂಶೋಧನಾ ಕೇಂದ್ರವು ಕ್ಯಾನ್ಸರ್ ಪ್ರಕರಣಗಳ ಬಗ್ಗೆ ಅಧ್ಯಯನ ನಡೆಸಿದೆ. ಈ ಸಂಸ್ಥೆಗಳು 2021ರ ಸೆಪ್ಟೆಂಬರ್‌ನಲ್ಲಿ ಬಿಡುಗಡೆ ಮಾಡಿದ ವರದಿ ಪ್ರಕಾರ ರಾಜ್ಯದಲ್ಲಿ 2025ರ ವೇಳೆಗೆ ಕ್ಯಾನ್ಸರ್ ಪ್ರಕರಣಗಳು ಶೇ 11 ರಷ್ಟು ಹೆಚ್ಚಳವಾಗಲಿವೆ. ಈ ಪ್ರಮಾಣ ಮಹಿಳೆಯರಲ್ಲಿ ಶೇ 11.6 ಹಾಗೂ ಪುರುಷರಲ್ಲಿ ಶೇ 11.4 ರಷ್ಟು ಅಧಿಕವಾಗಲಿದೆ ಎಂದು ಉಲ್ಲೇಖಿಸಲಾಗಿದೆ.

'ಕ್ಯಾನ್ಸರ್ ಕಾಯಿಲೆ ಹಾಗೂ ಚಿಕಿತ್ಸೆ ಬಗ್ಗೆ ಜನರಲ್ಲಿ ಜಾಗೃತಿ ಮೂಡುತ್ತಿದೆ. ರೋಗಿಗಳು ಬೇಗ ತಪಾಸಣೆ ಮಾಡಿಸಿಕೊಂಡಲ್ಲಿ ಜೀವಕ್ಕೆ ಅಪಾಯವಾಗುವುದನ್ನು ತಪ್ಪಿಸಲು ಸಾಧ್ಯ. ' ಎಂದು ಮಣಿಪಾಲ್ ಆಸ್ಪತ್ರೆಯ ಕ್ಯಾನ್ಸರ್ ತಜ್ಞ ಡಾ. ನಿಲೇಶ್ ರೆಡ್ಡಿ ತಿಳಿಸಿದರು.

ಪಿಯು ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯ?

• ರಶ್ಮಿ ಬೇಲೂರು

ಬೆಂಗಳೂರು: ಹಿಜಾಬ್– ಕೇಸರಿ ಶಾಲು ವಿವಾದ ತಾರಕಕ್ಕೇರಿದ ಬೆನ್ನಲ್ಲೆ, ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ ಅಥವಾ ವಸ್ತ್ರ ಸಂಹಿತೆ ಕಡ್ಡಾಯಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ವಿವಾದ ಇದೀಗ ನ್ಯಾಯಾಲಯದ ಅಂಗಳದಲ್ಲಿದೆ. ನ್ಯಾಯಾಲಯ ಆದೇಶ ನೀಡಿದ ತಕ್ಷಣ, ಈ ವಿಷಯದ ಕುರಿತು ತೀರ್ಮಾನಿಸಲು ಸಮಿತಿಯೊಂದನ್ನು ರಚಿಸಲಾಗುವುದು ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ರಾಜ್ಯದ ಶೇ 75ರಷ್ಟು ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಸಮವಸ್ತ್ರ ಧರಿಸುತ್ತಿದ್ದು, ಈ ಬಗ್ಗೆ ಆಯಾ ಕಾಲೇಜುಗಳ ಶಾಲಾ ಅಭಿವೃದ್ಧಿ ಸಮಿತಿಗಳೇ (ಎಸ್‌ಡಿಎಂಸಿ) ತೀರ್ಮಾನಿಸುತ್ತಿವೆ. ಸರ್ಕಾರಿ ಆದೇಶದ ಮೂಲಕವೇ ಸಮವಸ್ತ್ರ ಕಡ್ಡಾಯಗೊಳಿಸುವ ಚಿಂತನೆ ಸರ್ಕಾರದ ಮುಂದಿದೆ' ಎಂದು ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ವಸ್ತ್ರ ಸಂಹಿತೆಯಾಗಿ ಹೆಣ್ಣು ಮಕ್ಕಳಿಗೆ ಚೂಡಿದಾರ್ ಮತ್ತು ಶಾಲು (ದುಪಟ್ಟಾ), ಗಂಡು ಮಕ್ಕಳಿಗೆ ಸಾಂಪ್ರದಾಯಿಕ ಪ್ಯಾಂಟ್ ಮತ್ತು ಅಂಗಿ ನಿಗದಿಪಡಿಸಲಾಗುವುದು. ಸಮವಸ್ತ್ರದ ಬಣ್ಣ, ವಿನ್ಯಾಸವನ್ನು ಆಯಾ ಎಸ್‌ಡಿಎಂಸಿಗಳು ತೀರ್ಮಾನಿಸಲಿವೆ' ಎಂದೂ ತಿಳಿಸಿದರು.

'ವಿದ್ಯಾರ್ಥಿಗಳಿಗೆ ಸಮವಸ್ತ್ರ ಜಾರಿ ಮಾಡುವುದೆಂದರೆ, ಅದನ್ನು ಸರ್ಕಾರದಿಂದ ಪೂರೈಸಲಾಗುತ್ತದೆ ಎಂದು ಅರ್ಥವಲ್ಲ. ಸರ್ಕಾರಿ ಪಿಯು ಕಾಲೇಜುಗಳ ಸಮವಸ್ತ್ರ ಜಾರಿ ವಿಷಯವನ್ನು ಅಲ್ಲಿನ ಎಸ್‌ಡಿಎಂಸಿಗಳೇ ನಿರ್ವಹಿಸಲಿವೆ. ಕೆಲವು ಸರ್ಕಾರಿ ಪಿಯು ಕಾಲೇಜುಗಳಲ್ಲಿ ಈಗಾಗಲೇ ಸಮವಸ್ತ್ರ ಜಾರಿಯಲ್ಲಿದೆ' ಎಂದರು.

ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಸಮವಸ್ತ್ರ ಕಡ್ಡಾಯಗೊಳಿಸುವ ಚಿಂತನೆಯಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣ ವ್ಯವಸ್ಥೆ ಮತ್ತು ಸಮಾನತೆಗೆ ಧಕ್ಕೆ ತರುವಂಥ ಯಾವುದೇ ವಿಷಯಕ್ಕೂ ನಾವು ಅವಕಾಶ ಕೊಡುವುದಿಲ್ಲ. ಸಮಿತಿ ರಚಿಸಿ, ಆ ಸಮಿತಿ ಶಿಫಾರಸು ಮಾಡಿದ ಬಳಿಕ ಈ ಬಗ್ಗೆ ತೀರ್ಮಾನಕ್ಕೆ ಬರುತ್ತೇವೆ. ಹಲವು ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ಸಮವಸ್ತ್ರ ಜಾರಿಯಲ್ಲಿದೆ



ಬಿ.ಸಿ. ನಾಗೇಶ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ

ಸಿ.ಡಿ ಪ್ರಕರಣ: ಅಂತಿಮ ವರದಿ ಸಲ್ಲಿಕೆಗೆ ಹೈಕೋರ್ಟ್ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಲೈಂಗಿಕ ಹಗರಣದ ಸಿ.ಡಿ ಬಹಿರಂಗ ಪ್ರಕರಣದ ತನಿಖೆಯ ಅಂತಿಮ ವರದಿಯನ್ನು ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಸಲ್ಲಿಸುವಂತೆ ಎಸ್‌ಐಟಿ ಮುಖ್ಯಸ್ಥರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ಹೈಕೋರ್ಟ್ ವಕೀಲರಾದ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಎಸ್‌ಐಟಿ ಪರ ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, 'ಹೈಕೋರ್ಟ್ ನಿರ್ದೇಶನದ ಅನುಸಾರ ಅಂತಿಮ ವರದಿಯನ್ನು ಎಸ್‌ಐಟಿ ಮುಖ್ಯಸ್ಥರ ಅವಗಾಹನೆಗೆ ತರಲಾಗಿದೆ ಹಾಗೂ ಇದು ಕ್ರಮಬದ್ಧವಾಗಿದೆ ಎಂದು ಎಸ್‌ಐಟಿ ಮುಖ್ಯಸ್ಥರು ದೃಢೀಕರಿಸಿದ್ದಾರೆ' ಎಂದು ವಿವರಿಸಿದರು.

'ತನಿಖಾ ವರದಿ ಸರಿ ಇದೆಯೊ ಅಥವಾ ತಪ್ಪಿದೆಯೊ ಎಂಬುದನ್ನು ನಿರ್ಧರಿಸುವ ಅಧಿಕಾರ ವ್ಯಾಪ್ತಿ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಮಾತ್ರ ಇದೆ. ಈ ಕುರಿತಂತೆ ವಿಚಾರಣಾ ಕೋರ್ಟ್ ಪರಿಶೀಲನೆ ನಡೆಸುತ್ತದೆ. ಆದ್ದರಿಂದ, ಅಂತಿಮ ವರದಿ ಸಲ್ಲಿಕೆಗೆ ಅವಕಾಶ ನೀಡಬೇಕು' ಎಂದು ಕೋರಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಈ ಪ್ರಕರಣದಲ್ಲಿ ಸಂತ್ರಸ್ತೆ ಯಾವುದೇ ತಕರಾರು ತೆಗೆಯಬಹುದಾದ ಅವಕಾಶಗಳನ್ನು ಮುಕ್ತವಾಗಿರಿಸಲಾಗಿದೆ. ಈ ತಕರಾರುಗಳನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ಪರಿಶೀಲಿಸಬೇಕು. ಅಂತೆಯೇ ಎಸ್‌ಐಟಿ ಕಾನೂನು ಬದ್ಧತೆ ಪ್ರಶ್ನಿಸಿದ ಅರ್ಜಿಯನ್ನು ಮುಂದೆ ನಿರ್ಧರಿಸಲಾಗುವುದು' ಎಂದು ತಿಳಿಸಿದೆ. ಎಸ್‌ಐಟಿ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್ ಹಾಜರಿದ್ದರು.

ಅರೆನಗ್ನ: ವಿಚಾರಣೆ ಕೈಬಿಟ್ಟ ನ್ಯಾಯಪೀಠ: ಈ ಹಿಂದೆ ಇದೇ ಪ್ರಕರಣದ ವಿಡಿಯೊ ಕಾನ್ಫರೆನ್ಸ್ ವಿಚಾರಣೆ ವೇಳೆ ಅರೆನಗ್ನವಾಗಿ ಕಾಣಿಸಿಕೊಂಡಿದ್ದ ಶ್ರೀಧರ್ ಎನ್. ಭಟ್ ಎಂಬುವರು ಹೈಕೋರ್ಟ್‌ಗೆ ಬೇಷರತ್ ಕ್ಷಮೆ ಯಾಚಿಸಿದ್ದಾರೆ.

'ನಾನು ಉದ್ದೇಶಪೂರ್ವಕವಾಗಿ ಈ ರೀತಿ ನಡೆದುಕೊಂಡಿರಲಿಲ್ಲ. ನನಗೆ ತಪ್ಪಿನ ಅರಿವಾಗಿದೆ. ಮುಂದೆ ಇಂತಹ ತಪ್ಪು ಮಾಡುವುದಿಲ್ಲ. ಅಂದು ವಿಚಾರಣೆಯಲ್ಲಿ ಭಾಗಿಯಾಗಿದ್ದ ಎಲ್ಲರಲ್ಲೂ ವಿನಯಪೂರ್ವಕವಾಗಿ ಬೇಷರತ್ ಕ್ಷಮೆ ಕೋರುತ್ತೇನೆ' ಎಂದು ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದ್ದಾರೆ.

ಇದನ್ನು ಪರಿಗಣಿಸಿದ ಮುಖ್ಯ ನ್ಯಾಯಮೂರ್ತಿಗಳು, 'ನಿಮ್ಮ ವಿರುದ್ಧದ ಪ್ರಕ್ರಿಯೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಲಾಗುತ್ತಿದೆ. ಭವಿಷ್ಯದಲ್ಲಿ ಎಚ್ಚರಿಕೆಯಿಂದ ಇರಬೇಕು' ಎಂದು ಶ್ರೀಧರ್ ಭಟ್‌ಗೆ ಸೂಚಿಸಿ ಪ್ರಕರಣವನ್ನು ವಿಲೇವಾರಿ ಮಾಡಿದರು.

ಸುದ್ದಿ 2 ನಿಮಿಷ

ಸಂಪುಟ ವಿಸ್ತರಣೆ ಬಗ್ಗೆ ಗೊತ್ತೇ ಇಲ್ಲ: ಸೋಮಶೇಖರ್

ಮೈಸೂರು: 'ಸಚಿವ ಸಂಪುಟ ವಿಸ್ತರಣೆ ಬಗ್ಗೆ ನನಗೆ ಗೊತ್ತಿಲ್ಲ. ಏನಾದರೂ ಮಾಹಿತಿ ಸಿಕ್ಕರೆ ತಿಳಿಸುತ್ತೇನೆ' ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಸಂಪುಟ ಪುನರ್‌ರಚನೆ ಅಥವಾ ವಿಸ್ತರಣೆ ಮುಖ್ಯಮಂತ್ರಿಯ ಪರಮಾಧಿಕಾರ. ಅವರು ಏನು ಬೇಕಾದರೂ ಮಾಡಬಹುದು. ನಮ್ಮ ಪಾತ್ರವೇನೂ ಇಲ್ಲ' ಎಂದರು.

'ಕೆಲವು ಸಚಿವರು ಫೋನ್ ಕರೆ ಸ್ವೀಕರಿಸುತ್ತಿಲ್ಲ ಎಂಬ ಶಾಸಕರ ಆರೋಪದಲ್ಲಿ ಹುರುಳಿಲ್ಲ. ಸಭೆ ಅಥವಾ ತುರ್ತು ಕೆಲಸದಲ್ಲಿ ಇದ್ದಾಗ ಮಾತ್ರ ಸಚಿವರು ಫೋನ್ ಕರೆ ಸ್ವೀಕರಿಸದೇ ಇರಬಹುದು. ಅಂತಹ ಸಮಯದಲ್ಲಿ ಸಚಿವರ ಆಪ್ತ ಸಹಾಯಕರು ಸ್ಪಂದಿಸುತ್ತಾರೆ. ಯಾವುದೇ ಮಂತ್ರಿ, ಶಾಸಕರನ್ನು ಕಡೆಗಣಿಸಿಲ್ಲ' ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಶಾಸಕರು ಕಾಂಗ್ರೆಸ್ ಸೇರುತ್ತಾರೆ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿ, 'ಕಾಂಗ್ರೆಸ್‌ನಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿದೆ. ಅಲ್ಲಿಂದ ಒಬ್ಬೊಬ್ಬರೇ ಹೊರಗೆ ಬರುತ್ತಿದ್ದಾರೆ. ಅದನ್ನು ಮೊದಲು ಸರಿಪಡಿಸಲಿ' ಎಂದು ತಿರುಗೇಟು ನೀಡಿದರು.

ಅಂಬೇಡ್ಕರ್ ಫೋಟೊ ತೆರವು ತನಿಖೆಗೆ ಆಗ್ರಹಿಸಿ ಸಿ.ಎಂಗೆ ಪತ್ರ

ಮೈಸೂರು: 'ರಾಯಚೂರು ಜಿಲ್ಲಾ ನ್ಯಾಯಾಲಯದಲ್ಲಿ ಗಣರಾಜ್ಯೋತ್ಸವ ವೇಳೆ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ಅವರು ಡಾ.ಬಿ.ಆರ್.ಅಂಬೇಡ್ಕರ್ ಫೋಟೊ ತೆರವುಗೊಳಿಸಿದ ಘಟನೆ ತನಿಖೆ ನಡೆಸಲು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಮನವಿ ಮಾಡಬೇಕು' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

'ಭಾವಚಿತ್ರ ತೆರವುಗೊಳಿಸುವ ಮೂಲಕ ಅಂಬೇಡ್ಕರ್ ರಚಿಸಿರುವ ಭಾರತದ ಸಂವಿಧಾನ ಹಾಗೂ ಸಂಸತ್ತಿಗೆ ಅಗೌರವ ತೋರಿಸಿದ್ದಾರೆ. ಇದು ಖಂಡನೀಯ. ಇಡೀ ರಾಷ್ಟ್ರವೇ ತಲೆತಗ್ಗಿಸುವಂತಾಗಿದೆ. ಅಹಿತಕರ ಘಟನೆ ಬಗ್ಗೆ ರಾಯಚೂರು ಜಿಲ್ಲಾಡಳಿತದಿಂದ ವರದಿ ತರಿಸಿಕೊಂಡು ಕೂಡಲೇ ಕ್ರಮ ವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಕ್ಯಾನ್ಸರ್ ಬಗ್ಗೆ ತಿಳಿಯೋಣ
ಅಂತರರಾಷ್ಟ್ರೀಯ ಕ್ಯಾನ್ಸರ್ ದಿನ ವಿಶೇಷ
ಡಾ.ವಿನಯಕುಮಾರ್ ಮುತ್ತಗಿ, ಕನ್ಸಲ್ಟೆಂಟ್ ರೇಡಿಯೇಶನ್ ಅಂಕಾಲಜಿಸ್ಟ್, HCG NMR ಕ್ಯಾನ್ಸರ್ ಕ್ಯೂರೀ ಸೆಂಟರ್, ಹುಬ್ಬಳ್ಳಿ
ವೈದ್ಯರೊಂದಿಗೆ ಸಂವಾದ
ಸಂಜೆ 4 ಗಂಟೆಗೆ
ಕನ್ನಡ ಧ್ವನಿ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ನಾಳೆ
ರಂಗಭೂಮಿ, ಚಲನಚಿತ್ರ, ಕಿರುತೆರೆ ಕಲಾವಿದೆ
ಗಿರಿಜಾ ಲೋಕೇಶ್
ಗಿರಿಜಾ ಲೋಕಾಭಿರಾಮ...
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ 12

ಸಂಕ್ರಾಂತಿ ಪ್ರಯುಕ್ತ Prajavani.net ಏರ್ಪಡಿಸಿದ್ದ ಪ್ರಜಾವಾಣಿ ಪಾಕಸ್ಪರ್ಧೆಯಲ್ಲಿ ಬೆಂಗಳೂರಿನ ಅಮೃತಾ ಎಸ್.ದೊಡ್ಮನಿ ಅವರು ಪ್ರಥಮ ಬಹುಮಾನ ಗಳಿಸಿದ್ದಾರೆ. ಬೆಂಗಳೂರಿನ ವೈದೇಹಿ ಎನ್. ದ್ವಿತೀಯ ಬಹುಮಾನವನ್ನೂ, ಕಾರವಾರದ ಗಾಯತ್ರಿ ಆರ್. ಹೊವಳೆ ಅವರು ತೃತೀಯ ಬಹುಮಾನವನ್ನೂ ಗೆದ್ದುಕೊಂಡಿದ್ದಾರೆ.

ಪ್ರಜಾವಾಣಿ ಸಂಕ್ರಾಂತಿ ಪಾಕ ಸ್ಪರ್ಧೆ ವಿಜೇತರು

ಬೆಂಗಳೂರು: ಸಂಕ್ರಾಂತಿ ಪ್ರಯುಕ್ತ Prajavani.net ಏರ್ಪಡಿಸಿದ್ದ ಪ್ರಜಾವಾಣಿ ಪಾಕ ಸ್ಪರ್ಧೆಯಲ್ಲಿ ಬೆಂಗಳೂರಿನ ಅಮೃತಾ ಎಸ್.ದೊಡ್ಮನಿ ಅವರು ಪ್ರಥಮ ಬಹುಮಾನ ಗಳಿಸಿದ್ದಾರೆ. ಬೆಂಗಳೂರಿನ ವೈದೇಹಿ ಎನ್. ದ್ವಿತೀಯ ಬಹುಮಾನವನ್ನೂ, ಕಾರವಾರದ ಗಾಯತ್ರಿ ಆರ್.ಹೊವಳೆ ಅವರು ತೃತೀಯ ಬಹುಮಾನವನ್ನೂ ಗೆದ್ದುಕೊಂಡಿದ್ದಾರೆ.



ಸಂಕ್ರಾಂತಿ ಪ್ರಯುಕ್ತ ವಿಶೇಷ ಪಾಕ ಅಥವಾ ವ್ಯಂಜನಗಳ ಕುರಿತಾಗಿ ಸೂಕ್ತ ವಿವರಣೆಯೊಂದಿಗೆ ವಿಡಿಯೊ ಮಾಡಿ ಕಳುಹಿಸುವಂತೆ ಪ್ರಜಾವಾಣಿಯು ಓದುಗರಿಗೆ ಆಹ್ವಾನ ನೀಡಿದ್ದು, ನೂರಾರು ಮಂದಿ ಉತ್ಸಾಹದಿಂದ ಭಾಗವಹಿಸಿದ್ದರು. ಮೊದಲ ಮೂವರು ವಿಜೇತರಿಗೆ ಅನುಕ್ರಮವಾಗಿ ಮೈಕ್ರೋವೇವ್ ಓವೆನ್, ಫುಡ್ ಪ್ರೊಸೆಸರ್ ಹಾಗೂ ಗ್ಲಾಸ್ ಟಾಪ್ ಸ್ಟೌ ನೀಡಲಾಗುತ್ತದೆ.

ಪಾಕ ಸಿದ್ಧಪಡಿಸುವ ವಿಡಿಯೊ ಕಳುಹಿಸಿದವರಲ್ಲಿ ಹೆಚ್ಚಿನವರ ವಿಶೇಷ ಅಡುಗೆಗಳು ಅತ್ಯುತ್ತಮವಾಗಿದ್ದವು. ವಿಜೇತರನ್ನು ಆಯ್ಕೆ ಮಾಡುವುದೇ ಸವಾಲಾಗಿದ್ದುದರಿಂದ ಅತ್ಯುತ್ತಮ ವಿಡಿಯೊಗಳಲ್ಲಿ ಹತ್ತು ವ್ಯಂಜನಗಳ ವಿಡಿಯೊಗಳನ್ನು ಆಯ್ಕೆ ಮಾಡಲಾಯಿತು. ಅವರೆಲ್ಲರಿಗೂ ತಲಾ ಒಂದು ಸಾವಿರ ರೂಪಾಯಿ ಮೌಲ್ಯದ ಅಮೆಜಾನ್ ಗಿಫ್ಟ್ ವೋಚರ್ ನೀಡಲಾಗುತ್ತದೆ.

ಗಿಫ್ಟ್ ವೋಚರ್ ಗೆದ್ದುಕೊಂಡ 10 ಮಂದಿ ಅದೃಷ್ಟಶಾಲಿಗಳು (ಜಿಲ್ಲೆಯ ಹೆಸರಿನೊಂದಿಗೆ): **ಅಖಿಲಾ ಸಾಗರ್** (ರಾಯಚೂರು), **ಚೇತನಾ ಎಂ.ಪಾಟೀಲ** (ಬೆಂಗಳೂರು ಗ್ರಾಮಾಂತರ), **ಯಶಸ್ವಿನಿ ಜೆ.ಶೆಟ್ಟಿ** (ಚಿಕ್ಕಮಗಳೂರು), **ಅಪೂರ್ವ ಕೆ.ಆರ್.** (ಬೆಂಗಳೂರು ನಗರ), **ಸಾಧನಾ ಜಗನ್ನಾಥ** (ಗದಗ), **ಆಯಿಷಾ ಖಾನ್** (ಹಾಸನ), **ಸುಷ್ಮಾ ಶಾನುಭಾಗ್** (ಉತ್ತರ ಕನ್ನಡ), **ಸೌಮ್ಯಾ ಶಿಗ್ಗಾಂವಕರ್** (ಹಾಸನ), **ಹೇಮಾಕ್ಷಿ ಕೆ.ಕೆರೇಸೂರ್** (ಧಾರವಾಡ), **ರುದ್ರೇಶ್ ಕೆ.** (ಬಳ್ಳಾರಿ).

ನಾಡಿನಾದ್ಯಂತ ಉತ್ಸಾಹದಿಂದ ಭಾಗವಹಿಸಿದ ಎಲ್ಲ ಸ್ಪರ್ಧಿಗಳನ್ನು ಪ್ರಜಾವಾಣಿ ಅಭಿನಂದಿಸುತ್ತದೆ. ವಿಜೇತರ ವಿಡಿಯೊಗಳೂ ಸೇರಿದಂತೆ, ಮೆಚ್ಚುಗೆ ಗಳಿಸಿದ ಎಲ್ಲ ವಿಡಿಯೊಗಳು Prajavani.net ತಾಣದಲ್ಲಿ ಶೀಘ್ರದಲ್ಲೇ ಲಭ್ಯವಾಗಲಿವೆ.

ಎಎಸ್‌ಐ ಸುರೇಶ್ ಶವ ಪತ್ತೆ

ಕುಶಾಲನಗರ: ಇಲ್ಲಿನ ಸಂಚಾರಿ ಠಾಣೆಯ ಎಎಸ್‌ಐ ಸುರೇಶ್ (52) ಅವರ ಮೃತದೇಹವು ಅರಕಲಗೂಡು ತಾಲ್ಲೂಕಿನ ಕೊಣನೂರು ಕೆರೆಯಲ್ಲಿ ಗುರುವಾರ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಅವರು 13 ದಿನಗಳಿಂದ ಕಾಣೆಯಾಗಿದ್ದರು. ಪೊಲೀಸರು ಅವರ ಪತ್ತೆಗಾಗಿ ತೀವ್ರ ಶೋಧ ನಡೆಸಿದ್ದರು. ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಲಾಗಿದೆ.

ವಿಧಾನಸಭೆ ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ಅಭಿಯಾನ

ಬಿಜೆಪಿ ಶಿಕ್ಷಿಸಲು 'ಮಿಷನ್ ಉತ್ತರ ಪ್ರದೇಶ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕನಿಷ್ಠ ಒಂಬತ್ತು ಮಾಧ್ಯಮ ಗೋಷ್ಠಿಗಳನ್ನು ರೈತ ಮುಖಂಡರು ನಡೆಸಲಿದ್ದಾರೆ
- ಎಸ್‌ಕೆಎಂನ ಭಾಗವಾಗಿರುವ 57 ರೈತ ಸಂಘಟನೆಗಳು ಕರಪತ್ರಗಳನ್ನು ಹಂಚಲಿವೆ
- ರೈತರು ಮನೆಮನೆಗೆ ಹೋಗಿ ಕರಪತ್ರ ಹಂಚಲಿದ್ದಾರೆ

ನವದೆಹಲಿ: ಕೇಂದ್ರವು ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳ ವಿರುದ್ಧ ಹೋರಾಟದ ನೇತೃತ್ವ ವಹಿಸಿದ್ದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ), 'ಮಿಷನ್ ಉತ್ತರ ಪ್ರದೇಶ' ಎಂಬ ಅಭಿಯಾನಕ್ಕೆ ಗುರುವಾರ ಚಾಲನೆ ನೀಡಿದೆ. ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಶಿಕ್ಷಿಸುವುದು ಈ ಅಭಿಯಾನದ ಉದ್ದೇಶ.

ಕೇಂದ್ರವು ವಿವಾದಾತ್ಮಕವಾದ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಿದೆ. ಆದರೆ, ಕನಿಷ್ಠ ಬೆಂಬಲ ಬೆಲೆಗೆ ಕಾನೂನು ಮಾನ್ಯತೆ ಮತ್ತು ರೈತರ ಮೇಲೆ ಹಾಕಿದ್ದ ಪ್ರಕರಣಗಳ ರದ್ದತಿಯಂತಹ ಲಿಖಿತ ಭರವಸೆಗಳನ್ನು ಸರ್ಕಾರ ಉಲ್ಲಂಘಿಸಿದೆ ಎಂದು ಎಸ್‌ಕೆಎಂ ಆರೋಪಿಸಿದೆ.

ಎಸ್‌ಕೆಎಂನ ಹಿರಿಯ ಮುಖಂಡರಾದ ರಾಕೇಶ್ ಟಿಕಾಯತ್, ಹನ್ನನ್ ಮುಲ್ಲಾ, ಜೋಗಿಂದರ್ ಸಿಂಗ್ ಉಗ್ರಹಾನ್, ಡಾ. ದರ್ಶನ್ ಪಾಲ್, ಜಗಜಿತ್ ಸಿಂಗ್ ದಲ್ಲೆವಾಲ್, ಶಿವಕುಮಾರ್ ಶರ್ಮಾ ಕಕ್ಕಾಜಿ ಮತ್ತು ಯೋಗೇಂದ್ರ ಯಾದವ್ ಅವರು ಮಾಧ್ಯಮಗೋಷ್ಠಿ ನಡೆಸಿದ್ದಾರೆ.

ಲಖಿಂಪುರ ಖೇರಿ ರೈತರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ಇರುವುದನ್ನು ರೈತ ಮುಖಂಡರು ಖಂಡಿಸಿದ್ದಾರೆ. ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ರೈತರ ಹತ್ಯೆ ಪ್ರಕರಣದ ಪ್ರಮುಖ ಆರೋಪಿ. ಅಜಯ್ ಮಿಶ್ರಾ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಬೇಕು ಎಂದು ರೈತರು ಆಗ್ರಹಿಸಿದ್ದರು.

ಯಾವುದೇ ಪಕ್ಷದ ಪರವಾಗಿ ಎಸ್‌ಕೆಎಂ ಮತ ಯಾಚಿಸುವುದಿಲ್ಲ. ಸಂಘಟನೆ ರಾಜಕೀಯದಿಂದ ದೂರವೇ ಉಳಿಯಲಿದೆ ಎಂದು ಎಸ್‌ಕೆಎಂ ಮುಖಂಡರು ಪುನರುಚ್ಚರಿಸಿದ್ದಾರೆ.

ರೈತ ಮುಖಂಡರಾದ ಯೋಗೇಂದ್ರ ಯಾದವ್, ಹನ್ನನ್ ಮುಲ್ಲಾ, ದರ್ಶನ್ ಪಾಲ್, ರಾಕೇಶ್ ಟಿಕಾಯತ್, ಜಗಜಿತ್ ಸಿಂಗ್ ದಲ್ಲೆವಾಲ್ ಮತ್ತು ಜೋಗಿಂದರ್ ಸಿಂಗ್ ಉಗ್ರಹಾನ್ ಅವರು ದೆಹಲಿಯಲ್ಲಿ ನಡೆಸಿದ ಮಾಧ್ಯಮಗೋಷ್ಠಿಯಲ್ಲಿ ಫಲಕಗಳನ್ನು ಪ್ರದರ್ಶಿಸಿದರು –ಪಿಟಿಐ ಚಿತ್ರ

ಕೇಂದ್ರದ ಬಜೆಟ್ ರೈತರ ನಿರೀಕ್ಷೆಗೆ ತಕ್ಕಂತೆ ಇಲ್ಲ. ರೈತರ ಹಿತಾಸಕ್ತಿಗೆ ಧಕ್ಕೆ ತರುವಂತಹ ಬಜೆಟ್ ಮಂಡಿಸಲಾಗಿದೆ ಎಂದು ರಾಕೇಶ್ ಟಿಕಾಯತ್ ಹೇಳಿದ್ದಾರೆ. ಚುನಾವಣೆಯ ವಿಷಯದಲ್ಲಿ ನಿಲುವು ತಳೆಯುವಂತಹ ಬಲವಂತದ ಸ್ಥಿತಿ ನಿರ್ಮಾಣ ಆಗಿದೆ ಎಂದು ಯೋಗೇಂದ್ರ ಯಾದವ್ ಹೇಳಿದರು. ಉತ್ತರ ಪ್ರದೇಶದಾದ್ಯಂತ ಸಣ್ಣಸಣ್ಣ ಸಭೆಗಳನ್ನು ನಡೆಸಲಾಗುವುದು ಎಂದು ಮುಲ್ಲಾ ತಿಳಿಸಿದರು.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ 'ಭದ್ರಕೋಟೆ' ಗೋರಖಪುರ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಲೋಕಸಭಾ ಕ್ಷೇತ್ರ ವಾರಾಣಸಿಯಲ್ಲಿ ರೈತ ಮುಖಂಡರು ಮಾಧ್ಯಮಗೋಷ್ಠಿ ನಡೆಸಲಿದ್ದಾರೆ. ಬಿಜೆಪಿ ಸರ್ಕಾರದ 'ರೈತ ವಿರೋಧಿ ಕ್ರಮ'ಗಳನ್ನು ಈ ಮಾಧ್ಯಮಗೋಷ್ಠಿಯಲ್ಲಿ ವಿವರಿಸಲಾಗುವುದು ಎಂದು ಎಸ್‌ಕೆಎಂ ಹೇಳಿದೆ.

ವಿಧಾನಸಭೆಗೆ ಚುನಾವಣೆ ನಡೆಯಲಿರುವ ಉತ್ತರಾಖಂಡ ಮತ್ತು ಪಂಜಾಬ್ ಸೇರಿ ಇತರ ರಾಜ್ಯಗಳಲ್ಲಿಯೂ ಅಭಿಯಾನ ನಡೆಯಲಿದೆ.

ಎಸ್‌ಕೆಎಂ ಜತೆಗೆ ಗುರುತಿಸಿಕೊಂಡಿರುವ ಹರಿಯಾಣದ ರೈತ ಸಂಘಟನೆಗಳ ಸದಸ್ಯರು ಉತ್ತರ ಪ್ರದೇಶಕ್ಕೆ ಬಂದು ಅಭಿಯಾನದಲ್ಲಿ ಭಾಗಿಯಾಗಲಿದ್ದಾರೆ ಎಂದು ಟಿಕಾಯತ್ ತಿಳಿಸಿದ್ದಾರೆ.

ಬಿಜೆಪಿ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಬೆಂಬಲಿಗರಿಗೆ ಕೇಜ್ರಿವಾಲ್ ಕರೆ

'ನಿಮ್ಮ ಒಳಿತಿಗೆ ಎಎಪಿಗೆ ಮತ ಕೊಡಿ'

ಪಣಜಿ (ಪಿಟಿಐ): ತಮ್ಮ ಭವಿಷ್ಯ ಮತ್ತು ರಾಜ್ಯದ ಒಳಿತಿಗಾಗಿ ಎಎಪಿಗೆ ಮತ ನೀಡುವಂತೆ ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳ ಬೆಂಬಲಿಗರು ಮತ್ತು ಕಾರ್ಯಕರ್ತರಿಗೆ ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಮನವಿ ಮಾಡಿದ್ದಾರೆ.

ಕೇಜ್ರಿವಾಲ್

'ಪಕ್ಷವನ್ನು ಬದಲಿಸದೆಯೇ ಅವರೆಲ್ಲರೂ ಎಎಪಿಗೆ ಮತ ಹಾಕಬಹುದು. ಬೇರೆ ಪಕ್ಷಗಳ ಕಾರ್ಯಕರ್ತರು ಮತ್ತು ಬೆಂಬಲಿಗರು ಎಎಪಿಗೆ ಸೇರುವ ಅಗತ್ಯ ಇಲ್ಲ. ಆಯಾ ಪಕ್ಷದಲ್ಲಿ ಇದ್ದುಕೊಂಡೇ ನಿಮ್ಮ ಮತ್ತು ನಿಮ್ಮ ರಾಜ್ಯದ ಒಳಿತಿಗಾಗಿ ಎಎಪಿಗೆ ಮತ ಹಾಕಿ. ಕಳೆದ 15 ವರ್ಷಗಳಿಂದ ಗೋವಾದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಆದರೆ, ಆ ಪಕ್ಷವು ಗೋವಾಕ್ಕೆ ಏನನ್ನೂ ಮಾಡಿಲ್ಲ' ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಈ ಬಾರಿ ಎಎಪಿಗೆ ಮತ ಹಾಕಿ. ರಾಜ್ಯದಲ್ಲಿ ಬದಲಾವಣೆ ನಿಮಗೆ ಕಾಣಿಸಲಿದೆ ಎಂದು ಕೇಜ್ರಿವಾರ್ ಭರವಸೆ ಕೊಟ್ಟಿದ್ದಾರೆ.

ಕಾಂಗ್ರೆಸ್ ಪಕ್ಷವು ಹಲವು ವರ್ಷ ಗೋವಾದಲ್ಲಿ ಅಧಿಕಾರದಲ್ಲಿ ಇತ್ತು. ಆದರೆ, ಈ ಪಕ್ಷವು ಈಗ ಬಿಜೆಪಿಗೆ ಕಾರ್ಯಕರ್ತರನ್ನು ನೇಮಿಸಿಕೊಡುವ ಕೆಲಸವನ್ನಷ್ಟೇ ಮಾಡುತ್ತಿದೆ. ಗೋವಾಕ್ಕಾಗಿ ಕಾಂಗ್ರೆಸ್ ಪಕ್ಷದ ಬಳಿ ಯಾವ ಕಾರ್ಯಸೂಚಿಯೂ ಇಲ್ಲ ಎಂದು ಅವರು ಹೇಳಿದ್ದಾರೆ.

ಅವರು (ಎಎಪಿ) ಬಿಜೆಪಿಯನ್ನು ವಿರೋಧಿಸಿದಂತೆ ಕಾಣಿಸುತ್ತದೆ. ಆದರೆ, ಕೊನೆಯಲ್ಲಿ ಬಿಜೆಪಿಯ ನೆರವಿನಲ್ಲಿಯೇ ಕೇಜ್ರಿವಾಲ್ ಅವರು ಸರ್ಕಾರ ರಚಿಸುತ್ತಾರೆ

ರಣದೀಪ್ ಸುರ್ಜೇವಾಲಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಎಸ್‌ಎಡಿಯ ಪ್ರಕಾಶ್ ಸಿಂಗ್ ಬಾದಲ್ ಅವರು 94ನೇ ವಯಸ್ಸಿನಲ್ಲಿಯೂ ಸ್ಪರ್ಧಿಸುತ್ತಿದ್ದಾರೆ. ಏಕೆಂದರೆ ಅವರ ಮಗನನ್ನು (ಸುಖಬೀರ್ ಸಿಂಗ್) ಜನರು ಸ್ವೀಕರಿಸಿಲ್ಲ

ಭಗವಂತ ಮಾನ್, ಪಂಜಾಬ್‌ನಲ್ಲಿ ಎಎಪಿ ಮುಖ್ಯಮಂತ್ರಿ ಅಭ್ಯರ್ಥಿ

ಗೋವಾದಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ, ಪ್ರತಿ ಕುಟುಂಬಕ್ಕೆ ಸುಮಾರು ₹10 ಲಕ್ಷ ಮೌಲ್ಯದ ಆರ್ಥಿಕ ಪ್ರಯೋಜನ ದೊರಕಲಿದೆ ಎಂದು ಕೇಜ್ರಿವಾಲ್ ಭರವಸೆ ಕೊಟ್ಟಿದ್ದಾರೆ.

'ಎಎಪಿಗೆ ಅಧಿಕಾರ ಜನರ ಬಯಕೆ'

ಧುರಿ (ಪಂಜಾಬ್) (ಪಿಟಿಐ): 44 ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಶಿರೋಮಣಿ ಅಕಾಲಿ ದಳಕ್ಕೆ (ಎಸ್‌ಎಡಿ) ಅವಕಾಶ ಕೊಟ್ಟು ಪಂಜಾಬ್‌ನ ಜನರು ದಣಿದಿದ್ದಾರೆ. ಈಗ ಎಎಪಿಗೆ ಅವಕಾಶ ಕೊಡಲು ಜನರು ಬಯಸಿದ್ದಾರೆ ಎಂದು ಎಎಪಿಯ ಮುಖ್ಯಮಂತ್ರಿ ಅಭ್ಯರ್ಥಿ ಭಗವಂತ ಮಾನ್ ಗುರುವಾರ ಹೇಳಿದ್ದಾರೆ.

ಮಾಫಿಯಾ, ನಿರುದ್ಯೋಗ, ಹಣದುಬ್ಬರ, ಡ್ರಗ್ಸ್ ಸಮಸ್ಯೆ ಮತ್ತು ಕೃಷಿ ಬಿಕ್ಕಟ್ಟು ಪಂಜಾಬ್ ಎದುರಿಸುತ್ತಿರುವ ಕೆಲವು ಸಮಸ್ಯೆಗಳಾಗಿವೆ. ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಎಎಪಿ ಪ್ರಯತ್ನಿಸಲಿದೆ ಎಂದು ಧುರಿ ಕ್ಷೇತ್ರದ ಅಭ್ಯರ್ಥಿಯೂ ಆಗಿರುವ ಮಾನ್ ಹೇಳಿದ್ದಾರೆ. ಮಾನ್ ಅವರು ಸಂಗ್ರೂರು ಲೋಕಸಭಾ ಕ್ಷೇತ್ರದ ಸಂಸದ. ಧುರಿ ಕ್ಷೇತ್ರವು ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿಯೇ ಇದೆ. ರಾಜಕಾರಣಕ್ಕೆ ಬರುವ ಮೊದಲು ಕಾಮಿಡಿಯನ್ ಆಗಿದ್ದ ಮಾನ್ ಅವರು ತಮ್ಮ ವಿಶಿಷ್ಟ ಮಾತುಗಾರಿಕೆಯ ಮೂಲಕ ಜನರನ್ನು ಆಕರ್ಷಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಕನಿಷ್ಠ 25 ವರ್ಷ, ಎಸ್‌ಎಡಿಯ ಬಾದಲ್ ಕುಟುಂಬಕ್ಕೆ 19 ವರ್ಷ ಜನರು ಅವಕಾಶ ಕೊಟ್ಟಿದ್ದಾರೆ. ಈ 44 ವರ್ಷಗಳಲ್ಲಿ ಈ ಪಕ್ಷಗಳು ರಾಜ್ಯಕ್ಕಾಗಿ ಏನನ್ನೂ ಮಾಡಿಲ್ಲ. ಮತ್ತೊಂದು ಅವಕಾಶಕ್ಕಾಗಿ ಈ ಪಕ್ಷಗಳು ಕಾದಿವೆ. ಆದರೆ, ಜನರು ದಣಿದಿದ್ದಾರೆ ಎಂದು ಮಾನ್ ಹೇಳಿದ್ದಾರೆ.

ಬಿಜೆಪಿಯ ಗೆಲುವಿಗೆ ಎಎಪಿ ಶ್ರಮ: ಸುರ್ಜೇವಾಲಾ

ಬಿಜೆಪಿಯ ಗೆಲ್ಲುವ ಸಾಧ್ಯತೆಯನ್ನು ಹೆಚ್ಚಿಸುವುದಕ್ಕಾಗಿಯೇ ಅರವಿಂದ ಕೇಜ್ರಿವಾಲ್ ಅವರು ಗೋವಾಕ್ಕೆ ಬಂದಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಆರೋಪಿಸಿದ್ದಾರೆ. ಕೇಜ್ರಿವಾಲ್ ಅವರನ್ನು 'ಛೋಟಾ ಮೋದಿ' ಎಂದು ಸುರ್ಜೇವಾಲಾ ಬಣ್ಣಿಸಿದ್ದಾರೆ. ಕೇಜ್ರಿವಾಲ್ ಅವರನ್ನು ವಂಚಕ ಎಂದೂ ಅವರು ಕರೆದಿದ್ದಾರೆ.

'ಕೇಜ್ರಿವಾಲ್ ಅವರು ಲೋಕಾಯುಕ್ತ ಮತ್ತು ಲೋಕಪಾಲ್ ಹೆಸರಿನಲ್ಲಿ ಪ್ರತಿಜ್ಞೆ ಸ್ವೀಕರಿಸಿದ್ದರು. ಕಾಂಗ್ರೆಸ್ ಪಕ್ಷವನ್ನು ವಿರೋಧಿಸಿಕೊಂಡು ಅವರು ಅಧಿಕಾರಕ್ಕೆ ಬಂದರು. ಲೋಕಪಾಲ್ ಎಲ್ಲಿದೆ? ಅದು ಎಲ್ಲಿಗೆ ಹೋಯಿತು? ಕೇಜ್ರಿವಾಲ್ ಅವರು ಈಗ ಲೋಕಪಾಲ್ ಬಗ್ಗೆ ಏಕೆ ಮಾತನಾಡುತ್ತಿಲ್ಲ' ಎಂದು ಸುರ್ಜೇವಾಲಾ ಪ್ರಶ್ನಿಸಿದ್ದಾರೆ. ಕೇಜ್ರಿವಾಲ್ ಆರ್‌ಎಸ್‌ಎಸ್ ಅಥವಾ ಬಿಜೆಪಿಯ ಸಿದ್ಧಾಂತವನ್ನೇ ಪ್ರತಿನಿಧಿಸುತ್ತಾರೆ. ಬಿಜೆಪಿಗೆ ನೆರವಾಗುವುದಕ್ಕಾಗಿಯೇ ಗೋವಾ ಮತ್ತು ಉತ್ತರಾಖಂಡದಲ್ಲಿ ಎಎಪಿ ಸ್ಪರ್ಧಿಸಿದೆ ಎಂದು ಆಪಾದಿಸಿದ್ದಾರೆ.

ಗೋವಾ: ಕಾಂಗ್ರೆಸ್ ಅಭ್ಯರ್ಥಿಗಳಿಂದ ಮತ್ತೆ ಪ್ರತಿಜ್ಞೆ

ಪಣಜಿ (ಪಿಟಿಐ): ಗೋವಾ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವ ಕಾಂಗ್ರೆಸ್ ಅಭ್ಯರ್ಥಿಗಳು ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರ ಸಮ್ಮುಖದಲ್ಲಿ ಪಕ್ಷ ನಿಷ್ಠೆಯ ಪ್ರತಿಜ್ಞೆಯನ್ನು ಶುಕ್ರವಾರ ಸ್ವೀಕರಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಗೋವಾಕ್ಕೆ ಒಂದು ದಿನದ ಭೇಟಿ ನೀಡಲಿರುವ ರಾಹುಲ್ ಅವರು, ಸಂಖಲಿಮ್ ಕ್ಷೇತ್ರದಲ್ಲಿ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಇದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಪ್ರತಿನಿಧಿಸುತ್ತಿರುವ ಕ್ಷೇತ್ರ. ರಾಹುಲ್ ಅವರು ಸಂವಾದವನ್ನೂ ನಡೆಸಲಿದ್ದಾರೆ. ಗೋವಾದಲ್ಲಿ ಕಾಂಗ್ರೆಸ್‌ಗೆ ಪಕ್ಷಾಂತರದ ದೊಡ್ಡ ಹೊಡೆತ ಬಿದ್ದಿದೆ. 2019ರಲ್ಲಿ ಕಾಂಗ್ರೆಸ್‌ನ 10 ಶಾಸಕರು ಪಕ್ಷಾಂತರ ಮಾಡಿದ್ದರು. ಕಾಂಗ್ರೆಸ್‌ನ ಎಲ್ಲ ಅಭ್ಯರ್ಥಿಗಳನ್ನು ದೇವಾಲಯ, ಚರ್ಚ್, ದರ್ಗಾಕ್ಕೆ ಕರೆದೊಯ್ದು ಪಕ್ಷ ತೊರೆಯುವುದಿಲ್ಲ ಎಂಬ ಪ್ರಮಾಣವನ್ನು ಇತ್ತೀಚೆಗೆ ಮಾಡಿಸಲಾಗಿತ್ತು.

ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ, ಮಣಿಪುರ ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ನಿಷ್ಪಕ್ಷಪಾತ ಸುದ್ದಿ, ವಿಶ್ಲೇಷಣೆಗಳಿಗೆ ಆಲಿಸಿರಿ
ಪ್ರಜಾವಾಣಿ ಪಾಡ್‌ಕಾಸ್ಟ್
ಪ್ರತಿ ರಾತ್ರಿ 9.00 ಗಂಟೆಗೆ
prajavani.net/podcast

ಜಯಂತ್ ಚೌಧರಿಗೆ ಮತ್ತೆ ಆಹ್ವಾನ

ಪ್ರಜಾವಾಣಿ ವಾರ್ತೆ

ಲಖನೌ: ಅಖಿಲೇಶ್ ಯಾದವ್ ನೇತೃತ್ವದ ಎಸ್‌ಪಿ ಸಖ್ಯ ತೊರೆದು ಬಿಜೆಪಿ ನೇತೃತ್ವದ ಎನ್‌ಡಿಎ ಸೇರುವಂತೆ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌಧರಿ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮತ್ತೆ ಆಹ್ವಾನ ನೀಡಿದ್ದಾರೆ.

'ಅಖಿಲೇಶ್ ಅವರು ತಮ್ಮ ತಂದೆ ಮುಲಾಯಂ ಸಿಂಗ್ ಯಾದವ್ ಮತ್ತು ಚಿಕ್ಕಪ್ಪ ಶಿವಪಾಲ್ ಸಿಂಗ್ ಯಾದವ್ ಅವರನ್ನೇ ಮೂಲೆಗುಂಪು ಮಾಡಿದ್ದಾರೆ. ತಂದೆ, ಚಿಕ್ಕಪ್ಪನ ಮಾತು ಕೇಳದ ವ್ಯಕ್ತಿಯು ನಿಮ್ಮ (ಜಯಂತ್) ಮಾತು ಕೇಳಬಹುದು ಎಂಬ ನಿರೀಕ್ಷೆ ನಿಮಗೆ ಇದೆಯೇ?' ಎಂದು ಬುಲಂದ್‌ಶಹರ್‌ನಲ್ಲಿ ಪ್ರಚಾರ ಭಾಷಣದಲ್ಲಿ ಶಾ ಪ್ರಶ್ನಿಸಿದ್ದಾರೆ.

'ರಾಜ್ಯದಲ್ಲಿ ಎಸ್‌ಪಿ ನೇತೃತ್ವದ ಸರ್ಕಾರ ರಚನೆಯಾದರೆ ಮೂರೇ ದಿನಗಳಲ್ಲಿ ಜಯಂತ್ ಅವರನ್ನು ಹೊರಗೆ ಹಾಕುತ್ತಾರೆ. ಆಜಂ ಖಾನ್ ಅವರನ್ನು ಜೈಲಿನಿಂದ ಬಿಡಿಸಿ ಸರ್ಕಾರಕ್ಕೆ ಸೇರಿಸಿಕೊಳ್ಳುತ್ತಾರೆ' ಎಂದು ಶಾ ಹೇಳಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮಾಡಿದ ಅಭಿವೃದ್ಧಿ ಕೆಲಸಗಳನ್ನು ಶಾ ವಿವರಿಸಿದರು. 'ಡಬಲ್ ಎಂಜಿನ್ ಸರ್ಕಾರ'ದ ಅನುಕೂಲಗಳನ್ನು ತಿಳಿಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗಾಜಿಯಾಬಾದ್‌ನ ಲೋನಿ ಎಂಬಲ್ಲಿ ಗುರುವಾರ ನಡೆಸಿದ ಚುನಾವಣಾ ಪ್ರಚಾರ ಸಭೆಯಲ್ಲಿ ಕಾರ್ಯಕರ್ತರು ಹುಮ್ಮಸ್ಸಿನಿಂದ ಭಾಗಿಯಾಗಿದ್ದರು ಪಿಟಿಐ ಚಿತ್ರ

ಜಾಟ್ ಸಮುದಾಯದ ಹಲವು ಮುಖಂಡರನ್ನು ಶಾ ಅವರು ದೆಹಲಿಯಲ್ಲಿ ಇತ್ತೀಚೆಗೆ ಭೇಟಿಯಾಗಿದ್ದರು. ಕೃಷಿ ಕಾಯ್ದೆಗಳ ಕಾರಣಕ್ಕೆ ಮುನಿಸಿಕೊಂಡಿರುವ ಜಾಟ್ ಸಮುದಾಯವನ್ನು ಒಲಿಸಿಕೊಳ್ಳುವ ಪ್ರಯತ್ನ ಇದಾಗಿತ್ತು. ಬಿಜೆಪಿ ನೇತೃತ್ವದ ಮೈತ್ರಿಕೂಟ ಸೇರಲು ಜಯಂತ್ ಅವರಿಗೆ ಮುಕ್ತ ಅವಕಾಶ ಇದೆ ಎಂದು ಶಾ ಅವರು ಈ ಹಿಂದೆಯೂ ಹೇಳಿದ್ದರು. ಜಯಂತ್ ಚೌಧರಿ ಅವರು ತಪ್ಪು ಮನೆ ಸೇರಿದ್ದಾರೆ ಎಂದಿದ್ದರು. ಆದರೆ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಜಯಂತ್ ಅವರನ್ನು ನಿರಂತರವಾಗಿ ಕಟುವಾಗಿ ಟೀಕಿಸುತ್ತಿದ್ದಾರೆ.

ಜಯಂತ್ ಅವರಿಗೆ ಮೈತ್ರಿಕೂಟದ ಬಾಗಿಲು ಸದಾ ತೆರೆದೇ ಇದೆ ಎಂದು ಜಾಟ್ ಸಮುದಾಯದ ಮುಖಂಡ, ಬಿಜೆಪಿ ಸಂಸದ ಪ್ರವೇಶ್ ವರ್ಮಾ ಇತ್ತೀಚೆಗೆ ಹೇಳಿದ್ದರು. ಚುನಾವಣೆಯ ಬಳಿಕವೂ ಅವರು ಮೈತ್ರಿಕೂಟ ಸೇರಬಹುದು ಎಂದಿದ್ದರು. ಯಾವ ಪಕ್ಷಕ್ಕೂ ಸರಳ ಬಹುಮತ ದೊರೆಯದೇ ಇದ್ದರೆ ಜಯಂತ್ ಅವರು ಬಿಜೆಪಿಗೆ ಬೆಂಬಲ ನೀಡಬಹುದು ಎಂಬ ಸೂಚನೆಯನ್ನು ವರ್ಮಾ ಅವರು ನೀಡಿದ್ದರು.

ನುಡಿ-ಕಿಡಿ

ನಾವು ರಾಮಮಂದಿರ ನಿರ್ಮಾಣದಲ್ಲಿ ನಿರತರಾಗಿದ್ದರೆ, ವಿರೋಧ ಪಕ್ಷಗಳು ಅದನ್ನು ತಡೆಯಲು ಯತ್ನಿಸುತ್ತಿವೆ. 1992ರಲ್ಲಿ ಕರ ಸೇವಕರ ಮೇಲೆ ಗುಂಡು ಹಾರಿಸಿದ್ದವರು, ಈಗ ಚುನಾವಣೆ ಕಾರಣಕ್ಕೆ ದೇವಾಲಯಗಳಿಗೆ ಭೇಟಿ ನೀಡುತ್ತಿದ್ದಾರೆ. ಸಮಾಜವಾದಿ ಪಕ್ಷವು ದೇಶ ದ್ರೋಹಿಗಳಿಗೆ, ದೇಶವಿರೋಧಿಗಳಿಗೆ ಬೆಂಬಲ ನೀಡಿತ್ತು

ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ

ಬಿಜೆಪಿ ನಾಯಕರು ಇಲ್ಲಿ ಬಂದು ಬಡವರಿಗಾಗಿ ಏನೆಲ್ಲಾ ಮಾಡುತ್ತೇವೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾರೆ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ವಜ್ರಗಳ ಬೆಲೆ ಇಳಿಸಿದ್ದಾರೆ ಎಂಬ ವಿಚಾರ ನನ್ನ ಕಿವಿಗೆ ಬಿತ್ತು. ಇದೇ ನೋಡಿ ಬಿಜೆಪಿ ಬಡವರಿಗಾಗಿ ಮಾಡುವ ಉಪಕಾರ

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ



ಯೋಗಿ ಆದಿತ್ಯನಾಥ ಅವರದ್ದು ಅತ್ಯಂತ ಸ್ವಚ್ಛ ವ್ಯಕ್ತಿತ್ವ. ಅವರ ಮೇಲೆ ಭ್ರಷ್ಟಾಚಾರ ಸೇರಿ ಯಾವುದೇ ರೀತಿಯ ಆರೋಪ ಇಲ್ಲ. ಅವರ ಸ್ವಚ್ಛ ವ್ಯಕ್ತಿತ್ವವು ಈ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗಲಿದೆ. ಬಿಜೆಪಿ ಕಳೆದ ಬಾರಿಗಿಂತ ಹೆಚ್ಚು ಸ್ಥಾನಗಳಲ್ಲಿ ಆರಿಸಿ ಬರಲಿದೆ

ಅರುಣ್ ಸಿಂಗ್, ಬಿಜೆಪಿ ನಾಯಕ



ಬಿಜೆಪಿ ಈ ಬಾರಿ ಸೋಲಲಿದೆ. 2012ರಲ್ಲಿ ಬಿಜೆಪಿ ಕೇವಲ 47 ಸ್ಥಾನಗಳನ್ನು ಗೆದ್ದಿತ್ತು. ಈ ಬಾರಿಯೂ ಬಿಜೆಪಿಗೆ ಅದೇ ಸ್ಥಿತಿ ಬರಲಿದೆ. ಸಮಾಜವಾದಿ ಪಕ್ಷವು ಭಾರಿ ಬಹುಮತದೊಂದಿಗೆ ಸರ್ಕಾರ ರಚಿಸಲಿದೆ. ಹಿಂದುಳಿದ ವರ್ಗಗಳ ಜನರು ಬಿಜೆಪಿ ಜತೆಗೆ ಇದ್ದಾರೆಯೇ ಅಥವಾ ಇಲ್ಲವೇ ಎಂಬುದು ಮಾರ್ಚ್ 10ರಂದು ಗೊತ್ತಾಗಲಿದೆ

ಸ್ವಾಮಿ ಪ್ರಸಾದ್ ಮೌರ್ಯ, ಸಮಾಜವಾದಿ ಪಕ್ಷದ ಅಭ್ಯರ್ಥಿ

ಆಧಾರ: ಪಿಟಿಐ

ಚುನಾವಣಾ ಕಣದಲ್ಲಿ

- ಉತ್ತರ ಪ್ರದೇಶದ ಹಾಪುರ್‌ನಲ್ಲಿ ಚುನಾವಣಾ ರ‍್ಯಾಲಿ ನಡೆಸಿ ದೆಹಲಿಗೆ ವಾಪಸಾಗುತ್ತಿದ್ದ ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಅವರ ಕಾರಿನ ಮೇಲೆ ಗಾಜಿಯಾಬಾದ್ ಬಳಿ ಗುಂಡಿನ ದಾಳಿ ನಡೆದಿದೆ. ಗುಂಡಿನ ದಾಳಿಗೆ ಗುರಿಯಾದ ಕಾರಿನ ಚಿತ್ರವನ್ನು ಒವೈಸಿ ಅವರು ಟ್ವೀಟ್ ಮಾಡಿದ್ದಾರೆ
- ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ಬಾರಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಅಜಯ್ ಕುಮಾರ್ ಅವರು ಗುರುವಾರ ಪಕ್ಷವನ್ನು ತೊರೆದಿದ್ದಾರೆ. ತಾವು ಶಾಸಕರಾಗಿದ್ದ ಕ್ಷೇತ್ರದಲ್ಲಿ ಬಿಜೆಪಿಯ ಮಿತ್ರಪಕ್ಷವಾದ ಅಪ್ನಾ ದಳದ ಅಭ್ಯರ್ಥಿಗೆ ಟಿಕೆಟ್ ನೀಡಿರುವುದಕ್ಕೆ ಈ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ಅವರು ಹೇಳಿದ್ದಾರೆ. ಅಪ್ನಾ ದಳದ ಅಭ್ಯರ್ಥಿಗೆ ಟಿಕೆಟ್ ನೀಡಿದ್ದಕ್ಕೆ ಬೇಸರವಿಲ್ಲ. ಆದರೆ ಈ ಬಗ್ಗೆ ಪಕ್ಷದ ನಾಯಕರು ತಮ್ಮೊಂದಿಗೆ ಚರ್ಚಿಸಲೇ ಇಲ್ಲ. ಇದರಿಂದ ತೀರಾ ಬೇಸರವಾಗಿದೆ ಎಂದು ಅವರು ಹೇಳಿದ್ದಾರೆ.
- ಉತ್ತರ ಪ್ರದೇಶದ ಮತೇರಾ ವಿಧಾನಸಭಾ ಕ್ಷೇತ್ರದ ಸಮಾಜವಾದಿ ಪಕ್ಷದ ಅಭ್ಯರ್ಥಿ ಹಾಜಿ ಮೊಹಮ್ಮದ್ ರಮ್ಜಾನ್ ಅವರು ಟಿಕೆಟ್ ವಾಪಸ್ ನೀಡುತ್ತೇನೆ ಎಂದು ಹೇಳಿದ್ದಾರೆ. 'ನಾನು ಪಕ್ಷಕ್ಕಾಗಿ ಶ್ರಾವಸ್ತಿ ಕ್ಷೇತ್ರದಲ್ಲಿ 10 ವರ್ಷಗಳಿಂದ ದುಡಿದಿದ್ದೇನೆ. ಮತೇರಾ ನನಗೆ ತೀರಾ ಹೊಸ ಪ್ರದೇಶ. ಹೊಸ ಕ್ಷೇತ್ರದಲ್ಲಿ ಚುನಾವಣೆ ಸ್ಪರ್ಧಿಸುವುದು ಕಷ್ಟ. ಹೀಗಾಗಿ ಟಿಕೆಟ್ ವಾಪಸ್ ನೀಡಲು ನಿರ್ಧರಿಸಿದ್ದೇನೆ' ಎಂದು ಅವರು ಹೇಳಿದ್ದಾರೆ

ಗುಂಡೇಟಿನಿಂದ ಕಾರಿನ ಬಾಗಿಲುಗಳಲ್ಲಿ ರಂಧ್ರವಾಗಿರುವ ಚಿತ್ರವನ್ನು ಅಸಾದುದ್ದೀನ್ ಒವೈಸಿ ಟ್ವೀಟ್ ಮಾಡಿದ್ದಾರೆ

- ಕಾಂಗ್ರೆಸ್ ಪಕ್ಷವು ಉತ್ತರ ಪ್ರದೇಶ ಚುನಾವಣೆಗೆ ತಮ್ಮ ಪಕ್ಷದ 27 ಅಭ್ಯರ್ಥಿಗಳ ಹೊಸ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ 11 ಮಹಿಳೆಯರಿಗೆ ಸ್ಥಾನ ನೀಡಲಾಗಿದೆ. ಒಟ್ಟು ಕ್ಷೇತ್ರಗಳಲ್ಲಿ ಶೇ 40ರಷ್ಟು ಟಿಕೆಟ್ ಅನ್ನು ಮಹಿಳೆಯರಿಗೇ ನೀಡುತ್ತೇವೆ ಎಂದು ಕಾಂಗ್ರೆಸ್ ಘೋಷಿಸಿತ್ತು

ಆಧಾರ: ಪಿಟಿಐ

ಮೋದಿ ವರ್ಚುವಲ್ ರ‍್ಯಾಲಿ ಇಂದು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಾಖಂಡ ಚುನಾವಣಾ ಪ್ರಚಾರಕ್ಕಾಗಿ ವರ್ಚುವಲ್ ರ‍್ಯಾಲಿಯನ್ನು ಶುಕ್ರವಾರ ನಡೆಸಲಿದ್ದಾರೆ. ಉತ್ತರಾಖಂಡದ 14 ವಿಧಾನಸಭಾ ಕ್ಷೇತ್ರಗಳ ಮತದಾರರನ್ನು ಉದ್ದೇಶಿಸಿ ಅವರು ಮಾತನಾಡಲಿದ್ದಾರೆ.

ಅದೇ ದಿನ ಉತ್ತರ ಪ್ರದೇಶದ ಪಶ್ಚಿಮ ಭಾಗದ ಸುಮಾರು 20 ಕ್ಷೇತ್ರಗಳನ್ನು ಉದ್ದೇಶಿಸಿ ವರ್ಚುವಲ್ ರ‍್ಯಾಲಿ ನಡೆಸಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಚಿತ್ರದುರ್ಗ.

ಸಂ: ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐಎಫ್‌ಟಿ–20/2021–22/ ದಿನಾಂಕ: 01.02.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ **ಕೆ.ಡಬ್ಲ್ಯೂ–4** ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಹಾಗೂ ಅರ್ಹ ಏಜೆನ್ಸಿ/ಕನ್ಸಲ್ಟೆನ್ಸಿ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು: (1) ಪ್ಯಾಕೇಜ್–02: ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಅರಿಸಿನಗುಂಡಿ 5ನೇ ಕಣ್ಣಿನ ಹಳ್ಳ ಗ್ರಾಮದ ಹತ್ತಿರ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ & ಗೋಗುದ್ದು ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ. ಟೆಂಡರ್‌ಗಿಟ್ಟಿರುವ ಮೊತ್ತ: ರೂ. 106.79. ಮುಂಗಡ ಠೇವಣಿ ಮೊತ್ತ: ರೂ. 161000.00. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ (ಮಳೆಗಾಲ ಸೇರಿ): 05 ತಿಂಗಳು. (2) ಪ್ಯಾಕೇಜ್–03: ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಗೌನಹಳ್ಳಿ ಗ್ರಾಮದ ಹತ್ತಿರ ಹಳ್ಳಕ್ಕೆ ಚೆಕ್ ಡ್ಯಾಂ ಕಂ ಕಾಸ್ ವೇ ನಿರ್ಮಾಣ, ಗೌನಹಳ್ಳಿ ಹುಣಸೇಕಣಿವೆ ಹಳ್ಳಕ್ಕೆ ಗ್ರಾಮದ ಹತ್ತಿರ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ & ದಿಂಡಾವರ ಗ್ರಾಮದ ಹತ್ತಿರ ಚೆಕ್ ಡ್ಯಾಂ ನಿರ್ಮಾಣ. ಟೆಂಡರ್‌ಗಿಟ್ಟಿರುವ ಮೊತ್ತ: ರೂ. 160.29. ಮುಂಗಡ ಠೇವಣಿ ಮೊತ್ತ: ರೂ. 241000.00. ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಪಡಿಸಿರುವ ಕಾಲಾವಧಿ (ಮಳೆಗಾಲ ಸೇರಿ): 05 ತಿಂಗಳು.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 02.02.2022ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 10.02.2022 ಸಾಯಂಕಾಲ 05:30ರ ವರೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 11.02.2022ರ ಸಾಯಂಕಾಲ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14.02.2022 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ: 15.02.2022 ಸಾಯಂಕಾಲ 04:30 ಗಂಟೆಯ ನಂತರ (ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227ರಿಂದ ಪಡೆಯಬಹುದು.

RO No. 854: DIPR/CTA/MCA/2021-22 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ

ಎಮ್.ಎಸ್.ಕೆ. ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ

ಸಂಖ್ಯೆ: ಕಕರಸಾ/ಕಾನಿಅ/ಡಿಬಿ/ಟೆ/ 790 /2021–22 ದಿನಾಂಕ 02–02–2022

ಅಲ್ಪಾವಧಿ ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ : 07 & 08/2021–22

Through GOK e-procurement platform www.eproc.karnataka.gov.in

1) ಕಾಮಗಾರಿ ವಿವರ : (1) ಕಲಬುರಗಿ ಜಂಟಿ ಆಯುಕ್ತರು, ಹಾಗೂ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ. (2) ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕಟ್ಟಡ ನಿರ್ಮಿಸುವ ಕಾಮಗಾರಿ, 2) ಲೆಕ್ಕ ಶೀರ್ಷಿಕೆ : 2021–22ನೇ ಸಾಲಿನ ಸಾರಿಗೆ ಇಲಾಖೆ ಅನುದಾನ ಅಡಿಯಲ್ಲಿ, 3) ಟೆಂಡರಿಗಿಟ್ಟ ಮೊತ್ತ : ಕನಿಷ್ಠ **ರೂ. 750.00 ಲಕ್ಷ,** ಗರಿಷ್ಠ **ರೂ. 950.00 ಲಕ್ಷ,** 4) ಗುತ್ತಿಗೆದಾರರ ಅರ್ಹತೆ : ಇ–ಪ್ರೋಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ : **16–02–2022 ಸಾಯಂಕಾಲ 5:00 ಗಂಟೆಯವರೆಗೆ,** 6) ಟೆಂಡರ್ ಅರ್ಜಿ ಮತ್ತು ಇ.ಎಂ.ಡಿ. ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ. ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : **21–02–2022 ಸಾಯಂಕಾಲ 5:00 ಗಂಟೆಯವರೆಗೆ,** 8) ಟೆಂಡರ್ ಬಿಡ್ ತೆರೆಯುವ ದಿನಾಂಕ : **23–02–2022 ಮುಂಜಾನೆ 11:00 ಗಂಟೆಯವರೆಗೆ,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ. ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ. 7760992033 / 08472–220663, 10) ಅಂತರಜಾಲ ತಾಣದ ವಿಳಾಸ : ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ದಿನಾಂಕ : **11–02–2022** ರ ನಂತರ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ. www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕ.ಕ.ರ.ಸಾ. ನಿಗಮ, ಕಾಮಗಾರಿ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1046/ಎಂ.ಸಿ.&ಎ/2021–22

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಯತ್ತತಾ ಸಂಸ್ಥೆ)

ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.

ದೂರವಾಣಿ: 91-80-26560722 / 26560723 / 66697999 E-mail: kidwai@nic.in

No.KMIO/SME(1)/Tender/Ambulance Service/231/2020-21 Date: 02.02.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮುಖಾಂತರ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Item
1.	No.KMIO/SME(1)/Tender/Ambulance Service/231/2020-21 Date: 02.02.2022	Providing Ambulance Service on Rate Contract Basis at KMIO., (Call-4)
2.	No. KMIO/SME(1)/Tender/Blood Bags/292/2021-22 Dated: 02-02-2022	Procurement of Top & Bottom Blood Bag CPD/SAGM to KMIO.,
3.	No. KMIO/SME(1)/Tender/BME/293/ 2021-22 Dated: 02-02-2022	Supplying and installation of Fire Hydrant System for Jindal Block, Major OT complex, BMT Block at KMIO., Bangalore.
4.	No. KMIO/SME(1)/Tender/M. Equip/294/ 2021-22 Dated: 02-02-2022	Procurement of Sterile Connecting Device at Blood Bank & BMT Unit.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **05.02.2022** ರಿಂದ **15.02.2022** ರವರೆಗೆ. ವೆಬ್‌ಸೈಟ್: **https://eproc.karnataka.gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **15.02.2022** ರಂದು **ಮಧ್ಯಾಹ್ನ 3:00 p.m.** ಗಂಟೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

DIPR/DDU/AAPL/RO3194/21-22 ಸಹಿ/– ನಿರ್ದೇಶಕರು

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃ.ಭಾ.ಜ.ನಿ.ನಿ, ಅಣೆಕಟ್ಟು ವಿಭಾಗ, ನಾರಾಯಣಪೂರ – 585 219 ತಾ. ಹುಣಸಗಿ, ಜಿ. ಯಾದಗಿರಿ | Office of the Executive Engineer, KBJNL Dam Divin. Narayanpur - 585219

ಸಂ:ಕೃಭಾಜನಿನಿ/ಕಾನಿಇಂ/ಆವಿನಾ/ಪಿ.ಬಿ/ಡ್ರಿಪ್–II/ಪಿ–1/2 ನೇ ಕರೆ/2021–22/1566 ದಿ:02.02.2022

ರಾಷ್ಟ್ರೀಯ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ ರವರು ಈ ಕೆಳಕಂಡ ಕಾಮಗಾರಿಗಾಗಿ ಎರಡು ಕವರ್ ಸಿಸ್ಟಮ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗೆ ಈ ಕಚೇರಿ ಟೆಂಡರ್ ಪ್ರಕಟಣೆ ಸಂ: KBJNL/NCB/EE/DDN/DRIP-II/P-1/Call-2/TENDER/2021-22/1565 Date : 02.02.2022 ಅಡಿಯಲ್ಲಿ ಮೊಹರಾದ ಐಟಂವಾರು ಟೆಂಡರ್ ಗಾಗಿ ಇ–ಪೋರ್ಟಲ್ ಮುಖಾಂತರ www.eproc.karnataka.gov.in ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಕಾಮಗಾರಿಯ ಟೆಂಡರಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ)	ಇ–ಪ್ರಾಕ್ಯೂರಮೆಂಟ ಫೀ	ಕಾಮಗಾರಿಯ ಕಾಲಾವಧಿ	ಅರ್ಹ ಗುತ್ತಿಗೆದಾರರು
1.	2.	3.	4.	5.	6.	7.
1.	Treatment of the Masonry Dam for Block no 38 to 52 below MDDL RL 486.00 M including arresting observed leakages in Drainage gallery of Concrete over flow section of Narayanpur Dam (Package-I) under DRIP Phase-II. (Indent No:21663 Call-2).	2171.15	21.72	ಇ–ಪ್ರಾಕ್ಯೂರಮೆಂಟ ನಂತೆ	18 ತಿಂಗಳು (ಮಳೆಗಾಲ ಒಳಗೊಂಡು)	ಭಾರತ ಸರ್ಕಾರದ/ ಇತರೆ ರಾಜ್ಯ ಸರ್ಕಾರ/ಕೇಂದ್ರ ಸರ್ಕಾರದ ಅಧೀನದಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರು

ಟೆಂಡರ್ ಪೂರ್ವಭಾವಿ ಸಭೆಗೆ ಸಂಬಂದ ಪಟ್ಟಂತೆ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 11.02.2022 ಆಗಿದ್ದು, ಪ್ರಶ್ನಾವಳಿಗಳನ್ನು ಕೇವಲ ಇ–ಪ್ರಾಕ್ಯೂರಮೆಂಟ್ ಹಾಗೂ ಪೂರ್ವಭಾವಿ ಸಭೆಯ ಅವಧಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲಾಗುವದು. ಟೆಂಡರ್ ಪ್ರಕ್ರಿಯೆಯ ಈ ಕೆಳಗಿನಂತೆ ಇರುತ್ತದೆ.

ಕ್ರ.ಸಂ.	ಟೆಂಡರ್ ಪ್ರಕ್ರಿಯೆ ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು www.eproc.karnataka.gov.in ಮೂಲಕ ವೀಕ್ಷಿಸಲು ಹಾಗೂ ಇ–ಪ್ರಾಕ್ಯೂರಮೆಂಟ ಫೀ ಸಲ್ಲಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ : 04.02.2022 ರಿಂದ 14.03.2022 ಸಾಯಂಕಾಲ 5.00 ವರೆಗೆ
2.	ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ (ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಲೋಕೋಪಯೋಗಿ ಇಲಾಖೆ ಕಚೇರಿ ಆವರಣ, 3ನೇ ಮಹಡಿ, ಕೇ.ಆರ್ ವೃತ್ತ, ಬೆಂಗಳೂರು ಇವರ ಕಚೇರಿಯಲ್ಲಿ)	ದಿನಾಂಕ:15.02.2022 ಬೆಳಿಗ್ಗೆ 11.00 ಗಂಟೆಗೆ
3.	ಟೆಂಡರ್‌ಗೆ ಸಂಬಂದಪಟ್ಟಂತೆ ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ : 11.02.2022, ಸಾಯಂಕಾಲ 5.00 ವರೆಗೆ
4.	ಟೆಂಡರ್ ಅನ್ನು ಸಲ್ಲಿಸಲು ಕಡೆಯ ದಿನಾಂಕ	ದಿನಾಂಕ : 14.03.2022, ಸಾಯಂಕಾಲ 5.00 ವರೆಗೆ
5.	ಟೆಂಡರ್ ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನಿಯರು, ಕೃಭಾಜನಿನಿ, ಆಣೆಕಟ್ಟು ವಿಭಾಗ ನಾರಾಯಣಪೂರ, ಇವರ ಕಚೇರಿಯಲ್ಲಿ)	ದಿನಾಂಕ : 16.03.2022, ಬೆಳಿಗ್ಗೆ 11.00 ಗಂಟೆಗೆ
6.	ಟೆಂಡರ್ ನ ಆರ್ಥಿಕ ಬಿಡ್ ತೆರೆಯುವ ದಿನಾಂಕ	ತಾತ್ಕಾಲಿಕ ದಿನಾಂಕ:21.03.2022.ತಾಂತ್ರಿಕ ಬಿಡ್ ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ನಿಖರವಾದ ದಿನಾಂಕ ತಿಳಿಸಲಾಗುವದು.

ಇನ್ನೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರ್ ಕೃಭಾಜನಿನಿ, ಆಣೆಕಟ್ಟು ವಿಭಾಗ, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಶಂಕರ್ ಹೆಚ್ ನಾಯ್ಕೋಡಿ
ಕಾರ್ಯನಿರ್ವಾಹಕ ಇಂಜಿನೀಯರರು, ಕೃ.ಭಾ.ಜ.ನಿ.ನಿ, ಅಣೆಕಟ್ಟು ವಿಭಾಗ, ನಾರಾಯಣಪುರ..

ಎಲ್‌ಐಸಿ: ಆಸ್ತಿ, ಲಾಭದ ಮೌಲ್ಯ ₹ 5 ಲಕ್ಷ ಕೋಟಿ

ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರದ ಮಾಲೀಕತ್ವದಲ್ಲಿರುವ ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಇಂದಿನ ಆಸ್ತಿಗಳ ಮೌಲ್ಯ ಹಾಗೂ ಭವಿಷ್ಯದ ಲಾಭಗಳ ಇಂದಿನ ಮೌಲ್ಯದ ಮೊತ್ತವು ₹ 5 ಲಕ್ಷ ಕೋಟಿಗಿಂತಲೂ ಹೆಚ್ಚು ಎಂದು ಕೇಂದ್ರ ಹೂಡಿಕೆ ಮತ್ತು ಸಾರ್ವಜನಿಕ ಸ್ವತ್ತು ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ತಿಳಿಸಿದ್ದಾರೆ.

ಇವರು ಎಲ್‌ಐಸಿಯ ಐಪಿಒ (ಷೇರುಗಳ ಆರಂಭಿಕ ಸಾರ್ವಜನಿಕ ಕೊಡುಗೆ) ಪ್ರಕ್ರಿಯೆಯ ಮೇಲ್ವಿಚಾರಣೆಯ ಹೊಣೆ ಹೊತ್ತಿದ್ದಾರೆ.

ಎಲ್‌ಐಸಿಯ ಆಸ್ತಿಗಳ ಇಂದಿನ ಮೌಲ್ಯ ಹಾಗೂ ಭವಿಷ್ಯದ ಲಾಭಗಳ ಇಂದಿನ ಮೌಲ್ಯ ಎಷ್ಟು ಎಂಬುದನ್ನು ತಿಳಿದುಕೊಳ್ಳಲು ಹೂಡಿಕೆದಾರರು ಕಾತರರಾಗಿ ಇದ್ದಾರೆ. ಎಲ್‌ಐಸಿಯ ಮೌಲ್ಯದ ಬಗ್ಗೆ ಊಹೆಗಳನ್ನು ಆಧರಿಸಿದ ವರದಿಗಳು ಪ್ರಕಟವಾಗಿವೆ. ಆದರೆ, ಸರ್ಕಾರದ ಅಧಿಕಾರಿಯೊಬ್ಬರು ಮೌಲ್ಯದ ಬಗ್ಗೆ ಖಚಿತವಾಗಿ ಮಾತನಾಡಿರುವುದು ಇದೇ ಮೊದಲು.

ಆಸ್ತಿಗಳ ಇಂದಿನ ಮೌಲ್ಯ ಹಾಗೂ ಭವಿಷ್ಯದ ಲಾಭಗಳ ಇಂದಿನ ಮೌಲ್ಯದ ಮೊತ್ತವು ಎಲ್‌ಐಸಿಯ ಮಾರುಕಟ್ಟೆ ಬಂಡವಾಳ ಮೌಲ್ಯವನ್ನು ನಿರ್ಧರಿಸಲು ಸಹಾಯ ಮಾಡುತ್ತದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,780
ಇಂದಿನ ಅಂತ್ಯ	17,560
▼	220
ದಿನದ ಕನಿಷ್ಠ	17,511

ವಿನಿಮಯ ದರ

$ ಡಾಲರ್	74.88
£ ಪೌಂಡ್	101.45
€ ಯುರೊ	85.55
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1330)
ಸೋಯಾ (ರಿಫೈನ್ಡ್)	₹1280 (1277)
ಸೂರ್ಯಕಾಂತಿ (ರಿಫೈನ್ಡ್)	₹1290 (1280)
ಪಾಮೋಲಿನ್	₹1230 (1235)

‘ಕ್ರಿಪ್ಟೊಕರೆನ್ಸಿಗಳಿಗೆ ಕಾನೂನು ಮಾನ್ಯತೆ ಸಾಧ್ಯವಿಲ್ಲ’

ನವದೆಹಲಿ (ಪಿಟಿಐ): ದೇಶದಲ್ಲಿ ಕ್ರಿಪ್ಟೊಕರೆನ್ಸಿಗಳು ಯಾವ ಸಂದರ್ಭದಲ್ಲಿಯೂ ಕಾನೂನುಬದ್ಧ ಕರೆನ್ಸಿ ಆಗುವುದಿಲ್ಲ ಎಂದು ಕೇಂದ್ರ ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೇಳಿದರು.

ವರ್ಚುವಲ್ ಡಿಜಿಟಲ್ ಆಸ್ತಿಗಳು, ಕ್ರಿಪ್ಟೊಕರೆನ್ಸಿಗಳಲ್ಲಿನ ಹೂಡಿಕೆಯಿಂದ ಬರುವ ಲಾಭಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸುವ ಪ್ರಸ್ತಾವ ಕೇಂದ್ರ ಬಜೆಟ್‌ನಲ್ಲಿ ಇದೆ. ‘ಚಿನ್ನ ಮತ್ತು ವಜ್ರ ಬಹಳ ಮೌಲ್ಯಯುತವಾದವು. ಆದರೆ ಅವು ಕಾನೂನು ಮಾನ್ಯತೆ ಹೊಂದಿರುವ ಕರೆನ್ಸಿ ಅಲ್ಲ. ಖಾಸಗಿ ಕ್ರಿಪ್ಟೊಕರೆನ್ಸಿಗಳು ಕೂಡ ದೇಶದಲ್ಲಿ ಎಂದಿಗೂ ಕಾನೂನುಬದ್ಧ ಕರೆನ್ಸಿ ಆಗುವುದಿಲ್ಲ’ ಎಂದು ತಿಳಿಸಿದರು.

‘ಆರ್‌ಬಿಐ ಮೂಲಕ ಚಲಾವಣೆಗೆ ಬರಲಿರುವ ಡಿಜಿಟಲ್ ರೂಪಾಯಿಗೆ ಮಾತ್ರ ದೇಶದಲ್ಲಿ ಕರೆನ್ಸಿಯಾಗಿ ಕಾನೂನು ಮಾನ್ಯತೆ ಇರಲಿದೆ’ ಎಂದರು.

ಸೂಚ್ಯಂಕ ಇಳಿಕೆ

ಮುಂಬೈ (ಪಿಟಿಐ): ಐ.ಟಿ. ಮತ್ತು ಹಣಕಾಸು ವಲಯದ ಷೇರುಗಳು ಲಾಭ ಗಳಿಕೆಗೆ ಒಳಗಾಗಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಗುರುವಾರ ಇಳಿಕೆ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 770 ಅಂಶ ಇಳಿಕೆ ಕಂಡು 58,788 ಅಂಶಗಳಿಗೆ ತಲುಪಿತು.

ಆರು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದ ವಹಿವಾಟು ನಡೆಸುವ ವಿಶ್ವಾಸ

ತಗ್ಗಿದ ಸೇವಾ ವಲಯದ ಚಟುವಟಿಕೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳ ಹೆಚ್ಚಳದಿಂದಾಗಿ ನಿರ್ಬಂಧಗಳು ಮತ್ತೆ ಜಾರಿಗೆ ಬಂದ ಪರಿಣಾಮವಾಗಿ ಹಾಗೂ ಹಣದುಬ್ಬರದ ಒತ್ತಡದಿಂದಾಗಿ ದೇಶದ ಸೇವಾ ವಲಯದ ಚಟುವಟಿಕೆಗಳು ಜನವರಿಯಲ್ಲಿ ಇಳಿಕೆ ಕಂಡಿವೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ತಿಳಿಸಿದೆ.

ಸೇವಾ ವಲಯದ ಬೆಳವಣಿಗೆಯನ್ನು ತಿಳಿಸುವ ಸೂಚ್ಯಂಕವು 2021ರ ಡಿಸೆಂಬರ್‌ನಲ್ಲಿ 55.5ರಷ್ಟು ಇದ್ದಿದ್ದು 2022ರ ಜನವರಿಯಲ್ಲಿ 51.5ಕ್ಕೆ ಇಳಿಕೆ ಆಗಿದೆ. ಇದು ಆರು ತಿಂಗಳ ಅವಧಿಯಲ್ಲಿ ದಾಖಲಾಗಿರುವ ಅತ್ಯಂತ ನಿಧಾನಗತಿಯ ಬೆಳವಣಿಗೆ.

ಓಮೈಕ್ರಾನ್ ಸೋಂಕು ವೇಗವಾಗಿ ಹರಡಿದ ಕಾರಣದಿಂದಾಗಿ ಹಾಗೂ ದೇಶದ ಕೆಲವು ಭಾಗಗಳಲ್ಲಿ ನಿರ್ಬಂಧಗಳನ್ನು ಜಾರಿಗೊಳಿಸಿದ್ದರಿಂದಾಗಿ ವಿವಿಧ ಸೇವೆಗಳಿಗೆ ಮಾರುಕಟ್ಟೆಯಲ್ಲಿ ಬರುವ

ಬೇಡಿಕೆ ತಗ್ಗಿತು ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದವರು ಹೇಳಿದ್ದಾರೆ.

ಸಾಂಕ್ರಾಮಿಕದ ತೀವ್ರತೆ, ನಿರ್ಬಂಧಗಳ ಮರು ಜಾರಿ ಮತ್ತು ಹಣದುಬ್ಬರದ ಒತ್ತಡಗಳಿಂದ ಬೆಳವಣಿಗೆಗೆ ಹಾನಿಯಾಗುತ್ತದೆ ಎಂದು ಕಂಪನಿಗಳು ಆತಂಕಕ್ಕೆ ಒಳಗಾದವು. ವ್ಯಾಪಾರ ನಡೆಸುವ ವಿಶ್ವಾಸವು ಸಕಾರಾತ್ಮಕ ಮಟ್ಟದಲ್ಲಿಯೇ ಇದ್ದರೂ ಆರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ.

ಕೋವಿಡ್‌ನ ಹೊಸ ಅಲೆಯು ಎಷ್ಟು ಸಮಯದವರೆಗೆ ಇರಲಿದೆ ಎನ್ನುವ ಆತಂಕವು ವ್ಯಾಪಾರದ ವಿಶ್ವಾಸವನ್ನು ಕುಗ್ಗಿಸಿದ್ದು, ಉದ್ಯೋಗ ಕಡಿತಕ್ಕೆ ಕಾರಣವಾಗಿದೆ. ಹಣದುಬ್ಬರದ ಒತ್ತಡವೂ ಕಂಪನಿಗಳನ್ನು ಚಿಂತೆಗೆ ಈಡುಮಾಡಿದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಹೇಳಿದ್ದಾರೆ.

ಸೇವಾ ವಲಯದಲ್ಲಿ ಸತತ ಎರಡನೇ ತಿಂಗಳಿನಲ್ಲಿಯೂ ಉದ್ಯೋಗ ಕಡಿತ ಕಂಡುಬಂದಿದೆ. ಭವಿಷ್ಯದ ಬಗೆಗಿನ ಅನಿಶ್ಚಿತ ಸ್ಥಿತಿ ಮತ್ತು ಬೇಡಿಕೆ ತಗ್ಗಿರುವುದೇ ಇದಕ್ಕೆ ಕಾರಣ ಎಂದು ಅವರು ತಿಳಿಸಿದ್ದಾರೆ.

ಸೇವೆಗಳು ಮತ್ತು ತಯಾರಿಕಾ ವಲಯದ ಒಟ್ಟಾರೆ ಬೆಳವಣಿಗೆಯನ್ನು ಸೂಚಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಡಿಸೆಂಬರ್‌ನಲ್ಲಿ 56.4ರಷ್ಟು ಇದ್ದಿದ್ದು ಜನವರಿಯಲ್ಲಿ 53ಕ್ಕೆ ಇಳಿಕೆ ಆಗಿದೆ. ಇದು ಸಹ ಆರು ತಿಂಗಳಲ್ಲಿ ಕಂಡುಬಂದ ಅತ್ಯಂತ ನಿಧಾನಗತಿಯ ಬೆಳವಣಿಗೆ ಆಗಿದೆ.

ಖಾಸಗಿ ವಲಯದಲ್ಲಿ ಸತತ ಎರಡನೇ ತಿಂಗಳಿನಲ್ಲಿಯೂ ಉದ್ಯೋಗ ಕಡಿತ ಆಗಿದೆ ಎನ್ನುವುದನ್ನು ಜನವರಿ ತಿಂಗಳ ಅಂಕಿ–ಅಂಶಗಳು ಸೂಚಿಸುತ್ತಿವೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

ಹಣದುಬ್ಬರವು 2011ರ ಬಳಿಕ ಅತ್ಯಂತ ಗರಿಷ್ಠ ಮಟ್ಟದಲ್ಲಿ ಏರಿಕೆ ಕಂಡಿದೆ. ಆಹಾರ, ಇಂಧನ ಮತ್ತು ಕಚ್ಚಾ ಸಾಮಗ್ರಿಗಳ ಜೊತೆಗೆ ಸಿಬ್ಬಂದಿ ಮತ್ತು ಸಾರಿಗೆ ವೆಚ್ಚವೂ ಗರಿಷ್ಠ ಮಟ್ಟದಲ್ಲಿದೆ ಎಂದು ಸಂಸ್ಥೆಯು ತಿಳಿಸಿದೆ.

ನೇರ ತೆರಿಗೆಗಳ ಕೇಂದ್ರೀಯ ಮಂಡಳಿ ಅಧ್ಯಕ್ಷ ಮೊಹಾಪಾತ್ರ ವಿಶ್ವಾಸ

ಗುರಿ ಮೀರಲಿದೆ ನೇರ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಸಂಗ್ರಹವು ₹ 12.50 ಲಕ್ಷ ಕೋಟಿಯ ಅಂದಾಜನ್ನು ಮೀರುವ ನಿರೀಕ್ಷೆ ಇದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಲಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಅಧ್ಯಕ್ಷ ಜೆ.ಬಿ. ಮೊಹಾಪಾತ್ರ ಹೇಳಿದ್ದಾರೆ.

ತೆರಿಗೆ ಪಾವತಿ ಪ್ರಕ್ರಿಯೆಗಳನ್ನು ಸುಲಭಗೊಳಿಸಿರುವುದು ಹಾಗೂ ಕಾರ್ಪೊರೇಟ್ ತೆರಿಗೆ ಮತ್ತು ವೈಯಕ್ತಿಕ ಆದಾಯ ತೆರಿಗೆ ಸಂಗ್ರಹ ಹೆಚ್ಚಾಗಿರುವುದು ಸೇರಿದಂತೆ ಇನ್ನೂ ಹಲವು ಕಾರಣಗಳಿಂದಾಗಿ ಅಂದಾಜನ್ನು ಮೀರಿ ತೆರಿಗೆ ಸಂಗ್ರಹ ಆಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಫೆಬ್ರುವರಿ 1ರವರೆಗಿನ ಮಾಹಿತಿಯ ಪ್ರಕಾರ, ನೇರ ತೆರಿಗೆ ಸಂಗ್ರಹವು ₹ 10.38 ಲಕ್ಷ ಕೋಟಿ ಆಗಿದೆ. ಬಜೆಟ್‌ನಲ್ಲಿ ಅಂದಾಜು ಮಾಡಿದ್ದ ₹ 11.08 ಲಕ್ಷ ಕೋಟಿಗಿಂತಲೂ ₹ 70 ಸಾವಿರ ಕಡಿಮೆ ಆಗಿದೆ. ಈ ಸಂಖ್ಯೆಯು ಕಳೆದ ವರ್ಷದಲ್ಲಿ ಸಂಗ್ರಹ ಆಗಿರುವುದಕ್ಕಿಂತಲೂ ಉತ್ತಮವಾಗಿದೆ. ಹಣಕಾಸು ವರ್ಷವು ಅಂತ್ಯವಾಗಲು ಇನ್ನೂ ಎರಡು ತಿಂಗಳು ಬಾಕಿ ಇದೆ ಎಂದು ಅವರು ಹೇಳಿದ್ದಾರೆ.

‘ತೆರಿಗೆ ಸಂಗ್ರಹವು ಇಲಾಖೆ ಇತಿಹಾಸದಲ್ಲಿಯೇ ₹ 11.18 ಲಕ್ಷ ಕೋಟಿಯನ್ನು ದಾಟಿಲ್ಲ. ಈ ವರ್ಷ ನಾವು ₹ 12 ಲಕ್ಷ ಕೋಟಿಯ ಗುರಿ ಮೀರಲಿದ್ದೇವೆ. ಪರಿಷ್ಕೃತ ಅಂದಾಜಿನ ಪ್ರಕಾರ ₹ 12.50 ಲಕ್ಷ ಕೋಟಿ ಸಂಗ್ರಹ ಆಗುವ ಅಂದಾಜು ಮಾಡಲಾಗಿದೆ. ಈ ಗುರಿಯನ್ನು ತಲುಪುವ ಮತ್ತು ಅದನ್ನೂ ಮೀರುವ ವಿಶ್ವಾಸ ಇದೆ’ ಎಂದಿದ್ದಾರೆ.

ತೆರಿಗೆ ಸಂಗ್ರಹ ವಿವರ

ವರ್ಷ	ಮೊತ್ತ (ಲಕ್ಷ ಕೋಟಿಗಳಲ್ಲಿ)
2018-19	₹ 11.18
2019-20	₹ 10.28
2020-21	₹ 9.24
* 2021-22	₹ 12.50

* (ನಿರೀಕ್ಷೆ)

2021–22ಕ್ಕೆ ನಿರೀಕ್ಷೆ



ಬಾಷ್: ₹ 2 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಷ್ ಕಂಪನಿಯು ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದಿನ ನಾಲ್ಕರಿಂದ ಐದು ವರ್ಷಗಳ ಅವಧಿಯಲ್ಲಿ ಒಟ್ಟು ₹ 1,000 ಕೋಟಿ ಹೂಡಿಕೆ ಮಾಡಲಿದೆ ಎಂದು ಬಾಷ್ ಸಮೂಹದ ಭಾರತದ ಅಧ್ಯಕ್ಷ ಸೌಮಿತ್ರ ಭಟ್ಟಾಚಾರ್ಯ ತಿಳಿಸಿದರು. ‘ಇದಲ್ಲದೆ, ಡಿಜಿಟಲ್ ಮೊಬಿಲಿಟಿ ಕ್ಷೇತ್ರದಲ್ಲಿ ಹೆಚ್ಚುವರಿಯಾಗಿ ₹ 1,000 ಕೋಟಿ ಹೂಡಿಕೆ ಮಾಡಲಾಗುವುದು’ ಎಂದು ರಾಬರ್ಟ್ ಬಾಷ್ ಕಂಪನಿಯ ಆಡಳಿತ ಮಂಡಳಿ ಅಧ್ಯಕ್ಷ ಡಾ. ಸ್ಟೆಫನ್ ಹರ್ಟಂಗ್ ಹೇಳಿದರು.

ಬಾಷ್ ಕಂಪನಿಯು ಭಾರತದಲ್ಲಿ ಕಾರ್ಯಾಚರಣೆ ಆರಂಭಿಸಿ ನೂರು ವರ್ಷಗಳು ಸಂದಿರುವ ಆಚರಣೆಯ ಭಾಗವಾಗಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಭಟ್ಟಾಚಾರ್ಯ ಮತ್ತು ಹರ್ಟಂಗ್ ಮಾತನಾಡಿದರು. ಕಳೆದ

ಸೌಮಿತ್ರ ಭಟ್ಟಾಚಾರ್ಯ

ಡಾ. ಸ್ಟೆಫನ್ ಹರ್ಟಂಗ್

ಒಂದು ದಶಕದಲ್ಲಿ ದೇಶದಲ್ಲಿ ₹ 9 ಸಾವಿರ ಕೋಟಿಗಿಂತ ಹೆಚ್ಚು ಹಣವನ್ನು ಬಾಷ್ ಹೂಡಿಕೆ ಮಾಡಿದೆ ಎಂದು ಭಟ್ಟಾಚಾರ್ಯ ತಿಳಿಸಿದರು.

ಕಂಪನಿಯ ಭವಿಷ್ಯದ ಕೆಲವು ಚಟುವಟಿಕೆಗಳ ಬಗ್ಗೆ ಮಾತನಾಡಿದ ಭಟ್ಟಾಚಾರ್ಯ, ‘2030ರೊಳಗೆ ಬಾಷ್ ಕಂಪನಿಯು ಭೂಭರ್ತಿ ಜಾಗಗಳಿಗೆ ತ್ಯಾಜ್ಯ ಸುರಿಯುವ ಪರಿಪಾಠವನ್ನು ಸಂಪೂರ್ಣವಾಗಿ ಕೈಬಿಡಲಿದೆ’ ಎಂದರು. 1953ರಿಂದಲೂ ಕಂಪನಿಯು ‘ಭಾರತದಲ್ಲೇ ತಯಾರಿಸಿ’ ತತ್ವವನ್ನು ಪಾಲಿಸಿಕೊಂಡು ಬಂದಿದೆ. ಅಲ್ಲದೆ, ಜರ್ಮನಿಯ ಹೊರಗೆ ಬಾಷ್ ಕಂಪನಿಯು ಅತಿದೊಡ್ಡ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಹೊಂದಿರುವುದು ಭಾರತದಲ್ಲಿ ಎಂದು ಮಾಹಿತಿ ನೀಡಿದರು.

ದೇಶದಲ್ಲಿನ ಘಟಕಗಳಿಂದ ದೇಶಿ ಮಾರುಕಟ್ಟೆಯ ಬೇಡಿಕೆಗಳಿಗೆ ಸ್ಪಂದಿಸಲು ಆದ್ಯತೆ ನೀಡಲಾಗುತ್ತದೆ. ಅದರ ಜೊತೆಯಲ್ಲಿಯೇ ರಫ್ತು ವಿಚಾರವಾಗಿಯೂ ಗಮನ ನೀಡಲಾಗುವುದು ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಾಷ್ ಕಂಪನಿಯು ಭಾರತದಲ್ಲಿ ಮೊದಲ ಮಾರಾಟ ಏಜೆನ್ಸಿಯನ್ನು ಆರಂಭಿಸಿದ್ದು 1922ರಲ್ಲಿ. ಅದನ್ನು ಕಲ್ಕತ್ತಾದಲ್ಲಿ (ಇಂದಿನ ಕೋಲ್ಕತ್ತ) ಆರಂಭಿಸಲಾಯಿತು. 1953ರಲ್ಲಿ ಕಂಪನಿಯು ಬೆಂಗಳೂರಿನಲ್ಲಿ ತಯಾರಿಕಾ ಘಟಕವನ್ನು ಆರಂಭಿಸಿತು. ಕಂಪನಿಯು ದೇಶದ ಎಂಟು ರಾಜ್ಯಗಳಲ್ಲಿ ಈಗ 18 ಕಾರ್ಖಾನೆಗಳನ್ನು ಹೊಂದಿದೆ. ಒಟ್ಟು 32 ಸಾವಿರ ಜನರಿಗೆ ಉದ್ಯೋಗ ನೀಡಿದೆ ಎಂದು ಹರ್ಟಂಗ್ ತಿಳಿಸಿದರು.

ಸಮಾನತೆಯ ಪ್ರತಿಮೆ: 5ರಂದು ಮೋದಿ ಅನಾವರಣ

ನವದೆಹಲಿ (ಪಿಟಿಐ): ಹೈದರಾಬಾದ್‌ನಲ್ಲಿ ನಿರ್ಮಿಸಲಾಗಿರುವ 216 ಅಡಿ ಎತ್ತರದ ಸಂತ ರಾಮಾನುಜಾಚಾರ್ಯ ಅವರ ಪ್ರತಿಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಇದೇ 5ರಂದು ದೇಶಕ್ಕೆ ಸಮರ್ಪಿಸಲಿದ್ದಾರೆ. ಇದಕ್ಕೆ ‘ಸಮಾನತೆಯ ಪ್ರತಿಮೆ’ ಎಂದು ಹೆಸರಿಸಲಾಗಿದೆ.

11ನೇ ಶತಮಾನದ ಸಮಾಜ ಸುಧಾರಕರಾದ ಸಂತ ರಾಮಾನುಜಾಚಾರ್ಯರು ಜಾತಿ, ಧರ್ಮ, ಪಂಥ ಸೇರಿದಂತೆ ಎಲ್ಲದರಲ್ಲಿಯೂ ಸಮಾನತೆಯನ್ನು ಪ್ರತಿಪಾದಿಸಿದ್ದರು.

ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ ಮತ್ತು ತವರಗಳಿಂದ ಕೂಡಿದ ಪಂಚಲೋಹದಿಂದ ಪ್ರತಿಮೆಯನ್ನು ಸಂಯೋಜಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	460
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45100
ಹಳತು	46000-53000
ಕುಮಟ	
ಚಿಪ್ಪು	23109-31109
ಕೋಕ	15199-25672
ಹೊಸಚಾಲಿ	38899-40319
ಪುತ್ತೂರು	
ಹೊಸತು	27500-43000
ಸಿದ್ದಾಪುರ	
ಬಿಳಿಗೋಟು	21699-28899
ಚಾಲಿ	44699-48599
ಕೋಕ	20012-26699
ಹೊಸಚಾಲಿ	32877-40099
ಕೆಂಪುಗೋಟು	28989-33019
ರಾಶಿ	40799-47099
ತಟ್ಟಿಬೆಟ್ಟೆ	36999-43099
ಶಿರಸಿ	
ಬೆಟ್ಟೆ	32899-45499
ಬಿಳಿಗೋಟು	21699-33899
ಚಾಲಿ	33309-40951
ರಾಶಿ	40389-47618
ಯಲ್ಲಾಪುರ	
ಬಿಳಿಗೋಟು	25612-30240
ಕೋಕ	21099-26899
ಹಳೆಚಾಲಿ	45601-48090
ಹೊಸಚಾಲಿ	36020-40360
ಕೆಂಪುಗೋಟು	30036-36499
ರಾಶಿ	45699-51589
ತಟ್ಟಿಬೆಟ್ಟೆ	38330-45060
ರಾಮನಗರ ರೇಷ್ಮೆ	
ಮಿಶ್ರತಳಿ	400-740
ದ್ವಿತಳಿ	420-911

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15800	15950	238.8 ಸೆಂಟ್ಸ್
ಎಸಿ	---	7100	7350	
ಆರ್‌ಪಿ	---	7200	7400	ಲಂಡನ್
ಆರ್‌ಸಿ	---	3850	3975	2204 ಡಾಲರ್ಸ್

ಮರುಪರೀಕ್ಷೆಗೆ ಡಾ.ಹನುಮಂತಯ್ಯ ಮನವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಇತ್ತೀಚೆಗೆ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಕರ ಅರ್ಹತಾ (ಎನ್‌ಇಟಿ) ಪರೀಕ್ಷೆಯ ಕನ್ನಡ ವಿಷಯದ ಪ್ರಶ್ನೆಗಳನ್ನು ಹಿಂದಿಯಲ್ಲಿ ಮುದ್ರಿಸಿದ್ದರಿಂದ ಅಭ್ಯರ್ಥಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಕಾಂಗ್ರೆಸ್ ಸದಸ್ಯ ಡಾ.ಎಲ್.ಹನುಮಂತಯ್ಯ ಕೇಂದ್ರ ಸರ್ಕಾರವನ್ನು ಕೋರಿದರು.

ಗುರುವಾರ ರಾಜ್ಯಸಭೆಯ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಯುಜಿಸಿಯು ಕನ್ನಡ ಉಪನ್ಯಾಸಕ ಹುದ್ದೆಯ ಕನ್ನಡ ಭಾಷಾ ಪರೀಕ್ಷೆಯಲ್ಲೂ ಹಿಂದಿ ಹೇರಿಕೆಯ ಷಡ್ಯಂತ್ರ ನಡೆಸುತ್ತಿದೆ ಎಂದು ದೂರಿದರು. ಆನ್‌ಲೈನ್ ಮೂಲಕ ಆಯೋಜಿಸಿದ್ದ ಪರೀಕ್ಷೆಯಲ್ಲಿ 100 ಪ್ರಶ್ನೆಗಳ ಪೈಕಿ 10 ಪ್ರಶ್ನೆಗಳು ಮಾತ್ರ ಕನ್ನಡದಲ್ಲಿದ್ದು, ಉಳಿದ 90 ಪ್ರಶ್ನೆಗಳು ಹಿಂದಿಯಲ್ಲಿ ಇದ್ದುದನ್ನು ಕಂಡು ಅಭ್ಯರ್ಥಿಗಳು ಪರೀಕ್ಷೆಯನ್ನೇ ಬಹಿಷ್ಕರಿಸಿ ಹೊರನಡೆದಿದ್ದರು ಎಂದರು.

ತಾಂತ್ರಿಕ ದೋಷದಿಂದಾಗಿ ಪ್ರಶ್ನೆಗಳು ಹಿಂದಿಯಲ್ಲಿ ಪ್ರಕಟವಾಗಿವೆ. ನಂತರ ಸರಿಪಡಿಸಲಾಗುವುದು ಎಂದು ಎನ್‌ಟಿಎ ತಿಳಿಸಿದ್ದರಿಂದ ಮಧ್ಯಾಹ್ನ ಮರು ಪರೀಕ್ಷೆ ನಡೆಸಲಾಗಿದೆ. ಆದರೆ, ತಾಂತ್ರಿಕ ಸಮಸ್ಯೆಯಿಂದಾಗಿ ಅನೇಕ ಅಭ್ಯರ್ಥಿಗಳಿಗೆ ಈ ಆನ್‌ಲೈನ್ ಪರೀಕ್ಷೆಯಲ್ಲಿ ಲಾಗಿನ್ ಆಗುವುದಕ್ಕೆ ಸಾಧ್ಯವಾಗಿಲ್ಲ. ಲಾಗಿನ್ ಆಗಿದ್ದ ಕೆಲವರ ಪೇಪರ್ ಸಲ್ಲಿಕೆ (ಸಬ್ಮಿಟ್) ಯಾಗಿದ್ದು, ಇನ್ನಿತರ ಅನೇಕರ ಪೇಪರ್ ಸಲ್ಲಿಕೆಯಾಗಿಲ್ಲ. ಆದರೂ ಕೆಲವು ದಿನಗಳ ನಂತರ ತಪ್ಪಾದ ಕೀ ಉತ್ತರ ಪ್ರಕಟಿಸಲಾಗಿದೆ ಎಂದು ವಿವರಿಸಿದರು.

ಈ ಬಗ್ಗೆ ಕೇಳಿದರೆ ಪ್ರತಿ ಪ್ರಶ್ನೆಗೆ ₹ 1,000 ಶುಲ್ಕ ಸಲ್ಲಿಸುವಂತೆ ಕೇಳಲಾಗಿದೆ. ಇದರಿಂದ ಬಡ ಅಭ್ಯರ್ಥಿಗಳಿಗೆ ಸಮಸ್ಯೆಯಾಗಿದೆ ಎಂದು ಹೇಳಿದ ಅವರು, ಕೂಡಲೇ ಮರು ಪರೀಕ್ಷೆ ಆಯೋಜಿಸಿ ಅನ್ಯಾಯಕ್ಕೆ ಒಳಗಾಗಿರುವ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸುವಂತೆ ಎಂದು ಮನವಿ ಮಾಡಿದರು. ಸಮಸ್ಯೆಯ ಕುರಿತು ಗಮನಿಸಿ ಬಗೆಹರಿಸಲಾಗುವುದು ಎಂದು ಕೇಂದ್ರದ ಶಿಕ್ಷಣ ಇಲಾಖೆ ಸಹಾಯಕ ಸಚಿವರು ಭರವಸೆ ನೀಡಿದರು.

ಮುಂಬೈ ಧಾರಣೆ

ಶೇಂಗಾ

3-2-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1340)
ಒಂದು ವಾರದ ಡೆಲಿವರಿ	1335 (1335)
ಸೋಯಾ ಕಚ್ಚಾ	1227 (1217)
ಪಾಮ್ ವಾರದ ಡೆಲಿವರಿ	1228 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230 (1215)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,000 (47,850)
ಬೆಳ್ಳಿ ಕೆ.ಜಿ	60,750 (61,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವೈಕುಂಠ ಸಮಾರಾಧನೆ



ಶ್ರೀ. ಎನ್. ಹೆಚ್. ವಿಜಯ (ಜಯಣ್ಣ)
K.S.R.T.C ನಿವೃತ್ತ ಅಧಿಕಾರಿಗಳು (ಲೇ॥ ಹನುಮಂತೇಗೌಡರವರ ಮಗ)
ಇವರು ದಿನಾಂಕ: 26.01.2022ನೇ ಬುಧವಾರ ದೈವಾಧೀನರಾದರೆಂದು ತಿಳಿಸಿಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಹಾಲು-ತುಪ್ಪ ಕಾರ್ಯವನ್ನು ತಾ ॥ 5.02.2022ನೇ ಶನಿವಾರ ಬೆಳಗ್ಗೆ 7-30 ಗಂಟೆಗೆ ಹಾಗೂ ಮಧ್ಯಾಹ್ನ 12-00 ಕ್ಕೆ ಉತ್ತರ ಕ್ರಿಯಾದಿ ಕಾರ್ಯವನ್ನು ಮೃತರ ನೇರಳಕೆರೆ ಸ್ವಗೃಹದಲ್ಲ ಏರ್ಪಡಿಸಲಾಗಿದೆ.
ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ: ದುಃಖತಪ್ತರು : ಶ್ರೀಮತಿ ಸುಲೋಚನ ಮತ್ತು ಕುಟುಂಬ ವರ್ಗದವರು.
ಭೋಜನ ; ಮಧ್ಯಾಹ್ನ 12–30 ಗಂಟೆಗೆ

ಶ್ರದ್ಧಾಂಜಲಿ



ಶ್ರೀ ಎಸ್. ಪುಟ್ಟರಾಜು (76 ವರ್ಷ)
ಪ್ರೋ ಮೊನಾರ್ಕ್ ಪೈಪ್ಸ್, ಚಾಮರಾಜಪೇಟೆ, ಬೆಂಗಳೂರು.
ಇವರು ತಾ॥ 03–02–2022 ರಂದು ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ಭಾನುವಾರ ಬೆಳಿಗ್ಗೆ 9:00 ಗಂಟೆಗೆ ನೆರವೇರಿಸಲಾಗುವುದು
ದುಃಖತಪ್ತರು: ಮೃತರ ಧರ್ಮಪತ್ನಿ, ಸಹೋದರರು, ಮಕ್ಕಳು ಹಾಗು ಕುಟುಂಬವರ್ಗದವರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Domestic Helpers / Housekeeping

24 ಗಂಟೆಗಳ ಕಾಲ ಬೆಂಗಳೂರಿನಲ್ಲಿ ಹಿಂದಿ ಮಾತನಾಡುವ ಮಹಿಳಾ ಅಡುಗೆ/ಕ್ಲೀನರ್/ ಬೇಬಿ ಸಿಟ್ಟರ್ ಅನುಭವಿ. ಸಂಬಳ 20000. 9901741990

General

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿವಿದೆ. 10.000 - 15,000. 8951315839, 9880545002

✓ TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ರ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

✓ ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degree ಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100-56,000/- ವಸತಿಯೂಟದೊಂದಿಗೆ. 7899778278, 9611715755

Hospital & Medical Jobs

ತಕ್ಷಣ ಬೇಕಾಗಿದ್ದಾರೆ. ಮಹಿಳೆಯರು, ಪುರುಷರು ಹಾಗೂ ವಿಧವೆಯರಿಗೆ ಹೋಂನರ್ಸಿಂಗ್ ಕೆಲಸ ಲಭ್ಯವಿದೆ. ಸಂಬಳ: 11,000- 26,000 ರವರೆಗೆ. ಊಟ ವಸತಿ ಉಚಿತ. (ಸರ್ಕಾರಿ ನೊಂದಾಯಿತ ಸಂಸ್ಥೆ) ತುಮಕೂರು- 9742892222, ಶಿವಮೊಗ್ಗ- 9742270055, ಹಾಸನ- 9743135666, ಮೈಸೂರು- 9739292222.

Marketing & Sales

WANTED SALES Executives with Good Industrial Knowledge. Bike Must. Jain Bearings 09986781877, 09741966767

Part-Time Jobs

✓ ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನ ಕಂಪನಿಗೆ ಇಂಗ್ಲಿಷ್ ಮತ್ತು ಕಂಪ್ಯೂಟರ್ ಜ್ಞಾನವಿರುವ ಪದವಿದರ ಯುವಕರು ಬೇಕಾಗಿದ್ದಾರೆ. ವಸತಿ ಉಚಿತ. 9886170123.

ರೆಂಟಲ್ ಪ್ರಾಪರ್ಟೀಸ್

Accommodation Available

Paying Guest

HOTEL ROOMS Available On Monthly Basis Price Starts From 12000 Hotel Swgath Majestic Bangalore 53. 08042035618 9448842036

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

ಕಂಪ್ಯೂಟರ್

Printer

ವ್ಯಾಪಾರ

Business Offers

Finance

ALL TYPE Finance Available on Low Interest Against Property, Agri Lands & business @Low Interest Call: 9172930942

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಚಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

ಕೆಲಸದ ನಂತರ ಕಾಣಿಕೆ. ಸ್ತ್ರೀ-ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ-ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ:9591580089.

'ನಂ.1 ಸ್ತ್ರೀಪುರುಷ ವಶೀಕರಣ' ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ.ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಪ್ರವಾಸ

Travel

★ಶ್ರೇಯಸ್ ಟೂರ್ಸ್★ ದಿನಾಂಕ:15.04.2022, 08.05.2022 23/15/12/06ದಿನಗಳು ಈಶಾನ್ಯಭಾರತ ರಾಜ್ಯಗಳ (ಸೆವೆನ್ ಸಿಸ್ಟರ್ಸ್)ಪ್ರವಾಸ.ಅಸ್ಸಾಂ, ಅರುಣಾಚಲ,ಮೇಘಾಲಯ, ಮಣಿಪುರ,ತ್ರಿಪುರ,ನಾಗಲ್ಯಾಂಡ್, ಮಿಝೋರಾಂ,02.06.2022, 12.06.2022 8ದಿನಗಳು ಗ್ಯಾಂಗಟಕ್,ಡಾರ್ಜಲಿಂಗ್, ನಾಂಚಿ,ಮಿರಿಕ್,ಚಾಂಗುಲೇಕ್, ಬಾಬಾಮಂದಿರ,ಲಾಚೆನ್. 9743351212, 9206979202, 6366322639

ಶ್ರೇಯಸ್ ಟೂರ್ಸ್: 05.03.2022 10ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ.(ನಿಷ್ಕಳಂಕ, ವಲ್ಲಭಭಾಯಿ,ಡಿಯು ಸಹಿತ). 05.03.2022 12ದಿನಗಳು ಚಂಡೀಗಡ್,ಸಿಮ್ಲಾ, ಕುಲುಮನಾಲಿ,ಮಣಿಕರಣ, 5ದೇವಿಯರು,ಡಾಲ್‌ಹೌಸಿ, ಕುರುಕ್ಷೇತ್ರ,ವೈಷ್ಣೋದೇವಿ, ಅಮೃತಸರ್,ವಾಘಾಗಡಿ. 9743351212, 9206979202, 6366322639

★ಶ್ರೇಯಸ್ ಟೂರ್ಸ್★ 21.03.2022 10ದಿನಗಳು (ಎಲ್ಲಾ ವಿಮಾನದಲ್ಲಿ) ಅಖಂಡ ನೇಪಾಳ ರಾಷ್ಟ್ರ(ಮುಕ್ತಿನಾಥ ಸಹಿತ).,21.03.2022, 21.04.2022 11ದಿನಗಳು ಕಾಶಿ,ನೈಮಿಷಾರಣ್ಯ,ಚಿತ್ರಕೂಟ, ಅಲಹಾಬಾದ್, ವಿಂದ್ಯಾವಾಸಿನಿ, ಗಯಾ,ರಾಜ್‌ಗಿರ್,ದೇವಘರ್. 9743351212, 9206979202, 6366322639

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬದ್,ಕಾಶಿ, ಗಯಾ, ಅಯೋಧ್ಯ, ಹರಿದ್ವರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಪೆಬ್ರವರಿ, ಮಾರ್ಚ ಏಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಆ್ಯಶ್ಲಿ ಗೈಲ್ಸ್ –ರಾಯಿಟರ್ಸ್ ಚಿತ್ರ

ಆ್ಯಷಸ್ ಸೋಲಿಗೆ ಆ್ಯಶ್ಲಿ ತಲೆದಂಡ

ಲಂಡನ್: ಆಸ್ಟ್ರೇಲಿಯಾ ಎದುರಿನ ಆ್ಯಷಸ್ ಸರಣಿಯಲ್ಲಿ ಹೀನಾಯ ಸೋಲು ಕಂಡಿರುವ ಇಂಗ್ಲೆಂಡ್, ತಂಡದ ವ್ಯವಸ್ಥಾಪಕ ನಿರ್ದೇಶಕ ಆ್ಯಶ್ಲಿ ಗೈಲ್ಸ್ ಅವರನ್ನು ಆ ಸ್ಥಾನದಿಂದ ತೆರವುಗೊಳಿಸಿದೆ. ಸರಣಿಯಲ್ಲಿ ಇಂಗ್ಲೆಂಡ್ 0–4ರಲ್ಲಿ ಸೋತಿತ್ತು.

2021ರಲ್ಲೂ ಇಂಗ್ಲೆಂಡ್ ತಂಡ ನೀರಸ ಆಟವಾಡಿತ್ತು. ಆ ವರ್ಷ ಆಡಿದ 15 ಪಂದ್ಯಗಳ ಪೈಕಿ ಒಂಬತ್ತನ್ನು ಸೋಸಿತ್ತು. ಟ್ವೆಂಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ತಂಡ ಸೋತಿತ್ತು.

48 ವರ್ಷದ ಗೈಲ್ಸ್ ಅವರನ್ನು 2018ರಲ್ಲಿ ನೇಮಕ ಮಾಡಲಾಗಿತ್ತು. ಎಡಗೈ ಸ್ಪಿನ್ನರ್ ಗೈಲ್ಸ್ 54 ಟೆಸ್ಟ್ ಪಂದ್ಯಗಳಲ್ಲಿ 143 ವಿಕೆಟ್ ಗಳಿಸಿದ್ದರು.

19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿ: ಭಾರತದ ಎದುರು ಆಸ್ಟ್ರೇಲಿಯಾ ತಂಡಕ್ಕೆ ನಿರಾಶೆ

ಪ್ರಶಸ್ತಿ ಜಯಕ್ಕೆ ಇನ್ನೊಂದೇ ಹೆಜ್ಜೆ

ಒಸ್ಬರ್ನ್ (ಪಿಟಿಐ): ಭಾರತ ತಂಡವು 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ನಾಲ್ಕನೇ ಬಾರಿ ಫೈನಲ್ ಪ್ರವೇಶಿಸಿತು.

ಬುಧವಾರ ತಡರಾತ್ರಿ ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ ನಾಯಕ ಯಶ್ ಧುಳ್ ಮತ್ತು ಶೇಖ್ ರಶೀದ್ ಅವರ ದ್ವಿಶತಕದ ಆಟವನ್ನು ಬೌಲರ್‌ಗಳು ವ್ಯರ್ಥವಾಗಲು ಬಿಡಲಿಲ್ಲ. ವಿಕಿ ಓಸ್ವಾಲ್ (42ಕ್ಕೆ3) ಮತ್ತು ರವಿಕುಮಾರ್ (37ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್‌ನಿಂದಾಗಿ ಭಾರತ ತಂಡವು 19 ವರ್ಷದೊಳಗಿನವ ವಿಶ್ವಕಪ್ ಸೆಮಿಫೈನಲ್‌ನಲ್ಲಿ 96 ರನ್‌ಗಳಿಂದ ಆಸ್ಟ್ರೇಲಿಯಾ ಎದುರು ಜಯಿಸಿತು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ 37 ರನ್‌ಗಳಾಗುಷ್ಟರಲ್ಲಿ ಎರಡು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ರಶೀದ್ (94; 108; 8ಬೌಂಡರಿ, 1ಸಿಕ್ಸರ್) ಮತ್ತು ಯಶ್ (110; 110ಎ, 10ಬೌಂಡರಿ, 1ಸಿಕ್ಸರ್) ಮೂರನೇ ವಿಕೆಟ್ ಜೊತೆಯಾಟದಲ್ಲಿ 204 ರನ್‌ಗಳನ್ನು ಸೇರಿಸಿ ಗೆಲುವಿನ

ಯಶ್ ಧುಳ್

ಅವಕಾಶ ಸೃಷ್ಟಿಸಿದರು. ರಶೀದ್ ಮತ್ತು ಯಶ್ ಇಬ್ಬರೂ ಗುಂಪು ಹಂತದಲ್ಲಿ ಐರ್ಲೆಂಡ್ ಎದುರಿನ ಪಂದ್ಯದ ಸಂದರ್ಭದಲ್ಲಿ ಕೋವಿಡ್‌ನಿಂದ ಬಳಲಿದ್ದರು. ಪ್ರತ್ಯೇಕವಾಸ ಮುಗಿಸಿ ತಂಡಕ್ಕೆ ಮರಳಿದ್ದರು. ಅವರೇ ಜಯದ ರೂವಾರಿಗಳಾದರು.

ಆದರೆ ಆಸ್ಟ್ರೇಲಿಯಾ ತಂಡದ ಬ್ಯಾಟಿಂಗ್ ಪಡೆಯು ವೈಫಲ್ಯ ಅನುಭವಿಸಿತು. ಆದರೆ, ಲಚ್ಲನ್ ಶಾ (51; 66ಎ) ಅರ್ಧಶತಕ ಬಾರಿಸಿದರು. ಉಳಿದವರಿಂದ ಛಲದ ಆಟ ಮೂಡಿಬರಲಿಲ್ಲ. ಬೌಲರ್‌ಗಳ ಶಿಸ್ತಿನ ದಾಳಿಯೇ ಮೇಲುಗೈ ಸಾಧಿಸಿತು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ ತಂಡವು ಇಂಗ್ಲೆಂಡ್ ವಿರುದ್ಧ ಆಡಲಿದೆ.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5ಕ್ಕೆ290 (ಶೇಖ್ ರಶೀದ್ 94, ಯಶ್ ಧುಳ್ 110, ದಿನೇಶ್ ಬಾನಾ ಔಟಾಗದೆ 20, ಜ್ಯಾಕ್ ನಿಸ್ಬೆಟ್ 41ಕ್ಕೆ2, ವಿಲಿಯಂ ಸಾಲ್ಜಮನ್ 57ಕ್ಕೆ2) ಆಸ್ಟ್ರೇಲಿಯಾ: 41.5 ಓವರ್‌ಗಳಲ್ಲಿ 194 (ಕ್ಯಾಂಪ್‌ಬೆಲ್ 30, ಕೋರಿ ಮಿಲ್ಲರ್ 38, ಲಚ್ಲನ್ ಶಾ 51, ಜ್ಯಾಕ್ ಸಿಮ್‌ಫೀಲ್ಡ್ 20, ರವಿಕುಮಾರ್ 37ಕ್ಕೆ2, ವಿಕಿ ಓಸ್ವಾಲ್ 42ಕ್ಕೆ3, ನಿಶಾಂತ್ ಸಿಂಧು 25ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 96 ರನ್‌ಗಳ ಜಯ. ಫೈನಲ್‌ಗೆ ಪ್ರವೇಶ. ಪಂದ್ಯಶ್ರೇಷ್ಠ: ಯಶ್ ಧುಳ್.

ಸಾನಿಯಾ ಮಿರ್ಜಾ

ಟಾಪ್ಸ್‌ಗೆ ಬೋಪಣ್ಣ, ಸಾನಿಯಾ

ನವದೆಹಲಿ (ಪಿಟಿಐ): ಭಾರತದ ಟೆನಿಸ್ ತಾರೆಯರಾದ ಸಾನಿಯಾ ಮಿರ್ಜಾ, ರೋಹನ್ ಬೋಪಣ್ಣ, ಅಂಕಿತಾ ರೈನಾ ಮತ್ತು ರಾಮಕುಮಾರ್ ರಾಮನಾಥನ್ ಅವರನ್ನು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್ (ಟಾಪ್ಸ್) ನಲ್ಲಿ ಸೇರ್ಪಡೆ ಮಾಡಲಾಗಿದೆ.

ಈ ವರ್ಷ ನಡೆಯಲಿರುವ ಏಷ್ಯನ್ ಕ್ರೀಡಾಕೂಟದವರೆಗೆ ಅವರಿಗೆ ಈ ಯೋಜನೆಯ ಲಾಭ ಸಿಗಲಿದೆ. ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಮಾಡಿದ್ದ ಮನವಿಗೆ ಸ್ಪಂದಿಸಿರುವ ಕೇಂದ್ರ ಸರ್ಕಾರದ ಕ್ರೀಡಾ ಇಲಾಖೆಯ ಮಿಷನ್ ಒಲಿಂಪಿಕ್ ಘಟಕವು ಈ ಅವಕಾಶ ನೀಡಿದೆ. ಇದಲ್ಲದೇ ಯುವ ಆರ್ಚರಿಪಟು ಮಂಜರಿ ಅವರಿಗೆ ₹ 3.62 ಲಕ್ಷ ಮಂಜೂರು ಮಾಡಲಾಗಿದೆ. ಪ್ಯಾರಾ ಪಿಸ್ತೂಲ್ ಶೂಟರ್ ₹ 4.31 ಲಕ್ಷ ಕೂಡ ನೀಡಲಾಗಿದೆ. ಸ್ಕೀಟ್ ಶೂಟರ್ ಗುರ್ಜೋತ್ ಸಿಂಗ್ ಮತ್ತು ಏರ್‌ರೈಫಲ್ ಶೂಟಿಂಗ್ ಪಟು ರುದ್ರಾಕ್ಷ್ ಪಾಟೀಲ ಅವರು ಕ್ರಮವಾಗಿ ₹ 2.68 ಲಕ್ಷ ಮತ್ತು ₹ 1.03 ಲಕ್ಷ ನೀಡುವಂತೆ ಮಾಡಿದ್ದ ಮನವಿಗೂ ಅನುಮೋದನೆ ನೀಡಲಾಗಿದೆ. ಸಲಕರಣೆಗಳ ಖರೀದಿಗಾಗಿ ಅವರಿಗೆ ಈ ಹಣವನ್ನು ನೀಡಲಾಗುತ್ತಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಿಂಡೀಸ್ ಎದುರಿನ ಸರಣಿ: ಭಾರತ ತಂಡದಲ್ಲಿ ಮತ್ತಷ್ಟು ಕೋವಿಡ್ ಪ್ರಕರಣ

ಅಭ್ಯಾಸ ಆರಂಭಿಸಿದ ರೋಹಿತ್ ಬಳಗ

ಅಹಮದಾಬಾದ್ (ಪಿಟಿಐ): ವೆಸ್ಟ್ ಇಂಡೀಸ್ ಎದುರಿನ ಏಕದಿನ ಮತ್ತು ಟ್ವೆಂಟಿ20 ಕ್ರಿಕೆಟ್ ಸರಣಿಗಳಿಗೆ ಸಜ್ಜಾಗುತ್ತಿರುವ ಭಾರತ ತಂಡ ಗುರುವಾರ ಅಭ್ಯಾಸ ಆರಂಭಿಸಿದೆ. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಇದೇ ಆರರಂದು ಭಾರತದ ಒಂದು ಸಾವಿರನೇ ಏಕದಿನ ಪಂದ್ಯದ ಮೂಲಕ ಸರಣಿ ಆರಂಭವಾಗಲಿದೆ.

ಬುಧವಾರ ಕೋವಿಡ್ ಸೋಂಕು ಕಾಣಿಸಿಕೊಂಡ ಶಿಖರ್ ಧವನ್, ಋತುರಾಜ್ ಗಾಯಕವಾಡ್ ಮತ್ತು ಶ್ರೇಯಸ್ ಅಯ್ಯರ್ ಅವರ ಆರ್‌ಟಿ–ಪಿಸಿಆರ್ ವರದಿ ನೆಗೆಟಿವ್ ಬಂದಿರುವುದು ತಂಡದ ಆತಂಕವನ್ನು ದೂರ ಮಾಡಿದೆ. ಆದರೆ ಅವರು ಏಕದಿನ ಸರಣಿಗೆ ಲಭ್ಯ ಇರುವುದಿಲ್ಲ. ಒಂದು ವಾರ ಪ್ರತ್ಯೇಕವಾಸದಲ್ಲಿ ಇರಬೇಕಾದ ಅವರ ಆರ್‌ಟಿ–ಪಿಸಿಆರ್ ವರದಿ ನೆಗೆಟಿವ್ ಆದರೆ ಮಾತ್ರ ಟ್ವೆಂಟಿ20 ಸರಣಿಗೆ ಪರಿಗಣಿಸಲಾಗುವುದು.

ಮಯಂಕ್ ಅಗರವಾಲ್ ಗುರುವಾರ ತಂಡವನ್ನು ಸೇರಿಕೊಂಡಿದ್ದಾರೆ. ಅವರು ಮೂರು ದಿನಗಳ ಕಡ್ಡಾಯ ಕ್ವಾರಂಟೈನ್‌ನಲ್ಲಿ ಇರಬೇಕಾಗಿರುವ ಕಾರಣ ಪಂದ್ಯಕ್ಕೆ ನೇರವಾಗಿ ಲಭ್ಯ ಇರುತ್ತಾರೆ. ವಿಕೆಟ್ ಕೀಪರ್ ಬ್ಯಾಟರ್ ಇಶಾನ್ ಕಿಶನ್ ಅವರನ್ನು ಏಕದಿನ ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಕಾಯ್ದಿರಿಸಿದ ಆಟಗಾರರ ಪಟ್ಟಿಯಲ್ಲಿದ್ದ ವೇಗದ ಬೌಲರ್ ನವದೀಪ್ ಸೈನಿ ಅವರಲ್ಲೂ ಕೋವಿಡ್ ಸೋಂಕು ಕಾಣಿಸಿಕೊಂಡಿದೆ. ಫೀಲ್ಡಿಂಗ್ ಕೋಚ್ ಟಿ.ದಿಲೀಪ್, ಭದ್ರತಾ ಅಧಿಕಾರಿ ಬಿ.ಲೋಕೇಶ್ ಮತ್ತು ಸಿಬ್ಬಂದಿ ರಾಜೀವ್ ಕುಮಾರ್ ಅವರಿಗೂ ಕೋವಿಡ್ ಇರುವುದು ದೃಢಪಟ್ಟಿದೆ.

ನರೇಂದ್ರ ಮೋದಿ ಕ್ರೀಡಾಂಗಣ –ಟ್ವಿಟರ್ ಚಿತ್ರ

ರೋಹಿತ್ ಶರ್ಮಾ –ಪಿಟಿಐ ಚಿತ್ರ

ಎಟಿಕೆಎಂಬಿ ವಿರುದ್ಧ ಮುಂಬೈ ಸಮಬಲ

ಇಂಡಿಯನ್ ಸೂಪರ್ ಲೀಗ್: ಪ್ರೀತಂ ‘ಉಡುಗೊರೆ’

ಫತೋರ್ಡ (ಪಿಟಿಐ): ಉಡುಗೊರೆ ಗೋಲು ನೀಡಿದ ಎಟಿಕೆ ಮೋಹನ ಬಾಗನ್ (ಎಟಿಕೆಎಂಬಿ) ತಂಡ ಮುಂಬೈ ಸಿಟಿ ಎಫ್‌ಸಿ ಎದುರಿನ ಪಂದ್ಯವನ್ನು ಡ್ರಾ ಮಾಡಿಕೊಳ್ಳಬೇಕಾಯಿತು. ಗುರುವಾರ ರಾತ್ರಿ ಇಲ್ಲಿನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯ 1–1ರಲ್ಲಿ ಸಮ ಆಯಿತು.

ಒಂಬತ್ತನೇ ನಿಮಿಷದಲ್ಲಿ ಡೇವಿಡ್ ವಿಲಿಯಮ್ಸ್ ಗಳಿಸಿದ ಗೋಲಿನೊಂದಿಗೆ ಎಟಿಕೆಎಂಬಿ ಮುನ್ನಡೆ ಗಳಿಸಿತ್ತು. ತಿರುಗೇಟು ನೀಡಲು ಪ್ರಯತ್ನಿಸಿದ ಮುಂಬೈ ಸಿಟಿ ಎಫ್‌ಸಿಗೆ ಪ್ರೀತಂ ಗೋಲಿನ ಉಡುಗೊರೆ ನೀಡಿದರು. ಹೀಗಾಗಿ ತಂಡ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು.

ಬ್ಲಾಸ್ಟರ್ಸ್‌ಗೆ ಲಯಕ್ಕೆ ಮರಳುವ ತವಕ: ವಾಸ್ಕೊದಲ್ಲಿ ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ಮತ್ತು ನಾರ್ತ್ ಈಸ್ಟ್ ಯುನೈಟೆಡ್ ತಂಡಗಳು ಮುಖಾಮುಖಿಯಾಗಲಿವೆ. 10 ಪಂದ್ಯಗಳಲ್ಲಿ ಅಜೇಯ ಓಟ ಓಡಿದ್ದ ಕೇರಳ ಬ್ಲಾಸ್ಟರ್ಸ್ ಕಳೆದ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ವಿರುದ್ಧ 1–0ಯಿಂದ ಸೋತಿತ್ತು. ಹೀಗಾಗಿ ಮತ್ತೆ ಜಯದ ಲಯಕ್ಕೆ ಮರಳಲು ಪ್ರಯತ್ನಿಸಲಿದೆ. ಟೂರ್ನಿಯಲ್ಲಿ ಇದು ಬ್ಲಾಸ್ಟರ್ಸ್ ತಂಡದ ಎರಡನೇ ಸೋಲಾಗಿತ್ತು. ಒಟ್ಟು 12 ಪಂದ್ಯಗಳನ್ನು ಆಡಿರುವ ತಂಡ ಐದರಲ್ಲಿ ಗೆದ್ದಿದ್ದು ಐದನ್ನು ಡ್ರಾ ಮಾಡಿಕೊಂಡಿದೆ. ಪಾಯಿಂಟ್ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ನಾರ್ತ್ ಈಸ್ಟ್ ಯುನೈಟೆಡ್ ಎದುರು ಜಯ ಸಾಧಿಸುವ ಭರವಸೆಯಲ್ಲಿದೆ.

ರಕ್ಷಣಾ ವಿಭಾಗದಲ್ಲಿ ಕೇರಳ ಬ್ಲಾಸ್ಟರ್ಸ್ ಬಲಿಷ್ಠವಾಗಿದೆ. ಸೋಲಿಗೆ ಶರಣಾಗದ 10 ಪಂದ್ಯಗಳ ಪೈಕಿ ಐದರಲ್ಲಿ ಕೇರಳ ಕ್ಲೀನ್ ಶೀಟ್ ಸಾಧನೆ ಮಾಡಿದೆ. ಉಳಿದ ಐದು ಪಂದ್ಯಗಳಲ್ಲಿ ಆರು ಗೋಲು ಮಾತ್ರ ಬಿಟ್ಟುಕೊಟ್ಟಿದೆ. ಸತತ 10 ಪಂದ್ಯಗಳ ಅಜೇಯ ಓಟದ ಸಂದರ್ಭದಲ್ಲಿ ತಂಡ ಒಂದು ಪಂದ್ಯದಲ್ಲಿ ಮಾತ್ರ ಒಂದಕ್ಕಿಂತ ಹೆಚ್ಚು ಗೋಲು ಬಿಟ್ಟುಕೊಟ್ಟಿದೆ.

ನೀರಸ ಆಟವಾಡಿರುವ ನಾರ್ತ್ ಈಸ್ಟ್ ಯುನೈಟೆಡ್ ಸೋಲಿನ ಸುಳಿಯಲ್ಲಿ ಸಿಲುಕಿದೆ. ಹಿಂದಿನ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ವಿರುದ್ಧ 0–5ರಲ್ಲಿ ಸೋತಿತ್ತು. ದೇಶಾನ್ ಬ್ರೌನ್ ಲಭ್ಯ ಇಲ್ಲದೇ ಇರುವುದು ತಂಡವನ್ನು ಕಾಡುತ್ತಿದೆ. ಶುಕ್ರವಾರದ ಪಂದ್ಯಕ್ಕೆ ಅವರು ಲಭ್ಯ ಇರುತ್ತಾರೆ ಎಂದು ಕೋಚ್ ಖಲೀದ್ ಜಮೀಲ್ ತಿಳಿಸಿದರು.

ಎಟಿಕೆ ಎಂಬಿ ತಂಡದ ಡೇವಿಡ್ ವಿಲಿಯಮ್ಸ್ (ಬಲ) ಮತ್ತು ಹ್ಯೂಗೊ ಬೌಮೊಸ್ ಸಂಭ್ರಮಿಸಿದರು

ರಾಸ್ ಬ್ರಾಂಚ್

ಹೀರೊ ಮೋಟೊ ಸ್ಪೋರ್ಟ್ಸ್‌ಗೆ ರಾಸ್ ಬ್ರಾಂಚ್

ಬೆಂಗಳೂರು: ಡಕಾರ್ ರ್‍ಯಾಲಿಯಲ್ಲಿ ದಾಖಲೆಯ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಹೀರೊ ಮೋಟೊಕಾರ್ಪ್ ಕಂಪನಿಯ ಮೋಟೊಸ್ಪೋರ್ಟ್ಸ್ ತಂಡಕ್ಕೆ ಅಂತರರಾಷ್ಟ್ರೀಯ ಮಟ್ಟದ ಪ್ರಮುಖ ರೈಡರ್ ರಾಸ್ ಬ್ರಾಂಚ್ ಸೇರ್ಪಡೆಯಾಗಿದ್ದಾರೆ. ಅಥ್ಲೀಟ್ ಮತ್ತು ಮೋಟರ್ ಸ್ಪೋರ್ಟ್ಸ್ ಸ್ಪರ್ಧಿಯಾಗಿರುವ ಬೊತ್ಸ್ವಾನದ ರಾಸ್ ದಕ್ಷಿಣ ಆಫ್ರಿಕಾ ವಲಯದ ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಮೂರು ಬಾರಿ ಚಾಂಪಿಯನ್ ಆಗಿದ್ದಾರೆ. ಬೊತ್ಸ್ವಾನ 1000 ಡೆಸರ್ಟ್ ರೇಸ್‌ನಲ್ಲಿ ಏಳು ಬಾರಿ ಪ್ರಶಸ್ತಿ ಗೆದ್ದಿದ್ದಾರೆ. ಡಕಾರ್ ರ್‍ಯಾಲಿಯಲ್ಲಿ ರಾಸ್ ಪರಿಚಿತ ರೈಡರ್ ಆಗಿದ್ದಾರೆ. ಸತತ ನಾಲ್ಕು ಬಾರಿ ಅವರು ಸ್ಪರ್ಧಿಸಿದ್ದು 2019ರಲ್ಲಿ ಚೊಚ್ಚಲ ಪ್ರಯತ್ನದಲ್ಲೇ ರೂಕಿ ವಿಭಾಗದ ಪ್ರಶಸ್ತಿ ಗೆದ್ದಿದ್ದರು. ಈ ರೇಸ್‌ನಲ್ಲಿ ಅವರು ಉತ್ತಮ ಟ್ರ್ಯಾಕ್ ರೆಕಾರ್ಡ್ ಹೊಂದಿದ್ದಾರೆ.

ರಣಜಿ ಕ್ರಿಕೆಟ್ 10ರಂದು ಆರಂಭ

ನವದೆಹಲಿ (ಪಿಟಿಐ): ಬಹುನಿರೀಕ್ಷಿತ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಹಂತವನ್ನು ಇದೇ 10ರಿಂದ ಮಾರ್ಚ್ 15ರವರೆಗೆ ಆಯೋಜಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನಿರ್ಧರಿಸಿದೆ.

‘ಮೊದಲ ಹಂತದ ನಂತರ ಇಂಡಿಯನ್ ಪ್ರೀಮಿಯರ್ ಲೀಗ್ ನಡೆಯಲಿದೆ. ಅದಾದ ಬಳಿಕ ಮೇ 30ರಿಂದ ಜೂನ್ 26 ರವರೆಗೆ ಎರಡನೇ ಹಂತದಲ್ಲಿ ರಣಜಿ ಟೂರ್ನಿಯನ್ನು ಸಂಘಟಿಸಲಾಗುವುದು’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಗುರುವಾರ ರಾಜ್ಯ ಕ್ರಿಕೆಟ್ ಸಂಸ್ಥೆಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಇದೊಂದು ಚುಟುಕು ಅವಧಿಯ ಪ್ರಥಮ ದರ್ಜೆ ಟೂರ್ನಿಯಾಗಲಿದೆ. ಲೀಗ್ ಹಂತದಲ್ಲಿ ಪ್ರತಿ ತಂಡವೂ ಮೂರು ಪಂದ್ಯಗಳಲ್ಲಿ ಮಾತ್ರ ಆಡಲಿದೆ. ಇದರಿಂದಾಗಿ ಸಂಭಾವನೆ ಹೆಚ್ಚಳದ ಲಾಭವು ಆಟಗಾರರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಗುವುದು ಸಂಶಯ.

ಹೊಸ ವೇತನ ನಿಯಮದಲ್ಲಿ 40ಕ್ಕೂ ಹೆಚ್ಚು ಪಂದ್ಯಗಳನ್ನು ಆಡಿರುವ ಅನುಭವಿಗಳಿಗೆ ದಿನವೊಂದಕ್ಕೆ ₹ 60ಸಾವಿರ ಲಭಿಸಲಿದೆ. ಈ ಹಿಂದೆ ₹ 35 ಸಾವಿರ ಕೊಡಲಾಗುತ್ತಿತ್ತು. 21 ರಿಂದ 40 ಪಂದ್ಯ ಆಡಿದವರಿಗೆ ದಿನವೊಂದಕ್ಕೆ ₹ 50 ಸಾವಿರ ನೀಡಲಾಗುತ್ತದೆ.

ಈ ಮೊದಲು ವರದಿ ಮಾಡಿದ್ದಂತೆ ಎಲೀಟ್ ವಿಭಾಗದಲ್ಲಿ ಎಂಟು ಗುಂಪುಗಳು ಮತ್ತು ಪ್ಲೇಟ್‌ನಲ್ಲಿ ಆರು ಗುಂಪುಗಳನ್ನು ವಿಂಗಡಿಸಲಾಗಿತ್ತು. ಇದೀಗ ಮೊದಲ ಹಂತದಲ್ಲಿ 57 ಮತ್ತು ಎರಡನೇ ಹಂತದಲ್ಲಿ ನಾಕ್‌ಔಟ್ ಪಂದ್ಯಗಳೂ ಸೇರಿ ಏಳು ಪಂದ್ಯಗಳು ನಡೆಯಲಿವೆ.

ಎಲೀಟ್ ಗುಂಪಿನ ಪಂದ್ಯಗಳು ರಾಜ್‌ಕೋಟ್, ಕಟಕ್, ಚೆನ್ನೈ, ಅಹಮದಾಬಾದ್, ತಿರುವನಂತಪುರ, ದೆಹಲಿ, ಹರಿಯಾಣ ಮತ್ತು ಗುವಾಹಟಿ, ಪ್ಲೇಟ್ ಗುಂಪಿನ ಪಂದ್ಯಗಳು ಕೋಲ್ಕತ್ತದಲ್ಲಿ ನಡೆಯಲಿವೆ. ಈ ಒಂಬತ್ತು ತಾಣಗಳಲ್ಲಿಯೂ ಬಯೋಬಬಲ್ ವ್ಯವಸ್ಥೆಯಲ್ಲಿ ತಂಡಗಳು ಆಡಲಿವೆ.

ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ 2020–21ರಲ್ಲಿ ರಣಜಿ ಟ್ರೋಫಿ ಟೂರ್ನಿಯನ್ನು ರದ್ದುಮಾಡಲಾಗಿತ್ತು. ಹೋದ ತಿಂಗಳು 13ರಂದು ಟೂರ್ನಿಯನ್ನು ಆರಂಭಿಸಲು ಯೋಜಿಸಲಾಗಿತ್ತು. ಆದರೆ ದೇಶದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿದ ಕಾರಣ ಮುಂದೂಡಲಾಗಿತ್ತು. ಫೆ 16ರಿಂದ ಆರಂಭಿಸುವುದಾಗಿ ಈಚೆಗೆ ಪ್ರಕಟಿಸಲಾಗಿತ್ತು. ಇದೀಗ ಮತ್ತೆ ವೇಳಾಪಟ್ಟಿಯನ್ನು ಪರಿಷ್ಕರಿಸಲಾಗಿದೆ.

ಹಾಲಿ ಚಾಂಪಿಯನ್ ಸೌರಾಷ್ಟ್ರ ತಂಡವು ಡಿ ಗುಂಪಿನಲ್ಲಿ ಆಡಲಿದೆ. ಅಹಮದಾಬಾದ್‌ನಲ್ಲಿ ಪಂದ್ಯಗಳು ನಡೆಯಲಿವೆ. ಈ ಗುಂಪಿನಲ್ಲಿ ಮುಂಬೈ, ಒಡಿಶಾ, ಗೋವಾ ತಂಡಗಳಿವೆ.

ಬೆಂಗಳೂರಿನಲ್ಲಿ ನಾಕ್‌ಔಟ್?

ಟೂರ್ನಿಯ ಎರಡನೇ ಹಂತದಲ್ಲಿ ನಡೆಯುವ ಪಂದ್ಯಗಳನ್ನು ಬೆಂಗಳೂರಿನಲ್ಲಿ ನಡೆಸುವ ಸಾಧ್ಯತೆ ಇದೆ.

‘ಗುಂಪು ಹಂತದಲ್ಲಿ ಬೆಂಗಳೂರಿನಲ್ಲಿ ಪಂದ್ಯಗಳಿಲ್ಲ. ನಾಕ್‌ಔಟ್ ಹಂತದಲ್ಲಿ ಪಂದ್ಯಗಳನ್ನು ನಡೆಸುವ ಅವಕಾಶ ಸಿಗಲಿದೆ’ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಖಜಾಂಚಿ ವಿನಯ್ ಮೃತ್ಯುಂಜಯ ಪ್ರಜಾವಾಣಿಗೆ ತಿಳಿಸಿದ್ದಾರೆ.

ಗುಣಮಟ್ಟ ಪರೀಕ್ಷೆಗೆ ಸೀಮಿತ, ತನಿಖೆಗೆ ಬಳಸಿಲ್ಲ: ಸ್ಪಷ್ಟನೆ

ಪೆಗಾಸಸ್ ಕುತಂತ್ರಾಂಶ ಖರೀದಿ ದೃಢಪಡಿಸಿದ ಎಫ್‌ಬಿಐ

ವಾಷಿಂಗ್ಟನ್ (ಎಪಿ): ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಸಂಸ್ಥೆಯಿಂದ ಪೆಗಾಸಸ್ ಬೇಹುಗಾರಿಕೆ ಕುತಂತ್ರಾಂಶ ಖರೀದಿ ಮಾಡಿರುವುದನ್ನು ಅಮೆರಿಕದ ಎಫ್‌ಬಿಐ ದೃಢಪಡಿಸಿದ್ದು, ಇದನ್ನು ಪ್ರಯೋಗ ಮತ್ತು ಗುಣಮಟ್ಟದ ಪರೀಕ್ಷೆಗೆ ಮಾತ್ರ ಬಳಸಲಾಗಿದೆ. ತನಿಖೆಯ ಉದ್ದೇಶಕ್ಕೆ ಬಳಸಿಲ್ಲ ಎಂದು ಸ್ಪಷ್ಟಪಡಿಸಿದೆ.

ಪತ್ರಕರ್ತರು, ಚಿಂತಕರು, ಮಾನವ ಹಕ್ಕುಗಳ ಹೋರಾಟಗಾರರ ಮೇಲೆ ಬೇಹುಗಾರಿಕೆ ನಡೆಸುವ ವಿಶ್ವದ ಅತ್ಯಂತ ಪ್ರಬಲ ಕುತಂತ್ರಾಂಶ ಪೆಗಾಸಸ್ ಅನ್ನು ಭಾರತ ಖರೀದಿಸಿದೆ ಎಂದು ನ್ಯೂಯಾರ್ಕ್ ಟೈಮ್ಸ್ ಈಚೆಗೆ ವರದಿ ಮಾಡಿತ್ತು. ಆದರೆ, ಭಾರತ ಸರ್ಕಾರ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ.

ಬೆಳೆಯುತ್ತಿರುವ ಅತ್ಯಾಧುನಿಕ ತಂತ್ರಜ್ಞಾನ ಮತ್ತು ವ್ಯಾಪಾರೋದ್ಯಮದ ದೃಷ್ಟಿಯಿಂದ ಇಸ್ರೇಲ್ ಸಂಸ್ಥೆಯಿಂದ ಸೀಮಿತ ಪರವಾನಗಿಯಲ್ಲಿ ಪೆಗಾಸಸ್ ಅನ್ನು ಖರೀದಿಸಲಾಗಿತ್ತು. ಇದರಿಂದ ಪರೀಕ್ಷೆ ಹಾಗೂ ಗುಣಮಟ್ಟದ ಮೌಲ್ಯಮಾಪನ ನಡೆಸಲಾಗಿತ್ತೇ ಹೊರತು ಯಾವುದೇ ಕಾರ್ಯಾಚರಣೆಗೆ ಬಳಸಿಲ್ಲ ಎಂದು ಎಫ್‌ಬಿಐ ಹೇಳಿಕೆಯಲ್ಲಿ ತಿಳಿಸಿದೆ.

ಪ್ರಯೋಗ ಮತ್ತು ಮೌಲ್ಯಮಾಪನ ಅಂತ್ಯಗೊಂಡಿರುವುದರಿಂದ ಪೆಗಾಸಸ್ ಕುತಂತ್ರಾಂಶವನ್ನು ಮುಂದುವರಿಸದೆ ಇರಲು ನಿರ್ಧರಿಸಲಾಗಿದೆ. ಇನ್ನು ಮುಂದೆ ಪರವಾನಗಿಯೂ ಸಕ್ರಿಯವಾಗಿರುವುದಿಲ್ಲ. ಕುತಂತ್ರಾಂಶ ಕೂಡ ಕಾರ್ಯನಿರ್ವಹಿಸುವುದಿಲ್ಲ ಎಂದು ತಿಳಿಸಿದೆ.

ಉದ್ದೇಶ ಇಷ್ಟೇ ಆಗಿದ್ದರೆ, ವಿಶ್ವದ ಕುಖ್ಯಾತ ಬೇಹುಗಾರಿಕೆ ಕುತಂತ್ರಾಂಶಕ್ಕೆ ಅಮೆರಿಕದ ಕಾನೂನು ನಿರ್ದೇಶನಾಲಯ ಏಕೆ ಹಣ ಪಾವತಿಸಬೇಕಿತ್ತು ಎಂಬ ಟೀಕೆ ವ್ಯಕ್ತವಾಗಿದೆ. ಎಫ್‌ಬಿಐ ವಕ್ತಾರರು ಎನ್‌ಎಸ್‌ಒ ಗ್ರೂಪ್ ಸಂಸ್ಥೆಗೆ ಹಣ ಪಾವತಿಸಿರುವ ಕುರಿತು ಪ್ರತಿಕ್ರಿಯಿಸಿಲ್ಲ. ಆದರೆ, ಒಂದು ವರ್ಷದ ಪರವಾನಗಿಗಾಗಿ ಐದು ಮಿಲಿಯನ್ ಯುಎಸ್ ಡಾಲರ್(ಅಂದಾಜು ₹37.36 ಕೋಟಿ) ಪಾವತಿ ಮಾಡಿರುವ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿತ್ತು.

ಅಫ್ಗನ್: ಮಹಿಳೆಯರಿಗೆ ಶಿಕ್ಷಣ ಪಡೆಯಲು ಅವಕಾಶ

ಇಸ್ಲಾಮಾಬಾದ್(ಎಪಿ): ಅಫ್ಗಾನಿಸ್ತಾನದ ಆರು ಪ್ರಾಂತ್ಯಗಳಲ್ಲಿ ವಿದ್ಯಾರ್ಥಿನಿಯರ ಉನ್ನತ ವ್ಯಾಸಂಗಕ್ಕಾಗಿ ವಿಶ್ವವಿದ್ಯಾಲಯಗಳನ್ನು ಪುನರಾರಂಭಿಸಲಾಗಿದೆ ಅಲ್ಲಿನ ತಾಲಿಬಾನ್ ಸರಕಾರ ಬುಧವಾರ ಹೇಳಿದೆ.

ಮೊದಲ ಹಂತದಲ್ಲಿ ನಂಗರ್‌ಹಾರ್ ಮತ್ತು ಕಂದಾಹಾರ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ವ್ಯಾಸಂಗ ಮಾಡಲು ಅನುವು ಮಾಡಿಕೊಡಲಾಗಿತ್ತು. ಬಳಿಕ ಹೆಲ್ಮಂಡ್, ಫಾರಹಾ, ನಿಮ್ರೋಜ್ ಮತ್ತು ಲಗ್ಮನ್ ಪ್ರಾಂತ್ಯಗಳಲ್ಲಿಯೂ ವಿಶ್ವವಿದ್ಯಾಲಯಗಳನ್ನು ತೆರೆಯಲಾಗಿದೆ. ಪುರುಷರು ಬೆಳಿಗ್ಗೆ ಹಾಗೂ ಮಹಿಳೆಯರಿಗೆ ಮಧ್ಯಾಹ್ನ ಪ್ರತ್ಯೇಕ ತರಗತಿ ನಡೆಸಲು ವ್ಯವಸ್ಥೆ ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವಾಲಯದ ವಕ್ತಾರ ಅಹಮದ್ ತಕ್ಕಿ ತಿಳಿಸಿದ್ದಾರೆ.

ಫೆ.26ರಂದು ಕಾಬೂಲ್ ವಿಶ್ವವಿದ್ಯಾಲಯ ಸೇರಿದಂತೆ ಅಫ್ಗಾನ್‌ನ 34 ಪ್ರಾಂತ್ಯಗಳಲ್ಲಿನ ಎಲ್ಲ ವಿಶ್ವವಿದ್ಯಾಲಯಗಳನ್ನು ಮಹಿಳೆಯರು ಮತ್ತು ಪುರುಷರ ವ್ಯಾಸಂಗಕ್ಕೆ ಮುಕ್ತಗೊಳಿಸಲಾಗುವುದು ಎಂದು ಶಿಕ್ಷಣ ಸಚಿವ ಅಬ್ದುಲ್ ಬಕಿ ಹಕ್ಕಾನಿ ಅವರು ಈ ವಾರ ತಿಳಿಸಿದ್ದರು.

ಪ್ರೊ ಕಬಡ್ಡಿ: ತಮಿಳ್ ತಲೈವಾಸ್ ಜಯಭೇರಿ

ಬೆಂಗಳೂರು: ಚುರುಕಿನ ದಾಳಿ ನಡೆಸಿದ ಅಜಿಂಕ್ಯ ಪವಾರ್ ಮತ್ತು ಮಂಜೀತ್ ಅವರ ಆಟದ ಬಲದಿಂದ ತಮಿಳ್ ತಲೈವಾಸ್ ತಂಡವು ಜಯಭೇರಿ ಬಾರಿಸಿತು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡವು 43–25ರಿಂದ ತೆಲುಗು ಟೈಟನ್ಸ್ ವಿರುದ್ಧ ಜಯಿಸಿತು.

ಮಂಜಿತ್ (9) ಮತ್ತು ಅಜಿಂಕ್ಯ (10) ರೇಡಿಂಗ್‌ನಲ್ಲಿ ಪಾರಮ್ಯ ಮೆರೆದರು. ಡಿಫೆಂಡರ್ ಸಾಗರ್ ಕೂಡ ಒಂಬತ್ತು ಅಂಕ ಕಲೆಹಾಕಿ ತಂಡದ ಜಯಕ್ಕೆ ಕಾಣಿಕೆ ನೀಡಿದರು.

ಟೈಟನ್ಸ್ ತಂಡದ ಗೊಲ್ಲ ರಾಜು (9) ಮಿಂಚಿದರು.

ಜೈಪುರಕ್ಕೆ ಜಯ: ದೀಪಕ್ ಹೂಡಾ ಅವರ ಆಲ್‌ರೌಂಡ್ ಆಟದ ನೆರವಿನಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 36–30ರಿಂದ ದಬಂಗ್ ಡೆಲ್ಲಿ ತಂಡದ ವಿರುದ್ಧ ಜಯಭೇರಿ ಬಾರಿಸಿತು.

ದೀಪಕ್ ಹೂಡಾ 12 ಅಂಕಗಳನ್ನು ಸೂರೆ ಮಾಡಿದರು. ಸಚಿನ್ ನರ್ವಾಲ್ ಕೂಡ ನಾಲ್ಕು ಅಂಕಗಳ ಕಾಣಿಕೆ ನೀಡಿದರು. ಆದರೆದಬಂಗ್ ಡೆಲ್ಲಿ ತಂಡದ ವಿಜಯ್ 16 ಅಂಕ ಗಳಿಸಿದರು. ಆದರೆ ಅವರ ವಿರೋಚಿತ ಆಲ್‌ರೌಂಡ್ ಆಟಕ್ಕೆ ಜಯ ಒಲಿಯಲಿಲ್ಲ.

ಇಂದಿನ ಪಂದ್ಯಗಳು

ಹರಿಯಾಣ ಸ್ಟೀಲರ್ಸ್ -ಬೆಂಗಾಲ್ ವಾರಿಯರ್ಸ್

ಆರಂಭ: ರಾತ್ರಿ 7.30

ಬೆಂಗಳೂರು ಬುಲ್ಸ್-ದಬಂಗ್ ಡೆಲ್ಲಿ

ಆರಂಭ: ರಾತ್ರಿ 8.30

ಗುಜರಾತ್ ಜೈಂಟ್ಸ್-ಪಟ್ನಾ ಪೈರೇಟ್ಸ್

ಆರಂಭ: ರಾತ್ರಿ 9.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ದಬಂಗ್ ಡೆಲ್ಲಿ ತಂಡದ ಆಶು ಮಲಿಕ್ ಮತ್ತು ಜೀವ ಕುಮಾರ್ ಅವರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಜೈಪುರ್ ಪಿಂಕ್ ಪ್ಯಾಂಥರ್ಸ್ ರೇಡರ್ ದೀಪಕ್ ನಿವಾಸ್ ಹೂಡಾ

ತೆಲುಗು ಟೈಟನ್ಸ್ ತಂಡದ ರಾಜು ಅವರ ರೇಡಿಂಗ್ ವೈಖರಿ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	16	9	5	2	54
ಬೆಂಗಳೂರು ಬುಲ್ಸ್	17	9	7	1	51
ಪಟ್ನಾ ಪೈರೇಟ್ಸ್	14	9	4	1	50
ಜೈಪುರ ಪಿಂಕ್ ಪ್ಯಾಂಥರ್ಸ್	15	7	6	2	45
ತಮಿಳ್ ತಲೈವಾಸ್	15	5	4	6	44
ಯು ಮುಂಬಾ	15	5	5	5	43
ಹರಿಯಾಣ ಸ್ಟೀಲರ್ಸ್	15	6	6	3	43
ಯುಪಿ ಯೋಧಾ	16	5	8	3	42
ಪುಣೇರಿ ಪಲ್ಟನ್	15	8	7	-	42
ಬೆಂಗಾಲ್ ವಾರಿಯರ್ಸ್	15	7	7	1	41
ಗುಜರಾತ್ ಜೈಂಟ್ಸ್	14	5	6	3	38
ತೆಲುಗು ಟೈಟನ್ಸ್	15	1	11	3	22

(ಗುರುವಾರದ ಪಂದ್ಯಗಳ ಅಂತ್ಯಕ್ಕೆ)

268 ಜಿಲ್ಲೆಗಳಲ್ಲಿ ಪಾಸಿಟಿವಿಟಿ ದರ ಕಡಿಮೆ

ನವದೆಹಲಿ (ಪಿಟಿಐ): ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ಸೇರಿದಂತೆ 34 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತು ಪಾಸಿಟಿವಿಟಿ ದರದಲ್ಲಿ ಇಳಿಕೆ ದಾಖಲಾಗಿದೆ. ಆದರೆ ಕೇರಳ ಮತ್ತು ಮಿಜೋರಾಂ ರಾಜ್ಯಗಳಲ್ಲಿ ಸೋಂಕಿನ ಪ್ರಕರಣಗಳು ಮತ್ತು ಪಾಸಿಟಿವಿಟಿ ದರ ಇನ್ನೂ ಏರುಗತಿಯಲ್ಲಿಯೇ ಇದೆ ಎಂದು ಕೇಂದ್ರ ಸರ್ಕಾರ ಗುರುವಾರ ಹೇಳಿದೆ.

ದೇಶದಾದ್ಯಂತ ಸಾಂಕ್ರಾಮಿಕ ಪರಿಸ್ಥಿತಿ ಸುಧಾರಿಸಿದೆ ಎಂದಿರುವ ಸರ್ಕಾರ, ದೇಶದ 268 ಜಿಲ್ಲೆಗಳಲ್ಲಿ ಪಾಸಿಟಿವಿಟಿ ದರ ಶೇ 5 ಕ್ಕಿಂತ ಕಡಿಮೆ ಇದೆ ಎಂದು ತಿಳಿಸಿದೆ.

ಕೋವಿಡ್ ಲಸಿಕಾ ಡೋಸ್‌ಗಳ ಪಡೆದವರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಸಾವಿನ ಪ್ರಮಾಣ ಇಳಿಕೆಯಾಗಿರುವುದು ಕಂಡು ಬಂದಿದೆ. ಹಿಂದಿನ ಕೋವಿಡ್ ಅಲೆಗಳಿಗೆ ಹೋಲಿಸಿದರೆ ಈ ಬಾರಿ ಸರಾಸರಿ 44 ವಯಸ್ಸಿನ ಜನರು ಹೆಚ್ಚಾಗಿ ಸೋಂಕಿಗೆ ಒಳಗಾಗಿದ್ದರು. ಹಿಂದಿನ ಅಲೆಯಲ್ಲಿ ಸರಾಸರಿ 55 ವಯಸ್ಸಿನವರು ತೊಂದರೆಗೆ ಒಳಗಾಗಿದ್ದರು ಎಂದು ಸರ್ಕಾರ ಹೇಳಿದೆ.

ದೇಶದ 11 ರಾಜ್ಯಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಶಾಲೆಗಳನ್ನು ತೆರೆಯಲಾಗಿದೆ. 16 ರಾಜ್ಯಗಳಲ್ಲಿ ಭಾಗಶಃ ತೆರೆಯಲಾಗಿದ್ದರೆ ಒಂಬತ್ತು ರಾಜ್ಯಗಳಲ್ಲಿ ಪೂರ್ಣವಾಗಿ ಮುಚ್ಚಲಾಗಿದೆ. ಶಾಲೆಗಳಲ್ಲಿ ಶೇ 95ರಷ್ಟು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಲಸಿಕೆ ಹಾಕಲಾಗಿದೆ. ಕೆಲವು ರಾಜ್ಯಗಳಲ್ಲಿ ಇದು ಶೇ 100ರಷ್ಟು ಪೂರ್ಣವಾಗಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.



1.72 ಲಕ್ಷ ಪ್ರಕರಣ ದೃಢ

ನವದೆಹಲಿ (ಪಿಟಿಐ): ಓಮೈಕ್ರಾನ್ ಪ್ರೇರಿತ ಕೋವಿಡ್ ಮೂರನೇ ಅಲೆ ತಗ್ಗುತ್ತಿದೆ ಎಂಬ ವರದಿಗಳ ನಡುವೆಯೇ, ದೇಶದಲ್ಲಿ ಸೋಂಕು ಒಂದೇ ದಿನದಲ್ಲಿ ಶೇ.6.8ರಷ್ಟು ಹೆಚ್ಚಾಗಿವೆ. ಬುಧವಾರ 1,61,386 ಪ್ರಕರಣಗಳು ವರದಿಯಾಗಿದ್ದವು. ಗುರುವಾರ 1,72,433 ಪ್ರಕರಣಗಳು ವರದಿಯಾಗಿವೆ. ಇದೇ ಅವಧಿಯಲ್ಲಿ 1008 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

15–17 ವರ್ಷ: ಗದಗ ಶೇ 100 ರಷ್ಟು ಸಾಧನೆ

ಬೆಂಗಳೂರು: 15ರಿಂದ 18 ವರ್ಷದೊಳಗಿನವರಿಗೆ ಕೋವಿಡ್ ಲಸಿಕೆಯ ಮೊದಲ ಡೋಸ್ ವಿತರಣೆಯಲ್ಲಿ ಗದಗ ಜಿಲ್ಲೆಯು ಶೇ 100 ರಷ್ಟು ಸಾಧನೆ ಮಾಡಿದೆ. ಈ ಮೂಲಕ ನಿಗದಿತ ಗುರಿ ತಲುಪಿದ ರಾಜ್ಯದ ಮೊದಲ ಜಿಲ್ಲೆ ಇದಾಗಿದೆ. ರಾಜ್ಯದಲ್ಲಿ ಈ ವಯೋಮಾನದ 31.75 ಲಕ್ಷ ಮಂದಿಯನ್ನು ಲಸಿಕೆ ವಿತರಣೆಗೆ ಗುರುತಿಸಲಾಗಿದೆ. 22.95 ಲಕ್ಷ ಮಂದಿ ಈಗಾಗಲೇ ಮೊದಲ ಡೋಸ್ ಪಡೆದುಕೊಂಡಿದ್ದಾರೆ. ಶೇ 72 ರಷ್ಟು ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 1.95 ಲಕ್ಷ ಮಂದಿ (ಶೇ 6.17) ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ.

ಕೊಡಗು (ಶೇ 98), ಉಡುಪಿ (ಶೇ 88), ದಕ್ಷಿಣ ಕನ್ನಡ (ಶೇ 84), ಉತ್ತರ ಕನ್ನಡ (ಶೇ 84), ಕೋಲಾರ (ಶೇ 83), ಬಾಗಲಕೋಟೆ (ಶೇ 82), ಶಿವಮೊಗ್ಗ (ಶೇ 79), ಧಾರವಾಡ (ಶೇ 78), ಬೆಂಗಳೂರು ಗ್ರಾಮಾಂತರ (ಶೇ 78), ಬೆಳಗಾವಿ (ಶೇ 77), ಚಿಕ್ಕಬಳ್ಳಾಪುರ (ಶೇ 76), ಚಿತ್ರದುರ್ಗ (ಶೇ 76) ಹಾಗೂ ಚಿಕ್ಕಮಗಳೂರು (ಶೇ 75) ಜಿಲ್ಲೆಯಲ್ಲಿ ಶೇ 75 ಕ್ಕಿಂತ ಹೆಚ್ಚಿನ ಮಂದಿಗೆ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ.

ಭೂ ವಿವಾದ: ಪಾಕ್‌ನಲ್ಲಿ ಹಿಂದೂ ಉದ್ಯಮಿ ಹತ್ಯೆ

ಕರಾಚಿ(ಪಿಟಿಐ): ಭೂ ವಿವಾದಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹಿಂದೂ ಉದ್ಯಮಿ ಸತನ್ ಲಾಲ್ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ ಎಂದು ‘ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ’ ವರದಿ ಮಾಡಿದೆ. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆದ ಇತ್ತೀಚಿನ ದಾಳಿ ಇದಾಗಿದೆ.

ಈ ಹತ್ಯೆಯನ್ನು ವಿರೋಧಿಸಿ ಅಲ್ಪಸಂಖ್ಯಾತ ಸಮುದಾಯದವರು ಗುರುವಾರ ಪ್ರತಿಭಟನೆ ನಡೆಸಿ, ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿಪಡಿಸಿದರು.

ಲಾಲ್ ಅವರ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರೋಪಿ ಬಚಲ್ ದಹರ್ ಮತ್ತು ಆತನ ಸಹಚರರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ವರದಿಯಾಗಿದೆ.

ಬೋಪಣ್ಣ–ರಾಮ್ ಜೋಡಿಗೆ ಜಯ

ಪುಣೆ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ರಾಮ್‌ಕುಮಾರ್ ರಾಮನಾಥನ್ ಜೋಡಿ ಇಲ್ಲಿ ನಡೆಯುತ್ತಿರುವ ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಗೆಲುವು ಸಾಧಿಸಿದ್ದಾರೆ. ಸಾಕೇತ್ ಮೈನೇನಿ ಮತ್ತು ಶಶಿಕುಮಾರ್ ಮುಕುಂದ್ ಕೂಡ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಎರಡನೇ ಶ್ರೇಯಾಂಕದ ಬೋಪಣ್ಣ ಮತ್ತು ರಾಮ್‌ಕುಮಾರ್ 6-3, 3-6, 10-7ರಲ್ಲಿ ಜೆಮಿ ಸೆರೆಟನಿ ಮತ್ತು ನಿಕೋಲಸ್ ಮೊನ್ರೊ ವಿರುದ್ಧ ಜಯ ಗಳಿಸಿದರು. ಸಾಕೇತ್ ಮತ್ತು ಶಶಿಕುಮಾರ್ 6-3, 6-4ರಲ್ಲಿ ಭಾರತದವರೇ ಆದ ದಿವಿಜ್ ಶರಣ್–ಯೂಕಿ ಬಾಂಭ್ರಿ ಅವರನ್ನು ಮಣಿಸಿದರು.

ಅಡಿಲೇಡ್ ಓಪನ್‌ನಲ್ಲಿ ಪ್ರಶಸ್ತಿ ಗೆಲ್ಲುವ ಮೂಲಕ ಈ ವರ್ಷದಲ್ಲಿ ಶುಭಾರಂಭ ಮಾಡಿರುವ ಬೋಪಣ್ಣ ಮತ್ತು ರಾಮ್‌ಕುಮಾರ್ ಇಲ್ಲಿ ಮೊದಲ ಸೆಟ್‌ನ ಆರಂಭದಲ್ಲಿ 1–0 ಮುನ್ನಡೆ ಸಾಧಿಸಿದ್ದರು. ಆದರೆ ಅಮೆರಿಕ ಜೋಡಿ ತಿರುಗೇಟು ನೀಡಿ ಸಮಬಲ ಸಾಧಿಸುವಲ್ಲಿ ಯಶಸ್ವಿಯಾಯಿತು. ನಂತರ ಭಾರತದ ಆಟಗಾರರು ಪಟ್ಟು ಬಿಡದೆ ಆಡಿ ಎದುರಾಳಿಗಳನ್ನು ಮಣಿಸಿದರು.

ಡೆನಿಸ್ ನೊವಾಕ್ ಮತ್ತು ಜೊವೊ ಸೋಸಾ ಗಾಯದ ಸಮಸ್ಯೆಯಿಂದಾಗಿ ಟೂರ್ನಿಯಿಂದ ಹಿಂದೆ ಸರಿದಿದ್ದರು. ಹೀಗಾಗಿ ಸಾಕೇತ್ ಮತ್ತು ಶಶಿಕುಮಾರ್ ಅವರಿಗೆ ಮುಖ್ಯ ಸುತ್ತಿಗೆ ನೇರ ಪ್ರವೇಶ ಲಭಿಸಿತ್ತು. ಇದೇ ಮೊದಲ ಬಾರಿ ಜೊತೆಯಾಗಿ ಆಡಿದ ಈ ಜೋಡಿ ಮೊದಲ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಎದುರಾಳಿಗಳಿಂದ ಸ್ವಲ್ಪ ಪ್ರತಿರೋಧ ಕಂಡುಬಂದರೂ ಛಲದಿಂದ ಆಡಿದ ಸಾಕೇತ್–ಶಶಿಕುಮಾರ್ ಗೆಲುವಿನ ನಗೆ ಸೂಸಿದರು.

ಗಿಯಾನ್ ಲೂಕಾಗೆ ಸೋಸಾ ಆಘಾತ: ಸಿಂಗಲ್ಸ್‌ನಲ್ಲಿ ಪೋರ್ಚುಗೀಸ್ ಆಟಗಾರ ಸೋಸಾ ಅವರು ಮೂರನೇ ಶ್ರೇಯಾಂಕದ ಗಿಯಾನ್‌ಲೂಕಾ ಮೇಜರ್‌ಗೆ ಆಘಾತ ನೀಡಿದರು. ಮೊದಲ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿದ ಸೋಸಾ ನಂತರ ಅಮೋಘ ಆಟವಾಡಿ 4-6, 6-3, 7-6 (6-4)ರಲ್ಲಿ ಗೆಲುವು ಸಾಧಿಸಿದ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇರಿಸಿದರು. ತಮಗಿಂತ ಹೆಚ್ಚು ರ್‍ಯಾಂಕಿಂಗ್ ಹೊಂದಿರುವ ಇಟಲಿಯ ಪ್ರತಿಭೆ ಲೊರೆನ್ಸೊ ಮುಸೆಟಿ ಅವರನ್ನು 7-6 (7-3), 3-6, 6-3ರಲ್ಲಿ ಮಣಿಸಿದ ವಿಶ್ವ ಕ್ರಮಾಂಕದಲ್ಲಿ 140ನೇ ಸ್ಥಾನದಲ್ಲಿರುವ ಆಟಗಾರ ಅಲೆಕ್ಸಾಂಡರ್ ವುಕಿಚ್ ಕೂಡ ಎಂಟರ ಘಟ್ಟ ಪ್ರವೇಶಿಸಿದರು.

ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿರುವ ಸ್ಥಳೀಯ ಆಟಗಾರ ಅರ್ಜುನ್ ಖಾಡೆ ಭಾರತದ ಪುರವ್ ರಾಜಾ ಜೊತೆಗೂಡಿ ಆಡುವರು.

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿ: ಮೂವರ ಪರಿಗಣನೆ

ಸಾಕೇತ್ ಮೈನೇನಿಗೆ ವೈಲ್ಡ್ ಕಾರ್ಡ್ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಆಟಗಾರರಲ್ಲಿ ಒಬ್ಬರಾದ ಸಾಕೇತ್ ಮೈನೇನಿ ಅವರಿಗೆ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ನೀಡಲಾಗಿದೆ.

ಇದೇ ಏಳರಂದು ಆರಂಭವಾಗಲಿರುವ ಟೂರ್ನಿಯ ಮುಖ್ಯ ಸುತ್ತಿಗೆ ಮೂರು ವೈಲ್ಡ್ ಕಾರ್ಡ್ ಪ್ರವೇಶಗಳನ್ನು ನೀಡಲಾಗಿದೆ. ಉಳಿದೆರಡು ವೈಲ್ಡ್ ಕಾರ್ಡ್‌ಗಳ ವಿವರಗಳನ್ನು ಶುಕ್ರವಾರ ನೀಡಲಾಗುವುದು ಎಂದು ಆಯೋಜಕರು ತಿಳಿಸಿದ್ದಾರೆ.

ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್‌ನ 2018ರ ಆವೃತ್ತಿಯಲ್ಲೂ ಸಾಕೇತ್ ಅವರು ವೈಲ್ಡ್ ಕಾರ್ಡ್ ಪ್ರವೇಶ ಪಡೆದುಕೊಂಡಿದ್ದರು. ಆ ವರ್ಷ ಫೈನಲ್ ಪ್ರವೇಶಿಸಿದ್ದರು. ಪ್ರಜ್ಞೇಶ್ ಗುಣೇಶ್ವರನ್ ಎದುರು ಸೋತು ರನ್ನರ್ ಅಪ್ ಆಗಿದ್ದರು.

‘ಎರಡು ವರ್ಷಗಳಲ್ಲಿ ಭಾರತದಲ್ಲಿ ಹೆಚ್ಚು ಟೂರ್ನಿಗಳು ನಡೆಯಲಿಲ್ಲ. ಹೀಗಾಗಿ ಈ ಅವಧಿ ಇಲ್ಲಿನ ಟೆನಿಸ್ ಪಟುಗಳಿಗೆ ಸವಾಲಿನದ್ದಾಗಿತ್ತು. ಪ್ರತಿಕೂಲ ಸನ್ನಿವೇಶದಲ್ಲೂ ಕರ್ನಾಟಕ ರಾಜ್ಯ ಟೆನಿಸ್ ಸಂಸ್ಥೆಯವರು ಅನೇಕ ಟೂರ್ನಿಗಳನ್ನು ಆಯೋಜಿಸಿರುವುದು ವೈಯಕ್ತಿಕವಾಗಿ ನನಗೆ ಖುಷಿ ತಂದಿದೆ. ಭಾರತದಲ್ಲಿ ಯಾವುದೇ ಟೂರ್ನಿ ನಡೆದರೂ ನನ್ನಂಥ ಅನೇಕ ಆಟಗಾರರಿಗೆ ಸಂಬಂಧಿಸಿ ಬೋನಸ್ ಇದ್ದಂತೆ’ ಎಂದು ಸಾಕೇತ್ ಅವರು ಹೇಳಿದರು.

ಸಾಕೇತ್ ಮೈನೇನಿ –ಪ್ರಜಾವಾಣಿ ಚಿತ್ರ

ಅವರು ಸದ್ಯ ಪುಣೆಯಲ್ಲಿ ಮಹಾರಾಷ್ಟ್ರ ಓಪನ್ ಎಟಿಪಿ 250 ಟೂರ್ನಿಯಲ್ಲಿ ಆಡುತ್ತಿದ್ದಾರೆ.

‘ಮುಖ್ಯ ಸುತ್ತಿಗೆ ವೈಲ್ಡ್ ಕಾರ್ಡ್ ಪ್ರವೇಶ ನೀಡುವಾಗ ನನ್ನ ಹೆಸರು ಪರಿಗಣಿಸಿದ್ದಕ್ಕೆ ಸಂಘಟಕರಿಗೆ ಕೃತಜ್ಞತೆ ಸಲ್ಲಿಸಲು ಇಷ್ಟಪಡುತ್ತೇನೆ. ಬೆಂಗಳೂರಿನಲ್ಲಿ ಅನೇಕ ಟೂರ್ನಿಗಳಲ್ಲಿ ಪಾಲ್ಗೊಂಡಿದ್ದೇನೆ. ವೃತ್ತಿಬದುಕಿನಲ್ಲಿ ಕೆಲವು ಉತ್ತಮ ಫಲಿತಾಂಶಗಳನ್ನೂ ಕಂಡಿದ್ದೇನೆ. ಹೀಗಾಗಿ ಬೆಂಗಳೂರು ಓಪನ್ ಟೂರ್ನಿಯಲ್ಲಿ ಆಡಲು ಉತ್ಸುಕನಾಗಿದ್ದೇನೆ. ವೈಲ್ಡ್ ಕಾರ್ಡ್ ಪ್ರವೇಶದ ಅನುಕೂಲವನ್ನು ಪಡೆದುಕೊಂಡು ಉತ್ತಮ ಸಾಮರ್ಥ್ಯ ತೋರಲು ಪ್ರಯತ್ನಿಸುವೆ’ ಎಂದು 34 ವರ್ಷದ ಸಾಕೇತ್ ಭರವಸೆಯಿಂದ ನುಡಿದರು.

2016ರಲ್ಲಿ ಜೀವನಶ್ರೇಷ್ಠ 113ನೇ ರ್‍ಯಾಂಕಿಂಗ್ ಗಳಿಸಿಕೊಂಡಿದ್ದ ಸಾಕೇತ್ ಈಗ 561ನೇ ಸ್ಥಾನದಲ್ಲಿದ್ದಾರೆ. ಚಾಲೆಂಜರ್ ಟೂರ್ನಿಗಳಲ್ಲಿ ಎರಡು ಸಿಂಗಲ್ಸ್ ಮತ್ತು ಆರು ಡಬಲ್ಸ್ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

‘ಡೇವಿಸ್ ಕಪ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಸಾಕೇತ್ 2018ರಲ್ಲಿ ಫೈನಲ್ ಪ್ರವೇಶಿಸಿದ್ದರು. ದೇಶದ ಯುವ ಟೆನಿಸ್ ಪಟುಗಳಿಗೆ ಆದರ್ಶವಾಗಿರುವ ಅವರು ಈ ಬಾರಿ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆ ಇದೆ’ ಎಂದು ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್ ಹೇಳಿದರು.

ರಾಜ್ಯ ಪ್ರವಾಸೋದ್ಯಮ ಇಲಾಖೆ, ಎಸಿಟಿ ಫೈಬರ್‌ನೆಟ್ ಮತ್ತು ಜೆಎಸ್‌ಡಬ್ಲ್ಯು ಮುಖ್ಯ ಪ್ರಾಯೋಜಕತ್ವವನ್ನು ಹೊಂದಿರುವ ಟೂರ್ನಿಗೆ ಭಾರತದ ಪ್ರಜ್ಞೇಶ್ ಗುಣೇಶ್ವರನ್ ಮತ್ತು ರಾಮ್‌ಕುಮಾರ್ ರಾಮನಾಥನ್ ನೇರ ಪ್ರವೇಶ ಪಡೆದುಕೊಂಡಿದ್ದಾರೆ. ಅರ್ಹತಾ ಸುತ್ತಿನ ಪಂದ್ಯಗಳು ಆರರಂದು ನಡೆಯಲಿವೆ.

ಟಾರ್ಪೆಡೋಸ್ ತಂಡದ ಶಿಬಿರದಲ್ಲಿ ಸಿಂಧು, ರಮಣ

ಬೆಂಗಳೂರು: ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಬ್ಯಾಡ್ಮಿಂಟನ್ ತಾರೆ ಪಿ.ವಿ.ಸಿಂಧು ಮತ್ತು ಅವರ ತಂದೆ, ಭಾರತ ವಾಲಿಬಾಲ್ ತಂಡದ ಮಾಜಿ ಆಟಗಾರ ಪಿ.ವಿ.ರಮಣ ಅವರು ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಆಡುವ ಬೆಂಗಳೂರು ಟಾರ್ಪೆಡೋಸ್ ತಂಡವನ್ನು ಭೇಟಿಯಾದರು.

ಏಷ್ಯಾಕಪ್: ಚೀನಾ ಫೈನಲ್‌ಗೆ

ಪುಣೆ (ಪಿಟಿಐ): ಎರಡು ಬಾರಿಯ ಚಾಂಪಿಯನ್ ಜಪಾನ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿದ ಚೀನಾ ಎಎಫ್‌ಸಿ ಮಹಿಳೆಯರ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶಿಸಿತು. ಪ್ರಶಸ್ತಿ ಸುತ್ತಿನಲ್ಲಿ ಅದು ಕೊರಿಯಾವನ್ನು ಎದುರಿಸಲಿದೆ.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಒಂದೊಂದು ಗೋಲು ಗಳಿಸಿ ಸಮಬಲ ಸಾಧಿಸಿದ್ದವು. ಹೀಗಾಗಿ ಹೆಚ್ಚುವರಿ ಅವಧಿಗೆ ಮೊರೆಹೋಗಬೇಕಾಯಿತು. ಈ ಅವಧಿಯಲ್ಲೂ ಎರಡೂ ತಂಡಗಳು ತಲಾ ಒಂದೊಂದು ಗೋಲು ಗಳಿಸಿದವು. ಪಂದ್ಯ 2–2ರಲ್ಲಿ ಸಮ ಆದ ಕಾರಣ ಪೆನಾಲ್ಟಿ ಶೂಟೌಟ್ ಮೊರೆಹೋಗಲಾಯಿತು. ಚೀನಾ 4–3ರಲ್ಲಿ ಜಯ ಗಳಿಸಿತು.

ಸತತ ಏಳು ಬಾರಿ ಚೀನಾ ಪ್ರಶಸ್ತಿ ಗೆದ್ದುಕೊಂಡಿತ್ತು. 2006ರಲ್ಲಿ ಮತ್ತೊಮ್ಮೆ ಚಾಂಪಿಯನ್ ಆಗಿತ್ತು. ಜಪಾನ್ 2014 ಹಾಗೂ 2018ರಲ್ಲಿ ಪ್ರಶಸ್ತಿ ಗಳಿಸಿತ್ತು. ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯೊಂದಿಗೆ ಈ ಬಾರಿ ಕಣಕ್ಕೆ ಇಳಿದಿತ್ತು. ಆರಂಭದಿಂದಲೇ ಹೋರಾ ಟಕಾರಿ ಆಟವಾಡಿದರೂ ಲಭಿಸಿದ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಲು ತಂಡಕ್ಕೆ ಸಾಧ್ಯವಾಗಲಿಲ್ಲ. ಮತ್ತೊಂದು ಸೆಮಿ-ಫೈನಲ್‌ನಲ್ಲಿ ಕೊರಿಯಾ 2–0ಯಿಂದ ಫಿಲಿಪ್ಪೀನ್ಸ್ ವಿರುದ್ಧ ಜಯ ಗಳಿಸಿತ್ತು.

ಚೀನಾದ ವ್ಯಾಂಗ್ ಕ್ಸಿಯಾಂಕ್ಸಿ ಚೆಂಡಿನೊಂದಿಗೆ ಮುನ್ನಡೆದರು –ಎಎಫ್‌ಪಿ ಚಿತ್ರ

E-BOOK TODAY AT WWW.MARUTISUZUKI.COM OR VISIT YOUR NEAREST MARUTI SUZUKI DEALERSHIP.

MARUTI SUZUKI AUTHORISED DEALERS: BENGALURU: SURAKSHAA CAR CARE: ELECTRONICS CITY, KORAMANGALA, BANGARPET, ATTIBELE, SRINIVASAPURA, PH: 8884442299. VARUN MOTORS: MALLESHWARAM, HEBBAL, 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, RAMANAGARAM, CHANNAPATNA, KANAKPURA, BANNERGATTA, BIDADI: 95909 90011. KATARIA: KANAKAPURA ROAD, PH: 78990 40000. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

Accessories and features shown in the pictures may not be part of the standard equipment and may vary according to the variant. Images are for illustration purpose only. Terms and conditions apply. The terms and conditions are subject to change without any prior notice. For more details, please contact your nearest ARENA dealership. Colors shown may vary from actual body colors due to printing on paper. Black Glass Shade on the vehicle is due to the lighting effect. #As certified by Test Agency Under Rule 115 (G) of CMVR 1989.